
ಲಂಕೇಶ್

ಡಿಸೆಂಬರ್ 2, 2009 ರೂ. 12/-

ಹೊಸ ಕಾಲಂ
ಬಿ.ಎಂ.ಬಶೀರ್




ಬ್ಬಗೋಡಿ
ಕ್ಷಸ
ದರ್ಸ್




ಯಡ್ಡಿ
ಸಂಕಟ






ಪವರ್‌ಗಾಗಿ
ಆಸ್ಫೋಟಿಕರ್
ಕಾಗೇರಿ
ಗುದ್ದಾಟ




ಹರಿಪ್ರಿಯಾ ಜೊತೆ

ಮಗನ ಚೆಲ್ಲಾಟ



ನಂತ್‌ಗೆ
ಟ್ಟರ
ಟ್ಟು



ಜನಿವಾರಿ
ಶಿವದಾರಿಗಳ
ಸಮನ್ವಯ
ಸಮಿತಿ

ಲಂಕೇಶ್

ಪ್ರಳಯವೆಂಬ ಮೌಢ್ಯ - ಪ್ರಳಯ ಭೀತಿ ಎಂಬ ಉದ್ಯಮ!

ಪ್ರಳಯ ಭೀತಿಯನ್ನು ಜನರಲ್ಲಿ ಹುಟ್ಟಿಸಿದ ಈ ಮಾಧ್ಯಮಗಳು ತಮ್ಮ ಮಾರುಕಟ್ಟೆಯನ್ನು ಮಾತ್ರ ಇನ್ನಿಲ್ಲದಷ್ಟು ಹೆಚ್ಚಿಸಿಕೊಂಡಿವೆ. ಆದ್ದರಿಂದಲೇ ಪ್ರಳಯವೆಂಬುದು ನಿಜವೋ ಸುಳ್ಳೋ ಎಂಬುದು ನಂತರದ ಮಾತಾದರೂ ಪ್ರಳಯ ಭೀತಿ ಮಾತ್ರ ಈಗ ಒಂದು ದೊಡ್ಡ ಉದ್ಯಮವೇ ಆಗಿಬಿಟ್ಟಿದೆ. ಜನರಲ್ಲಿ ಈ ಉದ್ಯಮಗಳು ಕಾಲಕಾಲಕ್ಕೆ ಈ ಭೀತಿಯನ್ನು ಹುಟ್ಟಿಸಿ ಲಾಭ ದೋಚುತ್ತಲೇ ಬರುತ್ತಿವೆ. ಆದರೆ ಯಾವ ಮಾಧ್ಯಮಗಳೂ ಅದರ ಸತ್ಯಾಸತ್ಯತೆಯ ಬಗ್ಗೆ ಮಾತ್ರ ಯಾವ ವೈಜ್ಞಾನಿಕ ವಿಶ್ಲೇಷಣೆಯನ್ನೂ ಮಾಡಲೇ ಇಲ್ಲ.

ನೋ ಕಾಮೆಂಟ್ಸ್

"ಹಿಂದೂ ಬಾಂಧವರು 'ಫತ್ವಾ' ದ ಅರ್ಥವನ್ನೂ, ಮುಸ್ಲಿಂ ಬಾಂಧವರು 'ವಂದೇ ಮಾತರಂ' ಗೀತೆಯ ಅರ್ಥವನ್ನೂ ಮನಗಾಣಬೇಕು. 'ಫತ್ವಾ' ಎಂದರೆ ಆದೇಶವಲ್ಲ, ಉಪದೇಶ ಎಂದದರರ್ಥ. 'ವಂದೇ ಮಾತರಂ'ನಲ್ಲಿ ಮುಸ್ಲಿಮರನ್ನು ಅವಹೇಳನ ಮಾಡುವ ಸಾಲುಗಳಿರುವುದು ನಿಜ. ಅದನ್ನು ಹಾಡದಿದ್ದರೆ ಒಳ್ಳೆಯದು ಎಂಬ ಸಲಹೆ ಅದು. ಆದೇಶವಲ್ಲ."

- ಶರ್ಯಾರ್ ಖಾನ್, ಉರ್ದು ಚಿಂತಕ

"ಮಾಧ್ಯಮ ಕ್ಷೇತ್ರಗಳಲ್ಲಿ ರಾಜಕೀಯ ವ್ಯಕ್ತಿಗಳು ಬಂಡವಾಳ ಹೂಡುವುದು ಅಪಾಯಕಾರಿ."

- ರಾಜ್ಯಪಾಲ ಭಾರದ್ವಾಜ್

"ಮುಖ್ಯಮಂತ್ರಿ ಯಡಿಯೂರಪ್ಪನವರ ಸರ್ಕಾರ ಕಾಂಗ್ರೆಸ್ ಕೈಯಲ್ಲಿದೆ. ನೆಪಮಾತ್ರಕ್ಕೆ ರೆಡ್ಡಿಗಳ ಹೆಸರು ಕೇಳಿ ಬರುತ್ತಿದೆ."

- ಎಚ್. ಡಿ. ದೇವೇಗೌಡ

"ಯಾವುದನ್ನು ಇವತ್ತು ಸರ್ಕಾರ maoist ಕಾರಿಡಾರ್ ಎಂದು ಕರೆಯುತ್ತಿದೆಯೋ ಅದನ್ನು ವಾಸ್ತವದಲ್ಲಿ MoU ಗಳ ಕಾರಿಡಾರ್ ಎಂದು ಕರೆಯಬಹುದು. ಅಲ್ಲಿರುವ ಪ್ರತಿ ನದಿ, ಪರ್ವತ, ಕಾನನಗಳ ಮೇಲೆಯೂ ಒಂದು MoU ಮಾಡಿಕೊಳ್ಳಲಾಗಿದೆ."

ಅರುಂಧತಿ ರಾಯ್

"ಬಟಿ ಬೀಜ ಉತ್ಪಾದನೆಯಲ್ಲಿ ತೊಡಗಿರುವ ಮಹಿಕೋ ಕಂಪನಿ, ಬಟಿ ಬೆಳೆಗೆ ಸಂಬಂಧಿಸಿದಂತೆ ನಡೆಸಬೇಕಾದ ಯಾವುದೇ ಅಂತರರಾಷ್ಟ್ರೀಯ ಪರೀಕ್ಷಾ ಸಂಶೋಧನೆಗಳನ್ನು ನಡೆಸಿಯೇ ಇಲ್ಲ."

- ಗಿಲ್ಲೆಸ್-ಎರಿಕ್ ಸೆರಾಲಿನಿ, ಫ್ರಾನ್ಸಿನ ಜೈವಿಕ ವಿಜ್ಞಾನಿ

ನಂಬಿದ್ರೆ ನಂಬಿ ಬಿಟ್ರೆಬಿಡಿ

"ಸುದ್ದಿಗಳು, ಪುಟಗಳು ರಾಜಕೀಯ ವ್ಯಕ್ತಿಗಳಿಗೆ ಮಾರಾಟವಾಗುತ್ತಿವೆ. ಮಾತ್ರವಲ್ಲ, ಸಂಪಾದಕೀಯ ಪುಟಗಳೂ ಸಹ ರಾಜಕೀಯ ವ್ಯಕ್ತಿಗಳಿಗೆ ಮಾರಾಟವಾಗುತ್ತಿವೆ."

- ಕೆ. ಸತ್ಯನಾರಾಯಣ, ಹಿರಿಯ ಪತ್ರಕರ್ತ

"ಉತ್ತರ ಕರ್ನಾಟಕದಲ್ಲಿ ನೆರೆ ಹಾವಳಿಗೊಳಗಾದ ಪ್ರದೇಶಗಳಲ್ಲಿ ಆಗಿರುವ ಬೆಳೆಹಾನಿಯ ಬಗ್ಗೆ ಇನ್ನೂ ಅಂದಾಜನ್ನು ತಯಾರಿಸಲಾಗಿಲ್ಲ."

- ರವೀಂದ್ರನಾಥ್, ಕೃಷಿ ಮಂತ್ರಿ

ಹಾಗಿದ್ದಲ್ಲಿ ಉಳಿದವನ್ನೂ ಬ್ಯಾನ್ ಮಾಡಿಬಿಡಿ!

"ಇನ್ನು ಮುಂದೆ ರೈಲ್ವೆ ಇಲಾಖೆಯು ಬಿಬೋ, ಅಕ್ವಾಫಿನಾ, ಕಿನ್ಲೆ, ಕಿಂಗ್‌ಫಿಷರ್ ಬ್ರಾಂಡಿನ ನೀರನ್ನು ಮಾತ್ರ ಪ್ರಯಾಣಿಕರಿಗೆ ಒದಗಿಸಬೇಕು."

ರೈಲ್ವೆ ಇಲಾಖೆ ಆದೇಶ

ಇಷ್ಟು ಧೈರ್ಯ ಭಾರತದ ರಾಜಕಾರಣಿಗಳಿಗೆ ಇದ್ದಿದ್ದರೆ!


"ಅಮೆರಿಕ ಕ್ಯೋಟೋ ಒಪ್ಪಂದವನ್ನು ರದ್ದು ಮಾಡುವ ಎಲ್ಲಾ ಹುನ್ನಾರಗಳನ್ನೂ ನಡೆಸುತ್ತಿದೆ. ಅಭಿವೃದ್ಧಿ ಹೊಂದಿದ ದೇಶಗಳು ಈ ಜಾಗತಿಕ ಸಮಸ್ಯೆಯನ್ನು ಎದುರಿಸಲು ಎದ್ದು ನಿಲ್ಲಬೇಕೇ ಹೊರತು ಅಮೆರಿಕದ ಬಾಲಂಗೋಚಿಯಾಗಬಾರದು."

ಲುಮುಂಬಾ ದಿ ಅಪಿನ್, ಸೂಡಾನ್ ದೇಶದ ಪ್ರತಿನಿಧಿ

ಇದು ತಮಗೆ ಅರ್ಥವಾಗಿದೆಯೇ ಸ್ವಾಮಿಗಳೇ!

"ಬಾಹ್ಯ ವಸ್ತುಗಳಿಂದ ನಿಜವಾದ ಸುಖ ಸಿಗುವುದಿಲ್ಲ, ಅದನ್ನು ಅಂತರಂಗದಲ್ಲಿ ಕಾಣಬೇಕು. ಇರುವಷ್ಟರಿಂದಲೇ ತೃಪ್ತಿಪಡುವ ಮನೋಭಾವವನ್ನು ರೂಢಿಸಿಕೊಳ್ಳಬೇಕು."

ಬಾಲಗಂಗಾಧರ ಸ್ವಾಮೀಜಿ



ಜಗತ್ತಿನಲ್ಲಿ ಜೀವ ಸೃಷ್ಟಿಗೆ ಮತ್ತು ಜೀವ ವಿಕಾಸಕ್ಕೆ ಇಲ್ಲಿನ ಭೌತಿಕ ಪರಿಸ್ಥಿತಿ ಮತ್ತು ಸಂದರ್ಭಗಳು ಕಾರಣವೇ ಹೊರತು ಹೊರಗಿನ ಶಕ್ತಿಗಳಲ್ಲ ಎಂದು ನಿಸ್ಸಂಶಯವಾಗಿ ಸಾಬೀತು ಮಾಡಿದ ಚಾರ್ಲ್ಸ್ ಡಾರ್ವಿನ್ನನ ಜೀವ ವಿಕಾಸ ವಾದಕ್ಕೆ ಇದೇ 2009ಕ್ಕೆ 150 ವರ್ಷಗಳು ತುಂಬುತ್ತವೆ. ಡಾರ್ವಿನ್ ಒಬ್ಬ ಪಾದ್ರಿ. ಆದರೆ ಜಗತ್ತು ಮಾಯೆಯಲ್ಲ ಎಂಬ ಸತ್ಯವನ್ನು ಹೊರಗೆಳೆದದ್ದು ಈ ಪಾದ್ರಿಯೇ! ಅದೇ ರೀತಿ ಜಗತ್ತು ಹೇಗೆ ಹುಟ್ಟಿರಬಹುದು ಎಂಬ ಬಗ್ಗೆಯೂ ಜಗತ್ತಿನ ವಿಜ್ಞಾನಿಗಳೆಲ್ಲಾ ಸೇರಿ ಭೂಗರ್ಭದಲ್ಲಿ ಪರಮಾಣುಗಳನ್ನು ಢಿಕ್ಕಿ ಹೊಡೆಸಿ ಬಿಗ್‌ಬ್ಯಾಂಗ್‌ನ ರಹಸ್ಯಗಳನ್ನು ಅರ್ಥಮಾಡಿಕೊಳ್ಳಲು ಪ್ರಾರಂಭಿಸಿದ್ದಾರೆ. ಚಂದ್ರನಲ್ಲಿ ನೀರಿನ ಕುರುಹುಗಳನ್ನೂ ಕಂಡಿದ್ದಾರೆ. ಹೀಗೆ ಒಂದೆಡೆ ಜಗತ್ತು ಜಗತ್ತಿನ ರಹಸ್ಯಗಳನ್ನು ಅರ್ಥಮಾಡಿಕೊಳ್ಳುವಲ್ಲಿ ಹೊಸ ಸಾಧ್ಯತೆಗಳನ್ನು ಕಂಡುಕೊಳ್ಳುತ್ತಿರುವಂತೆ ಮತ್ತೊಂದೆಡೆ 2012ಕ್ಕೆ ಜಗತ್ತು ಪ್ರಳಯವಾಗುತ್ತದೆ ಎಂಬ ದೊಡ್ಡ ಉದ್ಯಮಗಳ ಪ್ರೇರಿತ ಪ್ರಚಾರವೂ ದೊಡ್ಡಮಟ್ಟದಲ್ಲಿ ಪ್ರಾರಂಭವಾಗಿಬಿಟ್ಟಿದೆ.

ಕನ್ನಡದಲ್ಲಿ ಟಿವಿ 'ಒಂಬತ್ತು' ಮತ್ತು ಹಾಯ್ ಬೆಂಗಳೂರು ಇದಕ್ಕೆ ಇನ್ನಿಲ್ಲದ ಪ್ರಚಾರ ಕೊಟ್ಟಮೇಲೆ ಬಹಳಷ್ಟು ಜನ ಅಮಾಯಕರು ಬದುಕಿನಲ್ಲಿ ಆಸಕ್ತಿಯನ್ನೇ ಕಳೆದುಕೊಳ್ಳುತ್ತಿದ್ದಾರೆ. ವಿಪರ್ಯಾಸವೆಂದರೆ 2012ಕ್ಕೆ ಪ್ರಳಯ ಆಗಿಯೇ ಬಿಡುತ್ತದೆಂದು ಊರತುಂಬಾ ಪ್ರಚಾರ ಮಾಡಿದ ಟಿವಿ 'ಒಂಬತ್ತು' ಚಾನೆಲ್ ಆಗಲೀ, 'ಹಾಯ್ ಬೆಂಗಳೂರ್'ನ ರವಿ ಬೆಳಗೆರೆಯಾಗಲೀ ಪ್ರಳಯವಾಗಿ ಬಿಡುತ್ತದೆಂದು ನಂಬಿಯೂ ಇಲ್ಲ, ಅದಕ್ಕೆ ತಕ್ಕಹಾಗೆ ತಮ್ಮ ಕಾರ್ಯಕ್ರಮಗಳನ್ನು 2012ಕ್ಕೆ ಸೀಮಿತಗೊಳಿಸಿಕೊಂಡಿಯೂ ಇಲ್ಲ, ವಾಸ್ತವವಾಗಿ ಅವರಿಬ್ಬರ ಯೋಜನೆಗಳೂ ಮುಂದಿನ ಇಪ್ಪತ್ತು ವರ್ಷಕ್ಕೇ ಯೋಜನೆಗೊಂಡಿವೆ!

ಆದರೆ ಪ್ರಳಯ ಭೀತಿಯನ್ನು ಜನರಲ್ಲಿ ಹುಟ್ಟಿಸಿದ ಈ ಮಾಧ್ಯಮಗಳು ತಮ್ಮ ಮಾರುಕಟ್ಟೆಯನ್ನು ಮಾತ್ರ ಇನ್ನಿಲ್ಲದಷ್ಟು ಹೆಚ್ಚಿಸಿಕೊಂಡಿವೆ. ಆದ್ದರಿಂದಲೇ ಪ್ರಳಯವೆಂಬುದು ನಿಜವೋ ಸುಳ್ಳೋ ಎಂಬುದು ನಂತರದ ಮಾತಾದರೂ ಪ್ರಳಯ ಭೀತಿ ಮಾತ್ರ ಈಗ ಒಂದು ದೊಡ್ಡ ಉದ್ಯಮವೇ ಆಗಿಬಿಟ್ಟಿದೆ.

ಜನರಲ್ಲಿ ಈ ಉದ್ಯಮಗಳು ಕಾಲಕಾಲಕ್ಕೆ ಈ ಭೀತಿಯನ್ನು ಹುಟ್ಟಿಸಿ ಲಾಭ ದೋಚುತ್ತಲೇ ಬರುತ್ತಿವೆ. ಆದರೆ ಯಾವ ಮಾಧ್ಯಮಗಳೂ ಅದರ ಸತ್ಯಾಸತ್ಯತೆಯ ಬಗ್ಗೆ ಮಾತ್ರ ಯಾವ ವೈಜ್ಞಾನಿಕ ವಿಶ್ಲೇಷಣೆಯನ್ನೂ ಮಾಡಲೇ ಇಲ್ಲ. ವಾಸ್ತವವಾಗಿ ರೂಪರ್ಟ್ ಮುರ್ಡೋಕ್ ಎಂಬ ವಿಶ್ವದ ಅತಿದೊಡ್ಡ ಮಾಧ್ಯಮ ಉದ್ಯಮಿ ತನ್ನ 'ಹಿಸ್ಟರಿ ಚಾನೆಲ್'ನಲ್ಲಿ 2006ರಲ್ಲಿ ಇದರ ಬಗ್ಗೆ ಒಂದು ಕಾರ್ಯಕ್ರಮ ಪ್ರಸಾರ ಮಾಡುವ ತನಕ ಜಗತ್ತು ಇದರ ಬಗ್ಗೆ ತಲೆಯನ್ನೇ ಕೆಡಿಸಿಕೊಂಡಿರಲಿಲ್ಲ. ಆ ಕಾರ್ಯಕ್ರಮದಲ್ಲಿ ಮಧ್ಯ ಅಮೆರಿಕದ ಮೂಲನಿವಾಸಿಗಳ ಮಾಯನ್ ಜನಾಂಗದ ನಂಬಿಕೆಯ ಪ್ರಕಾರ ಜಗತ್ತು ಇದೇ 2012ರ ಡಿಸೆಂಬರ್ 21ರಂದು ಅಂತ್ಯ ಕಾಣುತ್ತದೆ ಎಂದು ಬಿತ್ತರಿಸಲಾಗಿತ್ತು. ಅದಾದನಂತರ ಜಗತ್ತಿನಾದ್ಯಂತ ಇಂಟರ್‌ನೆಟ್, ಮುದ್ರಣ ಮತ್ತು ದೃಶ್ಯ ಮಾಧ್ಯಮಗಳು ಮಾಯನ್ ಜನಾಂಗ ಎಷ್ಟು ವೈಜ್ಞಾನಿಕವಾಗಿ ಯೋಚನೆ ಮಾಡುತ್ತವೆ ಎಂದೂ, ಅವರ ಲೆಕ್ಕಾಚಾರ ಈಗಲೂ ಎಷ್ಟು ಪ್ರಸ್ತುತ, ಆದ್ದರಿಂದಲೇ ಪ್ರಳಯದ ಬಗ್ಗೆ ಅವರ ಲೆಕ್ಕಾಚಾರ ಎಷ್ಟು ಕರಾರುವಕ್ಕಾದದ್ದೆಂಬುದರ ಬಗ್ಗೆಯೂ ಕಾರ್ಯಕ್ರಮಗಳನ್ನು ಪ್ರಸಾರ ಮಾಡತೊಡಗಿದವು. ಹಾಲಿವುಡ್ಡಿನಲ್ಲಿ 2012 ರ ಪ್ರಳಯದ ಬಗ್ಗೆ ಚಲನಚಿತ್ರಗಳು ಸಿದ್ಧಗೊಂಡು ಜನರನ್ನು ಹೆದರಿಸಲಾರಂಭಿಸಿದವು. ಈಗ ಆ ಭೀತಿಗೊಳಗಾಗುವುದು ಕನ್ನಡಿಗರ ಸರದಿ.



ವಾಸ್ತವವಾಗಿ ಮಾಯನ್ ಜನಾಂಗ ಮಾತ್ರವಲ್ಲ, ಎಲ್ಲಾ ನಾಗರಿಕತೆಗಳು ಜಗತ್ತಿನ ಸೃಷ್ಟಿ ಮತ್ತು ಅದರ ವಿನಾಶದ ಬಗ್ಗೆ ತಮ್ಮದೇ ಆದ ಲೆಕ್ಕಾಚಾರವನ್ನು ಹೊಂದಿರುತ್ತವೆ. ಆದರೆ ಆ ಲೆಕ್ಕಾಚಾರಗಳು ಜಗತ್ತಿನ ಬಗ್ಗೆ, ಸೂರ್ಯ, ಚಂದ್ರ ಇನ್ನಿತ್ಯಾದಿ ಆಕಾಶಕಾಯಗಳ ಬಗ್ಗೆ ಅವರಿಗಿರುವ ಪರಿಮಿತ ಜ್ಞಾನವನ್ನೇ ಆಧರಿಸಿರುತ್ತವೆ. ಭೂಮಿಯೇ ಜಗತ್ತಿನ ಕೇಂದ್ರ, ಸೂರ್ಯನೇ ಭೂಮಿಯ ಸುತ್ತ ಸುತ್ತುತ್ತಾನೆ ಎಂಬುದು ಬಹುಪಾಲು ನಾಗರಿಕತೆಗಳ ಕಲ್ಪನೆಯಾಗಿತ್ತು. ಹೀಗಾಗಿ ದಿನ, ಕಾಲ ಮತ್ತು ಸೃಷ್ಟಿ-ವಿನಾಶ ಇವುಗಳ ಬಗ್ಗೆ ಅವರ ಲೆಕ್ಕಾಚಾರಗಳು ಸಹ ಅಷ್ಟೇ ಸೀಮಿತವಾಗಿತ್ತು. ಮಳೆ, ಬೆಂಕಿಯಂಥ ನೈಸರ್ಗಿಕ ಶಕ್ತಿಗಳನ್ನು ನಿಯಂತ್ರಿಸಲಾಗದಷ್ಟು ಹಿಂದುಳಿದಿದ್ದ ಆ ಜನಾಂಗದ ನಂಬಿಕೆಗಳಿಗೆ ಭೀತಿ ಮತ್ತು ಭಕ್ತಿಗಳೇ ತಳಹದಿಯಾಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಆದರೆ ಇಂದು ವಿಜ್ಞಾನ ಮುಂದುವರೆದಿದೆ. ಜಗತ್ತಿನ ಬಗ್ಗೆ, ವಿಶ್ವ ಮತ್ತು ಜಗತ್ ಸೃಷ್ಟಿಯ ಬಗ್ಗೆ 2000 ವರ್ಷಗಳಷ್ಟು ಹಳೆಯದಾದ ಹಲವು ನಂಬಿಕೆಗಳಿಗೆ ಬುನಾದಿಯೇ ಇಲ್ಲವೆಂದು ಸಾಬೀತಾಗಿದೆ. ಹೀಗಾಗಿ ಇಂದು ಹಿಂತಿರುಗಿ ನೋಡುವುದಾದರೆ ಪ್ರಳಯದ ಬಗೆಗೆ ಮಾಯನ್ ಜನಾಂಗದ ನಂಬಿಕೆ ಹಿಂದಿನ ತಿಳಿವಳಿಕೆಯೂ ಸಹ ಅಷ್ಟೆ ಅವೈಜ್ಞಾನಿಕವಾದದ್ದೆಂಬುದು ಸ್ಪಷ್ಟವಾಗುತ್ತದೆ. ಮಾಯನ್ ಜನಾಂಗ ಪ್ರತಿ 20 ದಿನಗಳನ್ನು ಒಂದು ಘಟಕವಾಗಿ ಕರೆಯುತ್ತದೆ. 360 ದಿನಗಳಿಗೆ ಒಂದು ಟುನ್ ಎಂದು ಕರೆಯುತ್ತಾರೆ. 20 ಟುನ್‌ಗಳಿಗೆ ಒಂದು ಕಾಟುನ್ ಮತ್ತು 20 ಕಾಟುನ್‌ಗಳಿಗೆ ಒಂದು ಭಕ್ತುನ್ ಎಂದು ಕರೆಯುತ್ತಾರೆ. ಅಂದರೆ ಒಂದು ಭಕ್ತುನ್‌ನ ಒಂದು ಚಕ್ರಕ್ಕೆ 400 ವರ್ಷವಾಗುತ್ತದೆ. ಅವರ ಪ್ರಕಾರ 2012ರ ಡಿಸೆಂಬರ್ 21ಕ್ಕೆ 13ನೇ ಭಕ್ತುನ್‌ನ ಚಕ್ರ ಮುಗಿದು ಹೊಸ ಪರ್ವ ಪ್ರಾರಂಭವಾಗುತ್ತದೆ. ಇಷ್ಟೇ ಮಾಯನ್ ಜನಾಂಗದ ನಂಬಿಕೆ. ಹೊಸ ಪರ್ವದ ಸಂಕ್ರಮಣ ಎಲ್ಲಾ ನಾಗರಿಕತೆಗಳಲ್ಲೂ ಇರುವ ನಂಬಿಕೆಯೇ. ಮೇಲಾಗಿ 13ನೇ ಭಕ್ತುನ್‌ಗೆ ಪ್ರಪಂಚ ವಿನಾಶವಾಗುತ್ತದೆ ಎಂಬುದು ಮಾಯನ್ ಜನಾಂಗದ ನಂಬಿಕೆಯಲ್ಲ, ಅದು ರೂಪರ್ಟ್ ಮುರ್ಡೋಕ್‌ನ 'ಹಿಸ್ಟರಿ ಚಾನೆಲ್'ನ ಅನ್ವೇಷಣೆ.

ಚಾರ್ವಾಕ

ಶಿವಸುಂದರ್

ಹೀಗಾಗಿ 2012ಕ್ಕೆ ಪ್ರಳಯವಾಗುತ್ತದೆ ಎಂದು ನಡೆಸಲಾಗುತ್ತಿರುವ ಪ್ರಚಾರಕ್ಕೆ ಯಾವುದೇ ಬುನಾದಿಯಿಲ್ಲ. ವಿಶ್ವದ ವಿಕಾಸ ಪ್ರಕ್ರಿಯೆಯಲ್ಲಿ ಮಾನವ ಜನಾಂಗ ಈಗ ಎಂಥಾ ಅಪಾರ ಜ್ಞಾನವನ್ನು ಪಡೆದುಕೊಂಡಿದೆ ಎಂದರೆ ಮಾಯನ್ ಜನಾಂಗದ ಅಥವಾ ಹಿಂದೂ, ಮುಸ್ಲಿಂ, ಕ್ರೈಸ್ತ ಯಾವುದೇ ಧರ್ಮಗಳು ಹುಟ್ಟುಹಾಕಿರುವ ಯಾವ ಕಲ್ಪನೆಗಳೂ ಸರಿಯಲ್ಲವೆಂಬುದು ಸಾಬೀತಾಗಿದೆ. ಚಾರ್ಲ್ಸ್ ಡಾರ್ವಿನ್ ಸಿದ್ಧಾಂತ ಜೀವ ಸೃಷ್ಟಿಗೆ ಮತ್ತು ಅದು ಸಂಕೀರ್ಣ ಜೀವಿಯಾಗಿ ವಿಕಾಸವಾಗುವುದಕ್ಕೆ ಜಗತ್ತಿನ ಜೀವರಹಿತ ವಸ್ತುಗಳೇ ಕಾರಣ ಹೊರತು ಅತೀಂದ್ರಿಯ ಶಕ್ತಿಗಳಲ್ಲ ಎಂದು ಸಾಬೀತುಪಡಿಸಿದೆ. ಅದೇ ರೀತಿ ಕೋಪರ್ನಿಕಸ್ ಇನ್ನಿತ್ಯಾದಿ ಖಗೋಳ ಮತ್ತು ಭೌತ ವಿಜ್ಞಾನಿಗಳು ವಿಶ್ವದ ಗಾತ್ರ ಮತ್ತು ಅದರ ರಚನೆಯನ್ನು ಅನ್ವೇಷಿಸಿದ್ದಾರೆ. ಈಗಲೂ ವಿಜ್ಞಾನಕ್ಕೆ ನಿಲುಕದ ಸಂಗತಿಗಳು ಹಲವಿದ್ದರೂ ಈ ಹಿಂದೆ ಜಗತ್ತಿನ ಬಗ್ಗೆ ಅರಿವೇ ಇಲ್ಲದೆ ಕೇವಲ ಭೀತಿ ಮತ್ತು ಮೌಢ್ಯದಿಂದ ಜಗತ್ ಸೃಷ್ಟಿ ಮತ್ತು ವಿನಾಶದ ಬಗ್ಗೆ ಕಟ್ಟಿಕೊಂಡ ಕಲ್ಪನೆಗಳೆಲ್ಲಾ ಸುಳ್ಳೆಂದು ಸಾಬೀತು ಮಾಡಲಾಗಿದೆ.

ಹೀಗಾಗಿ ಪ್ರಳಯ ಪ್ರಚಾರ ಸುಳ್ಳೆಂಬುದು ನಿರ್ವಿವಾದ. ಆದರೆ ಪ್ರಳಯ ಭೀತಿಯನ್ನು ಮಾತ್ರ ಉದ್ಯಮಗಳು ತಮ್ಮ ಲಾಭಕ್ಕೆ ಬಳಸಿಕೊಳ್ಳುತ್ತಿವೆ. ಅಜ್ಞಾನದಿಂದ ಮೌಢ್ಯ ಉಂಟಾಗುವುದನ್ನು ಕ್ಷಮಿಸಬಹುದು. ಆದರೆ ಲಾಭಕ್ಕೆ ಮತ್ತು ಸ್ವಾರ್ಥಕ್ಕೆ ಮೌಢ್ಯದ ಪ್ರಚಾರ ಅಕ್ಷಮ್ಯ. ಪ್ರಳಯವೆಂಬುದೂ ಉದ್ಯಮಗಳ ಲಾಭಕ್ಕಾಗಿ ಪ್ರಚಾರ ವಾಗುತ್ತಿರುವ ಒಂದು ಬಗೆಯ ಆಧುನಿಕ ಮೌಢ್ಯವೇ ಸರಿ.

ವಾಸ್ತವವಾಗಿ ಈ ವಿಶ್ವಕ್ಕೆ ಏನಾದರೂ ಮುಪ್ಪು ಇದೆಯೆಂದಾದರೆ ಈ ಉದ್ಯಮಗಳಿಂದಲೇ ಎಂಬುದೂ ಸಹ ಈಗ ಸಾಬೀತಾಗುತ್ತಿದೆ. ಈ ಉದ್ಯಮಗಳು ತಮ್ಮ ಲಾಭದ ದುರಾಸೆಯಲ್ಲಿ ಭೂಗೋಳದ ಸಂಪನ್ಮೂಲವನ್ನು ಯಾವ ಪರಿಯಲ್ಲಿ ಕಬಳಿಸುತ್ತಾ ಕಾರ್ಬೈನ್ ಡೈ ಆಕ್ಸೈಡ್ ಮತ್ತು ಮಾನೋಕ್ಸೈಡ್‌ಗಳನ್ನು ಪರಿಸರಕ್ಕೆ ಉಗುಳುತ್ತಿವೆ ಎಂದರೆ ಇದರಿಂದ ಸೂರ್ಯನ ವಿಕಿರಣದಿಂದ ಜಗತ್ತಿಗೆ ರಕ್ಷಾ ಕವಚ ಒದಗಿಸುತ್ತಿದ್ದ ಒಝೋನ್ ಪದರವೇ ತೂತು ಬೀಳುತ್ತಿದೆ. ಇದರಿಂದ ಜಗತ್ತಿನ ತಾಪಮಾನ ಹೆಚ್ಚುತ್ತಿದ್ದು ಆರ್ಟಿಕಾ ಮತ್ತು ಅಂಟಾರ್ಟಿಕಾಗಳಲ್ಲಿರುವ ಹಿಮಪದರಗಳು ಕರಗುತ್ತಿವೆ. ಹಿಮಾಲಯವೂ ಕರಗುತ್ತಿದೆ. ಇದು ಹೀಗೆ ಮುಂದುವರೆದರೆ ಜಗತ್ತಿನ ಮಾಲ್ಡೀವ್ಸ್, ನೆದರ್ಲ್ಯಾಂಡ್ ಇನ್ನಿತರ ದೇಶಗಳೇ ಮುಳುಗಿಹೋಗಲಿವೆ. ಅಷ್ಟು ಮಾತ್ರವಲ್ಲ, ತಾಪಮಾನ ಬದಲಾವಣೆಯಿಂದ ಮೀನುಗಳು ಸತ್ತು ಮೀನುಗಾರರು ಬೀದಿಗೆ ಬೀಳಲಿದ್ದಾರೆ. ಜಗತ್ತಿನ ಎಲ್ಲಾ ಬೆಳೆಗಳಿಗೂ ತಾಪಮಾನ ಒಂದು ಪ್ರಮುಖ ಅಂಶವಾಗಿರುವುದರಿಂದ ತಾಪಮಾನ ಏರಿಕೆಯಿಂದ ಬೆಳೆಗಳ ಇಳುವರಿಯ ಮೇಲೂ ತೀವ್ರ ಪರಿಣಾಮವಾಗಿ ರೈತರು ಬೀದಿಗೆ ಬೀಳಲಿದ್ದಾರೆ. ಎಲ್ಲಕ್ಕಿಂತ ಹೆಚ್ಚಾಗಿ ಈ ತಾಪಮಾನ ಏರಿಕೆಯಿಂದ ಹವಾಮಾನ ವೈಪರೀತ್ಯಗಳು ಸಂಭವಿಸಿ ನೆರೆ, ಬರ, ಸುನಾಮಿಗಳಂಥ ಅತಿರೇಕಗಳು ಹೆಚ್ಚೆಚ್ಚು ಸಂಭವಿಸಲಿವೆ. 2004ರಲ್ಲಿ ಸಂಭವಿಸಿದ ಸುನಾಮಿ, ಈ ವರ್ಷದ ಉತ್ತರ ಕರ್ನಾಟಕದ ನೆರೆ ಇವುಗಳೆಲ್ಲ ಇಂಥ ವೈಪರೀತ್ಯದ ಪರಿಣಾಮಗಳೇ ಇರಬಹುದೆಂಬ ಅನುಮಾನ ವಿಜ್ಞಾನಿಗಳನ್ನು ಕಾಡುತ್ತಿದೆ.

ಇವೂ ಕೂಡಾ ಪ್ರಳಯವೇ. ಆದರೆ ಉದ್ಯಮಿಗಳು ತಮ್ಮ ಲಾಭಕ್ಕಾಗಿ ಮನು ಕುಲದ ವಿರುದ್ಧ ಮತ್ತು ಪ್ರಕೃತಿಯ ವಿರುದ್ಧ ನಡೆಸುತ್ತಿರುವ ಯುದ್ಧದಿಂದ ಸಂಭವಿಸುತ್ತಿರುವ ಪ್ರಳಯ. ಇದನ್ನು ನಿಲ್ಲಿಸಬೇಕು ಅಥವಾ ಕನಿಷ್ಠ ನಿಯಂತ್ರಣಕ್ಕೆ ತರಬೇಕೆಂದು ಜಗತ್ತಿನ ಜನರೆಲ್ಲಾ ಅಮೆರಿಕ, ಯೂರೋಪಿನ ಶ್ರೀಮಂತ ರಾಷ್ಟ್ರಗಳಿಗೆ ಮನವಿ ಮಾಡಿಕೊಳ್ಳುತ್ತಿದ್ದರೂ ಅವು ಈ ಮನವಿಗೆ ಸೊಪ್ಪು ಹಾಕುತ್ತಿಲ್ಲ. ವಿಪರ್ಯಾಸವೆಂದರೆ 2012ಕ್ಕೆ ಈ ಜಾಗತಿಕ ತಾಪಮಾನ ಏರಿಕೆಯ ಬಗ್ಗೆ ಒಂದು ಅಂತರರಾಷ್ಟ್ರೀಯ ಒಪ್ಪಂದ ಏರ್ಪಡಲು ಜಗತ್ತಿನ ರಾಷ್ಟ್ರಗಳೆಲ್ಲಾ ಸಭೆ ಸೇರುತ್ತಿವೆ. ಅಲ್ಲಿ ಅಮೆರಿಕ ನೇತೃತ್ವದ ಶ್ರೀಮಂತ ರಾಷ್ಟ್ರಗಳ ಉದ್ಯಮಗಳು ತಾಪಮಾನ ನಿಯಂತ್ರಣಕ್ಕೆ ಒಪ್ಪಲಿಲ್ಲವೆಂದರೆ ಜಗತ್ತಿನ ವಿನಾಶ ಖಂಡಿತ. ಅದರಲ್ಲೂ ಜಗತ್ತಿನ ಬಡದೇಶಗಳ, ಬಡದೇಶಗಳ ಬಡಜನರ ವಿನಾಶವಂತೂ ಖಂಡಿತ!

ಪ್ರಕೃತಿ ಸಹಜ ಪ್ರಳಯದ ಕಲ್ಪನೆ ಮೌಢ್ಯವಿರಬಹುದು. ಆದರೆ ಜಗತ್ತಿನ ಶ್ರೀಮಂತ ಉದ್ಯಮಿಗಳು ಸೃಷ್ಟಿಸುತ್ತಿರುವ ವಿನಾಶವಂತೂ ಕಣ್ಣೆದುರಿಗೇ ಇದೆ. ಆದರೆ ಜಗತ್ತಿನ ಬಡಜನ ಒಂದಾದರೆ ಇದನ್ನೂ ನಿಯಂತ್ರಣಕ್ಕೆ ತರಬಹುದು. ಹೀಗಾಗಿ ಜಗತ್ತನ್ನು ವಿನಾಶ ಮಾಡುವ ಶಕ್ತಿಗಳು ಈ ಜಗತ್ತಿನಲ್ಲೇ ಇವೆ. ಅದನ್ನು ಸಾಮ್ರಾಜ್ಯವಾದ ಎಂದು ಕರೆಯಬಹುದಾದರೆ ಅದನ್ನು ನಿಲ್ಲಿಸಬಹುದಾದ ಶಕ್ತಿಗಳೂ ಈ ಜಗತ್ತಿನಲ್ಲೇ ಇವೆ. ಅದೇ ಜನಶಕ್ತಿ. ಅದನ್ನ ಒಟ್ಟುಮಾಡುವುದೇ ಪ್ರಳಯವನ್ನು ತಡೆಗಟ್ಟಲು ನಾವು ಮಾಡಬಹುದಾದ ಕೆಲಸ.

ಕಾಂಗ್ರೆಸ್‌ಗೆ ಬುದ್ಧಿ ಬರುವುದಿಲ್ಲ...



ಕಂಡಹಾಗೆ

ಗೌರಿ ಲಂಕೇಶ್

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಮತ್ತದರ ನಾಯಕರ ...ಬೇರಿತನ, ಜಡ್ಡುಗಟ್ಟಿರುವ ಸ್ಥಿತಿ, ಜನಪರ ಚಿಂತನೆ ...ವಾ ಕಾಳಜಿ ಇಲ್ಲದಿರುವುದನ್ನು ನೋಡಿದರೆ ಬೇಸರ ...ಗುತ್ತದೆ. ಇದೂ ಒಂದು ರಾಜಕೀಯ ಪಕ್ಷವೇ ...ನಿಸುತ್ತದೆ.

ಕರ್ನಾಟಕ ಇವತ್ತು ಒಂದೆಡೆ ಹಲವಾರು ...ಸ್ಯೆಗಳನ್ನು ಎದುರಿಸುತ್ತಿದ್ದರೆ, ಇನ್ನೊಂದೆಡೆ ಅತ್ಯಂತ ... ಕಿರಾತಕ ಮತ್ತು ಬೇಜವಾಬ್ದಾರಿ ಸರ್ಕಾರವನ್ನು ...ಡಿಯೂರಪ್ಪನ ಬಿಜೆಪಿ ಸರ್ಕಾರದ ರೂಪದಲ್ಲಿ ...ಂದಿದೆ. ಇಂತಹ ಪರಿಸ್ಥಿತಿಯಲ್ಲಿ ಒಂದು ಮುಖ್ಯ ...ರೋಧಿ ಪಕ್ಷ ಎಷ್ಟು ಕ್ರಿಯಾಶೀಲವಾಗಿರಬೇಕಿತ್ತು, ...ಹ ಹೋರಾಟಗಳನ್ನು ಕೈಗೆತ್ತಿಕೊಳ್ಳಬೇಕಿತ್ತು, ಯಾವ ...ದ ಅಬ್ಬರವನ್ನು ಸೃಷ್ಟಿಸಬೇಕಿತ್ತು.... ಆದರೆ ಕಾಂಗ್ರೆಸ್ ...ವುದನ್ನು ಮಾಡದೆ ನಿದ್ರಿಸುತ್ತಿದೆ... ಅಲ್ಲ, ಕೋಮಾ ...ದಲ್ಲಿದೆ.


ಒಂದು ಕ್ಷಣ ಊಹಿಸಿ. ಇವತ್ತು ಇದೇ ಯಡಿಯೂ... ಅಕಸ್ಮಾತ್ ವಿರೋಧ ಪಕ್ಷದ ನಾಯಕನ ...ದಲ್ಲಿದ್ದರೆ, ಪ್ರಸ್ತುತ ಸರ್ಕಾರದಲ್ಲಿ ಅಧಿಕಾರಕ್ಕಾಗಿನ ...ಬಡಿದಾಟವನ್ನು, ನೆರೆ ಹಾವಳಿಯಲ್ಲಿ ತತ್ತರಿಸಿರುವ ...ಯನ್ನು ನಿರ್ಲಕ್ಷಿಸಿರುವುದನ್ನು, ಲಂಗುಲಗಾಮಿಲ್ಲದ ...ಚಾರವನ್ನು ಹೇಗೆ ತರಾಟೆಗೆ ತೆಗೆದುಕೊಳ್ಳುತ್ತಿದ್ದರು? ... ಧರಣಿಗಳನ್ನು, ಪ್ರತಿಭಟನೆಗಳನ್ನು, ಪತ್ರಿಕಾಗೋಷ್ಠಿ...ನ್ನು ಕರೆದು ಕೂಗಾಡುತ್ತಿದ್ದರು? ಹೇಗೆ ...ರಿಸಲಾಗದ ಪ್ರಶ್ನೆಗಳನ್ನು ಕೇಳಿ ಸರ್ಕಾರಕ್ಕೆ ...ಭಂಗ ಮಾಡುತ್ತಿದ್ದರು? ಹೇಗೆ ಸರ್ಕಾರದ ವಿರುದ್ಧ ...ಡುತ್ತಿದ್ದರು?

ಆದರೆ ಕಾಂಗ್ರೆಸ್ ಮಾಡುತ್ತಿರುವುದು ಏನನ್ನು? ..., ರಾಜ್ಯದಲ್ಲಿ ಸಾಮಾಜಿಕವಾಗಿ, ಆರ್ಥಿಕವಾಗಿ, ...ಕೀಯವಾಗಿ ಆಗುತ್ತಿರುವುದಕ್ಕೂ ಸಂಬಂಧವೇ ...ಂಬಂತೆ ಕಾಂಗ್ರೆಸ್ ತೆಪ್ಪಗೆ ಬಿದ್ದಿದೆ....

...ತ್ತೀಚಿನ ಒಂದು ಪ್ರಕರಣವನ್ನೇ ತೆಗೆದುಕೊಂಡು ...ಯೂರಪ್ಪನಾಗಲಿ, ಅವರ ಬಿಜೆಪಿ ಪಕ್ಷವಾಗಲಿ ...ಪ್ರತಿಕ್ರಿಯಿಸುತ್ತಿತ್ತು ಎಂದು ನೋಡೋಣ. ಅದು ...ವಾ ಕರಂದ್ಲಾಜೆಯನ್ನು ಪದಚ್ಯುತಿಗೊಳಿಸಿದ ... ಅಕಸ್ಮಾತ್ ಕಾಂಗ್ರೆಸ್ ಸರ್ಕಾರ ತನ್ನ ಸಚಿವ ...ಡಲದಲ್ಲಿರುವ ಏಕೈಕ ಮಹಿಳೆಯನ್ನು ವಿನಾಕಾರಣ ...ಮಾಡಿದ್ದರೆ ಬಿಜೆಪಿ ಸುಮ್ಮನಿರುತ್ತಿರಲಿಲ್ಲ. ಸ್ವತಃ ... ಈ ಹಿಂದೆ ತನ್ನ ಮಹಿಳಾ ನಾಯಕರಿಗೆ ...ರು ಮಾಡಿರುವುದರಿಂದ ಅದು ನೇರವಾಗಿ ...ಟನೆಗೆ ಇಳಿಯುತ್ತಿರಲಿಲ್ಲ, ಬದಲಾಗಿ ರಾತ್ರೋರಾತ್ರಿ ...ದೋ ಒಂದು ಮಹಿಳಾ ಸಂಘಟನೆಗೆ ಅನಧಿಕೃತ ...ದನ್ನ ನೀಡಿ ಆ ಸಂಘಟನೆ ಪ್ರತಿಭಟಿಸುವಂತೆ, ...ಮೂಲಕ ಸರ್ಕಾರಕ್ಕೆ ಮುಜುಗರ ಆಗುವಂತೆ ...ತ್ತಿತ್ತು.

...ವನ್ನು ಸುಮ್ಮನೆ ಹೇಳುತ್ತಿಲ್ಲ. ಬಿಜೆಪಿಯ ಕುತಂತ್ರ ... ಗೊತ್ತಿರುವುದರಿಂದ ಹೇಳುತ್ತೇನೆ. ಅದಕ್ಕೆ ...ದರಣೆಯನ್ನು ನೀಡಬಲ್ಲೆ. ಎರಡು ವರ್ಷಗಳ ... ಒರಿಸ್ಸಾದಲ್ಲಿ ಕ್ರಿಶ್ಚಿಯನ್ನರ ಮೇಲೆ ಆಗುತ್ತಿದ್ದ ...ನ್ನು ಖಂಡಿಸಿ ರಾಜ್ಯದ ಹಲವಾರು ಕ್ರಿಶ್ಚಿಯನ್ ಸಂಘಟನೆಗಳು ಆಗಿನ್ನು ಬಿಜೆಪಿಯ ಸಂಸದರಾಗಿದ್ದ ಸಾಂಗ್ಲಿಯಾನ ನೇತೃತ್ವದಲ್ಲಿ ಬೆಂಗಳೂರಿನಲ್ಲಿ ಒಂದು ಬೃಹತ್ ಪ್ರತಿಭಟನೆಯನ್ನು, ಮೆರವಣಿಗೆಯನ್ನು ಏರ್ಪಡಿಸಿದ್ದರು.

ಆದರೆ ಮೆರವಣಿಗೆ ಸಫಲವಾಗದಂತೆ ನೋಡಿಕೊಳ್ಳಲು ದಿನ ಬೆಳಗಾಗುವುದರೊಳಗೆ ಬಿಜೆಪಿ ಒಂದು ಖೊಟ್ಟಿ ಹಿಂದೂತ್ವವಾದಿ ಸಂಘಟನೆಯನ್ನು ಸೃಷ್ಟಿಸಿತು ಮಾತ್ರವಲ್ಲ ಕ್ರಿಶ್ಚಿಯನ್ನರ ಮೆರವಣಿಗೆ ಹಾದುಹೋಗಬೇಕಿದ್ದ ಮಹಾತ್ಮ ಗಾಂಧಿ ಪ್ರತಿಮೆ ಎದುರು ಆ ಸಂಘಟನೆಗೆ ಪ್ರತಿಭಟನೆ ನಡೆಸುವ ಅನುಮತಿಯೂ ಪೊಲೀಸರಿಂದ ಸಿಗುವಂತೆ ನೋಡಿಕೊಂಡಿತ್ತು. ಇದರ ಹಿಂದಿದ್ದ ಷಡ್ಯಂತ್ರ ತನ್ನದೇ ಪಕ್ಷದ ಸಂಸದ ಸಾಂಗ್ಲಿಯಾನ ನೇತೃತ್ವದಲ್ಲಿ ನಡೆಯುತ್ತಿದ್ದ ಕ್ರಿಶ್ಚಿಯನ್ನರ ಮೆರವಣಿಗೆಗೆ ತನ್ನದೇ ಅಂಗ ಸಂಘಟನೆಗಳು ಪ್ರತಿಭಟಿಸಿದವು ಎಂಬ ಆರೋಪ ಬಾರದಿರಲೆಂದು. ಆದರೆ ವಾಸ್ತವವಾಗಿ ಅವತ್ತು ಪ್ರತಿಭಟಿಸಿದ್ದ ಆ ಖೊಟ್ಟಿ ಸಂಘಟನೆಯಲ್ಲಿದ್ದವರೆಲ್ಲ ಅದೇ ಭಜರಂಗದಳ, ಬಿಜೆಪಿ, ಆರೆಸ್ಸೆಸ್‌ನ ಸದಸ್ಯರೆ. ಪರಿಣಾಮ ಅಂದು ಕ್ರಿಶ್ಚಿಯನ್ ಮತ್ತು ಈ ಹಿಂದೂಗಳ ನಡುವೆ ಸಂಘರ್ಷ ನಡೆಯುತ್ತದೆಂಬ ಆತಂಕ ವ್ಯಕ್ತಪಡಿಸಿದ. ಪೊಲೀಸರು ಕ್ರಿಶ್ಚಿಯನ್ನರ ಮೆರವಣಿಗೆಗೆ ಕತ್ತರಿ ಹಾಕಿದರು.



ಅಂದಿನ ಈ ಕಾರ್ಯಾಚರಣೆಯ ಹಿಂದೆ ಬಿಜೆಪಿಗೆ ಯಾವ ಜನಪರ ಕಾಳಜಿಯೂ ಇರಲಿಲ್ಲ, ಬದಲಾಗಿ ರಾಜಕೀಯ ಚಾಣಾಕ್ಷತನವಿತ್ತು. ರಾಜಕಾರಣದಲ್ಲಿ ತಮ್ಮ ಸ್ನೇಹಿತರಿಗಿಂತಲೂ ತಮ್ಮ ವಿರೋಧಿಗಳಿಂದ ಕಲಿಯಬೇಕಾದ್ದು ಬಹಳಷ್ಟಿರುತ್ತದೆ. ಆದರೆ ಅಂತಹ ಯಾವ ಪಾಠಗಳನ್ನು ಕಾಂಗ್ರೆಸ್ ಕಲಿತಿಲ್ಲ.

ಒಂದು ರಾಜ್ಯದ ಬೆಳವಣಿಗೆಯಲ್ಲಿ ಆಡಳಿತಾರೂಢ ಪಕ್ಷದ ಪಾತ್ರ ಮಾತ್ರವಲ್ಲ, ಅದಕ್ಕೆ ವಿರೋಧ ಪಕ್ಷದ ಕೊಡುಗೆಯೂ ಇರುತ್ತದೆ. ಆದರೆ ಈ ರಾಜ್ಯದ ಉದ್ಧಾರಕ್ಕಾಗಿ ವಿರೋಧ ಪಕ್ಷವಾಗಿರುವ ಕಾಂಗ್ರೆಸ್ ಕೊಡುಗೆ ಏನು?

ಯಡಿಯೂರಪ್ಪನ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಪ್ರತಿ ವಾರ ಎಂತೆಂತಹ ಎಡವಟ್ಟುಗಳನ್ನು ಮಾಡಿಕೊಳ್ಳುತ್ತಿದೆ ಎಂದರೆ ಆ ಎಲ್ಲ ಅವಕಾಶಗಳನ್ನು ಕಾಂಗ್ರೆಸ್ ಸರಿಯಾಗಿ ಉಪಯೋಗಿಸಿಕೊಂಡಿದ್ದರೆ ಇವತ್ತು ಯಡ್ಡಿಯ ಸರ್ಕಾರ ಇಡೀ ರಾಜ್ಯದ ತಾತ್ಸಾರಕ್ಕೆ ಗುರಿಯಾಗಿರುತ್ತಿತ್ತು.

ಆರಂಭದಲ್ಲಿ ರೈತರು ಪೊಲೀಸರ ಗುಂಡುಗಳಿಗೆ ಬಲಿಯಾದಾಗ ರೈತರ ಪರ ನಿಲ್ಲಬೇಕಿದ್ದ ಕಾಂಗ್ರೆಸ್ ನಾಯಕರು ಚುನಾವಣೆಯಲ್ಲಿ ಸೋತು, ತಮಗಾಗಿದ್ದ ಗಾಯಗಳನ್ನು ನೆಕ್ಕುತ್ತಾ ಕೂತಿದ್ದರು. ಕಬ್ಬು ಬೆಳೆಗಾರರು ತಮ್ಮ ಬೆಳೆಗೆ ಸೂಕ್ತ ಬೆಲೆ ಕೇಳಿ ಪ್ರತಿಭಟಿಸುತ್ತಿದ್ದಾಗ ಕಾಂಗ್ರೆಸ್ ಧುರೀಣರು ಪಕ್ಷದಲ್ಲಿನ ಸ್ಥಾನಮಾನಕ್ಕೆ ಗುದ್ದಾಡುವಲ್ಲಿ ಬ್ಯುಸಿ ಆಗಿದ್ದರು.

ಚರ್ಚ್‌ಗಳ ಮೇಲೆ, ಕ್ರಿಶ್ಚಿಯನ್ನರ ಮೇಲೆ, ಪಬ್‌ಗಳಲ್ಲಿ ಯುವತಿಯರ ಮೇಲೆ ಭಜರಂಗದಳದ ಪುಂಡರು ದಾಳಿ ಮಾಡಿದಾಗಲೂ ಕಾಂಗ್ರೆಸ್ ನಾಯಕರು ಅದನ್ನು ತೀಕ್ಷ್ಣವಾಗಿ ಟೀಕಿಸದೇ ಹೋದರು. ಬಾಬಾಬುಡನ್‌ಗಿರಿಯಲ್ಲಿ ಬಿಜೆಪಿ ನಾಯಕರು ನ್ಯಾಯಾಲಯದ ತೀರ್ಪನ್ನು ಉಲ್ಲಂಘಿಸಿ ಪೂಜೆ ಸಲ್ಲಿಸಿದಾಗ, ಶಾಲಾ ಮಕ್ಕಳಿಗೆಂದು ಆರೆಸ್ಸೆಸಿನ ಕೋಮುದ್ವೇಷಭರಿತ ಪುಸ್ತಕಗಳನ್ನು ಯಡ್ಡಿ ಸರ್ಕಾರ ಖರೀದಿಸಿದಾಗಲೂ ಕಾಂಗ್ರೆಸ್ಸಿಗರು ಬಿಜೆಪಿಯ ವಿರುದ್ಧ ತುಟಿಪಿಟಕ್ ಅನ್ನಲಿಲ್ಲ.

ಇನ್ನು ರಾಜ್ಯ ಬಿಜೆಪಿಯಲ್ಲಿನ ಕಿತ್ತಾಟ ಶುರುವಾಗಿ ಎಲ್ಲ ನಾಯಕರು ಮತ್ತು ಶಾಸಕರು ರೆಸಾರ್ಟ್‌ಗಳಲ್ಲಿ ಅವಿತು ಕೂತಿದ್ದಾಗ ಅದನ್ನೂ ಕಾಂಗ್ರೆಸ್ ವಿಮರ್ಶಿಸಲಿಲ್ಲ. ನೀವೆಲ್ಲ ನೆರೆ ಸಂತ್ರಸ್ತರನ್ನು ಮರೆತಿದ್ದೀರಿ ಎಂದು ಆರೋಪಿಸಿ ಜನರ ನೆರವಿಗೆ ಕಾಂಗ್ರೆಸ್‌ನ ಹಾಲಿ ಮತ್ತು ಮಾಜಿ ಶಾಸಕರು ದುಡಿಯಲಿದ್ದಾರೆ ಎಂಬ ಹೇಳಿಕೆ ನೀಡಿ ಅದರಿಂದ ಒಂದಿಷ್ಟು ರಾಜಕೀಯ ಲಾಭವನ್ನೂ ಮಾಡಿಕೊಳ್ಳಲಿಲ್ಲ.

ಕಾಂಗ್ರೆಸ್‌ನ ಪ್ರಸ್ತುತ ನಾಯಕರಲ್ಲಿ ಒಂದಿಷ್ಟು ಕ್ರಿಯಾಶೀಲರಾಗಿ ದುಡಿಯುತ್ತಿರುವುದು, ಎಲ್ಲೆಡೆ ಪಾದರಸದಂತೆ ಓಡಾಡುತ್ತಾ ಬಿಜೆಪಿಯ ವಿಫಲತೆಗಳನ್ನು ಜನರಿಗೆ ತೋರಿಸುತ್ತಿರುವುದು ಯುವ ನಾಯಕ ಕೃಷ್ಣಭೈರೇಗೌಡ ಮಾತ್ರ. ಅವರೊಂದಿಗೆ ಉಗ್ರಪ್ಪ ಕೂಡ ಹಲವೊಮ್ಮೆ ಗಟ್ಟಿಯಾಗಿ ಮಾತನಾಡುತ್ತಿದ್ದಾರೆ. ಕಾಂಗ್ರೆಸ್‌ನ ಉಳಿದ ನಾಯಕರಿಗಿಂತ ಜಾತ್ಯತೀತ ಜನತಾ ದಳದ ದೇವೇಗೌಡರು ಮತ್ತು ಕುಮಾರಸ್ವಾಮಿಯೇ ಹೆಚ್ಚು ದೃಢವಾಗಿ ವಿರೋಧ ಪಕ್ಷದ ಕೆಲಸವನ್ನು ಮಾಡುತ್ತಿದ್ದಾರೆ.

ಕಾಂಗ್ರೆಸ್ಸಿಗರ ಈ ಸೋಂಭೇರಿತನಕ್ಕೆ ಕಾರಣ ಅವರು **TINA (There Is No Alternative) factor** ನಲ್ಲಿ ನಂಬಿಕೆ ಇಟ್ಟಿರುವುದು. ಅಂದರೆ ತಾವು ವಿರೋಧ ಪಕ್ಷವಾಗಿದ್ದರೂ ಏನೂ ಮಾಡುವ ಅಗತ್ಯವಿಲ್ಲ, ಬರುವ ಚುನಾವಣೆಯಲ್ಲಿ ಮತದಾರರು ಬದಲಾವಣೆಯನ್ನು ಬಯಸಿ ಬಿಜೆಪಿಗೆ ಕಾಂಗ್ರೆಸ್ ಸೂಕ್ತ ಪರ್ಯಾಯ ಎಂದು ತಮ್ಮನ್ನು ಗೆಲ್ಲಿಸುತ್ತಾರೆ ಎಂಬ ಮನೋಭಾವ ಕಾಂಗ್ರೆಸ್ಸಿಗರದ್ದು.

ಅತ್ತ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಪಕ್ಷವನ್ನು ಕಟ್ಟುವಲ್ಲಿ ಸಕ್ರಿಯರಾಗಿದ್ದರೆ ಇತ್ತ ರಾಜ್ಯದಲ್ಲಿ ಕಾಂಗ್ರೆಸ್ ಅನ್ನು ಪಾಳುಬಿದ್ದಿರುವ ಸಂಘಟನೆಯಾಗಿ ಇಲ್ಲಿನ ನಾಯಕರು ಪರಿವರ್ತಿಸಿದ್ದಾರೆ.

ಇನ್ನೂ ಕಾಲ ಮಿಂಚಿಲ್ಲ. ಕಾಂಗ್ರೆಸ್ ನಾಯಕರು ಎಚ್ಚೆತ್ತು ವಿರೋಧ ಪಕ್ಷವಾಗಿ ಕಾರ್ಯ ಪ್ರವೃತ್ತರಾದರೆ ಅವರು ಮತ್ತೆ ಅಧಿಕಾರಕ್ಕೆ ಬರಬಹುದು. ಇಲ್ಲವಾದರೆ ಮುಂದಿನ ಬಾರಿ ಮತದಾರರು ಕಾಂಗ್ರೆಸ್ ಅನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವ ಸಾಧ್ಯತೆ ಇದ್ದೇ ಇದೆ. ●

ಮಾನವೀಯ ಗುಣದ ಮಕ್ಕಳು



ಕರ್ನಾಟಕ ಜನಪರ ವೇದಿಕೆ ನೆರೆ ಸಂತ್ರಸ್ತರ ನೆರವಿಗೆಂದು ಸಂಗ್ರಹಿಸಿದ್ದ ಹಣ ಮತ್ತು ಸಾಮಾನುಗಳನ್ನು ಇತ್ತೀಚಿಗೆ ರಾಯಚೂರು ಜಿಲ್ಲೆಯ ಹಲವು ಹಳ್ಳಿಗಳಿಗೆ ನೀಡಿ ಬಂದಿದೆ. ಅದನ್ನು ಕುರಿತು ವೇದಿಕೆಯ ಅಧ್ಯಕ್ಷ ಡಾ.ಎಚ್.ವಿ.ವಾಸು ಬರೆದಿರುವ ಲೇಖನ ಈ ಸಂಚಿಕೆಯ ಪುಟ 16 ರಲ್ಲಿದೆ.

ವಾಸು ಮತ್ತು ತಂಡದವರು ನೆರೆ ಸಂತ್ರಸ್ತರಿಗೆಂದು ಸಂಗ್ರಹಿಸಿದ ಹಣದಲ್ಲಿ ಐದು ವರ್ಷದ ಬಾಲಕಿಯೊಬ್ಬಳು ನೀಡಿದ್ದ 760 ರೂ.ಗಳು ಸೇರಿತ್ತು.

ಆ ಹುಡುಗಿ ಹಲವಾರು ತಿಂಗಳುಗಳಿಂದ ಒಂದು ಹುಂಡಿಯಲ್ಲಿ ಹಣ ಹಾಕಿ ಸಂಗ್ರಹಿಸುತ್ತಿದ್ದಳು. ತಾನು ಬೇರೆ ಊರುಗಳಿಗೆ ಹೋದಾಗ ತನ್ನ ಆಟಿಕೆಗಳನ್ನು ತೆಗೆದುಕೊಂಡು ಹೋಗಲು ಬಂದು ಟ್ರಾಲಿ ಬ್ಯಾಗ್ ಅನ್ನು ಆ ಹಣದಿಂದ ಖರೀದಿಸಬೇಕೆಂದು ಬಯಸಿದ್ದಳು.

ಒಂದು ದಿನ, ಪ್ರಜಾವಾಣಿಯಲ್ಲಿ ಪ್ರಕಟಗೊಂಡಿದ್ದ ಚಿತ್ರ ಒಂದನ್ನು ಆ ಹುಡುಗಿಗೆ ತೋರಿಸಿದ ಆಕೆಯ ತಾಯಿ "ನೋಡು, ಮಳೆ ಬಂದು ಇವರೆಲ್ಲ ಕಷ್ಟ ಪಡುತ್ತಿದ್ದಾರೆ. ಅವರ ಮಕ್ಕಳಿಗೆ ಮನೆ ಇಲ್ಲ, ಸ್ಕೂಲ್ ಇಲ್ಲ, ಅವರಿಗೆ ಎಲ್ಲರೂ ಹೆಲ್ಪ್ ಮಾಡಬೇಕಲ್ವಾ?" ಎಂದಳು.

ಆಗ ಆ ಹುಡುಗಿ "ಆ ಮಕ್ಕಳಿಗೆ ನನ್ನ ಕೆಲ ಆಟದ ಸಾಮಾನು, ಬೊಂಬೆಗಳನ್ನು ಕೊಡ್ಲಾ?" ಅಂದಳು.

"ಬೇಡ. ಈಗ ಆ ಮಕ್ಕಳಿಗೆ ಆಟದ ಸಾಮಾನು, ಬೊಂಬೆಗಳು ಬೇಡ. ಅವರಿಗೆ ಊಟ, ಬಟ್ಟೆ ಬೇಕು" ಅಂದಳು ಅಮ್ಮ.

ಒಂದು ಕ್ಷಣ ಯೋಚಿಸಿದ ಆ ಹುಡುಗಿ "ಹಾಗಾದರೆ ನನ್ನ ಹುಂಡಿಯಲ್ಲಿರುವ ದುಡ್ಡನ್ನು ಆ ಮಕ್ಕಳಿಗೆ ಕೊಡು" ಎಂದಳು.

"ಹಾಗಾದರೆ ನಿನ್ನ ಟ್ರಾಲಿ ಬ್ಯಾಗ್?"

"ನನಗೆ ಅದು ಬೇಡ."

ಆಗ ಅಮ್ಮ ಮತ್ತು ಮಗಳು ಆ ಹುಂಡಿಯನ್ನು ಒಡೆದು ಅದರಲ್ಲಿದ್ದ 760 ರೂ.ಗಳನ್ನು ನೆರೆ ಸಂತ್ರಸ್ತರಿಗೆ ಕೊಟ್ಟರು.

ಆ ಹುಡುಗಿ ಬೇರೆ ಯಾರೂ ಅಲ್ಲ, ನನ್ನ ಪ್ರೀತಿಯ ಇಶಾ ಲಂಕೇಶ್. ಇಶಾಳಂತೆ ಈ ರಾಜ್ಯದ ಅದೆಷ್ಟೋ ಮಕ್ಕಳು ತಮ್ಮ ಕೈಲಾದ ನೆರವನ್ನು ನೆರೆ ಸಂತ್ರಸ್ತರಿಗೆ ನೀಡಿದ್ದಾರೆ. ಭಾಷೆ, ಜಾತಿ, ಧರ್ಮ, ಗಡಿ, ವರ್ಗ ತರಹದ ಭೇದಗಳ ಬಗ್ಗೆ ಕಿಂಚಿತ್ತೂ ಗೊತ್ತಿರದ ಮಕ್ಕಳ ಮುಗ್ಧತೆಯಲ್ಲಿ ಎಷ್ಟೊಂದು ಮಾನವೀಯತೆ ಇರುತ್ತಲ್ಲವೇ?


ಮಕ್ಕಳೇ ಭವಿಷ್ಯದ ಬಗ್ಗೆ ನಮ್ಮಲ್ಲಿ ಇನ್ನೂ ಆಶಾಭಾವನೆಯನ್ನು ಉಳಿಸುವ ಶಕ್ತಿಗಳು ಎನಿಸಿದ್ದಕ್ಕೆ ಈ ಪುಟ್ಟ ಟಿಪ್ಪಣಿ...

● ಗೌರು


ತೆಂಡೂಲ್ಕರ್ ಮನುಷ್ಯರಾಗಲಿ


ಸಚಿನ್

ಮೊನ್ನೆ ನವೆಂಬರ್ 15, 2009ಕ್ಕೆ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಸದಾ ಮಿನುಗುವ ಧ್ರುವತಾರೆಯಾಗಿರುವ ಮಾಸ್ಟರ್ ಬ್ಲಾಸ್ಟರ್ ಸಚಿನ್ ತೆಂಡೂಲ್ಕರ್ ಅಂತಾರಾಷ್ಟ್ರೀಯ ಕ್ರಿಕೆಟ್‌ಗೆ ಕಾಲಿಟ್ಟು ಬರೋಬ್ಬರಿ ಇಪ್ಪತ್ತು ವರ್ಷ ತುಂಬಿತು. ಈ ಸಂದರ್ಭದಲ್ಲಿ ಮಾಧ್ಯಮ ಪ್ರತಿನಿಧಿಗಳು ಕೇಳಿದ ಪ್ರಶ್ನೆಯೊಂದಕ್ಕೆ ಉತ್ತರಿಸುತ್ತಾ "ನಾನು ಮರಾಠಿಗನೆಂದು ಹೇಳಿಕೊಳ್ಳುವುದಕ್ಕೆ ಹೆಮ್ಮೆ ಎನಿಸುತ್ತದೆ. ಆದರೆ, ಮೊದಲು ನಾನೊಬ್ಬ ಭಾರತೀಯ. ಮುಂಬೈ ಭಾರತಕ್ಕೆ ಸೇರಿದ್ದು" ಎಂದು ಹೇಳಿದರು. ಮರುದಿನ ಅದು ಪತ್ರಿಕೆಯಲ್ಲಿ ಪ್ರಕಟಗೊಳ್ಳುತ್ತಿದ್ದಂತೆಯೇ ಮರಾಠಿ ದುರಭಿಮಾನಿ ಹಾಗೂ ಹಿಂದೂ ಮತೋನ್ಮಾದಿ ಶಿವಸೇನೆಯ ಬಾಳಠಾಕ್ರೆ ಕೆಂಡಾಮಂಡಲವಾದರು. ಶಿವಸೇನೆಯ ಮುಖವಾಣಿಯಾಗಿರುವ ಸಾಮ್ನಾ ಪತ್ರಿಕೆಯ ಸಂಪಾದಕೀಯದಲ್ಲಿ "ತೆಂಡೂಲ್ಕರ್ ಕ್ರಿಕೆಟ್ ಆಡುವುದಕ್ಕೆ ಮಾತ್ರ ಸೀಮಿತವಾಗಿರಲಿ. ಅದನ್ನು ಬಿಟ್ಟು ರಾಜಕೀಯದಲ್ಲಿ ಮೂಗು ತೂರಿಸಿದರೆ ಪರಿಸ್ಥಿತಿ ಚೆನ್ನಾಗಿರುವುದಿಲ್ಲ" ಎಂದು ಕಟ್ಟೆಚ್ಚರಿಕೆ ಮಾಡಿದ್ದಾರೆ. ಮುಂಬೈ ಮರಾಠಿಗರಿಗೆ ಮಾತ್ರ ಸೇರಿದ್ದು ಎಂದು ವಾದಿಸುತ್ತಾ ಅಲ್ಲಿ ನೆಲೆಸಿರುವ ಹೊರ ರಾಜ್ಯದವರ ಮೇಲೆ, ಅದರಲ್ಲೂ ವಿಶೇಷವಾಗಿ ಉತ್ತರ ಪ್ರದೇಶ ಮತ್ತು ಬಿಹಾರದಿಂದ ವಲಸೆ ಬಂದು ಕೂಲಿನಾಲಿ ಮಾಡಿಕೊಂಡು ಬದುಕುತ್ತಿರುವ ಅಮಾಯಕರ ಮೇಲೆ ಆಗಾಗ ಮಾರಣಾಂತಿಕ ದಾಳಿ ನಡೆಸುವ ಶಿವಸೇನೆಯಿಂದಾಗಲೀ ಅಥವಾ ಅದರ ಅಧಿನೇತ ಬಾಳಠಾಕ್ರೆಯಿಂದಾಗಲೀ ಇದಕ್ಕಿಂತ ಉತ್ತಮವಾದ ಪ್ರತಿಕ್ರಿಯೆಯನ್ನೇನೂ ನಿರೀಕ್ಷಿಸುವುದು ಸಾಧ್ಯವಿಲ್ಲ ಬಿಡಿ.


ವಿವಿಯನ್ ರಿಚರ್ಡ್ಸ್


ಸುನೀಲ್‌ಗವಾಸ್ಕರ್


ಬಾಳ ಠಾಕ್ರೆ

ವಿಶ್ವದಾದ್ಯಂತ ತೆಂಡೂಲ್ಕರ್ ಅವರನ್ನು ಒಬ್ಬ ಸೌಮ್ಯ ಆಟಗಾರ 'ಎಂದೇ ಬಹಳಷ್ಟು ಜನ ಮೆಚ್ಚಿಕೊಳ್ಳುತ್ತಾರೆ. ಅವರು ಎಂದೂ ಯಾವುದೇ ವಿವಾದಕ್ಕೆ ಸಿಲುಕದಿರುವುದು, ಯಾವುದೇ ಆಟಗಾರರೊಂದಿಗೆ ಎಂದೂ ಜಗಳ ಮಾಡದಿರುವುದು, ತನ್ನ ವಿರುದ್ಧ ಅಂಪೈರ್ ನೀಡಿದ ತೀರ್ಮಾನಗಳು ತಪ್ಪಾಗಿವೆ ಎಂದು ಖಂಡಿತವಾಗಿಯೂ ಗೊತ್ತಿದ್ದಾಗಲೂ ಅದಕ್ಕೆ ಯಾವುದೇ ವಿರೋಧ ವ್ಯಕ್ತಪಡಿಸದೇ ತಲೆಬಾಗುವುದು - ಮುಂತಾದ ಅಂಶಗಳು ಅವರ ಬಗ್ಗೆ ಈ ರೀತಿಯಲ್ಲಿ ಸದಭಿಪ್ರಾಯ ಮೂಡುವುದಕ್ಕೆ ಪ್ರಧಾನ ಕಾರಣವಾಗಿವೆ. ಅಂತೆಯೇ ತೆಂಡೂಲ್ಕರ್ ತನ್ನ ಆಟವನ್ನು ಬಿಟ್ಟು ಬೇರೆ ವಿಚಾರಗಳ ಬಗ್ಗೆ ಮಾತನಾಡುವುದು, ಅದರಲ್ಲೂ ವಿಶೇಷವಾಗಿ ರಾಜಕೀಯ ಸಂಬಂಧಿ ವಿಚಾರಗಳ ಬಗ್ಗೆ ಎಂದೂ ತುಟಿ ಎರಡು ಮಾಡದಿರುವುದು ಅವರ ಬಗ್ಗೆ ಜನರಲ್ಲಿ ಇನ್ನಷ್ಟು ಗೌರವ ಬೆಳೆಯುವುದಕ್ಕೆ ಕಾರಣವಾಗಿದೆ.

ಅದು ಎಷ್ಟರಮಟ್ಟಿಗೆ ಅತಿರೇಕಕ್ಕೆ ಹೋಗಿದೆ ಎಂದರೆ ಪಕ್ಕದ ಮನೆ ಹೊತ್ತಿ ಉರಿಯುತ್ತಿದ್ದರೂ ತೆಂಡೂಲ್ಕರ್ ಅದರ ಬಗ್ಗೆ ತಲೆಕೆಡಿಸಿಕೊಳ್ಳದೇ ತಮ್ಮ ಮನೆಯಲ್ಲಿ ಹಾಯಾಗಿ ಮಲಗುತ್ತಾರೆ! ಅವರ ಈ ವರ್ತನೆಗಳೇ ಅವರನ್ನು ನೋವಿಗೆ ಮಿಡಿಯುವ ಹೃದಯವುಳ್ಳ ವ್ಯಕ್ತಿಯನ್ನಾಗಿ ರೂಪಿಸದೇ ಮಾನವೀಯತೆಯ ಲವಲೇಶವೂ ಇಲ್ಲದ 'ಸೌಮ್ಯ' ಆಟಗಾರನನ್ನಾಗಿ ರೂಪಿಸಿವೆ.

ಈಗ್ಗೆ ಎರಡು ವರ್ಷಗಳ ಹಿಂದೆ ಮರಾಠಿ ದುರಭಿಮಾನಿಗಳಾಗಿರುವ ಮಹಾರಾಷ್ಟ್ರ ನವನಿರ್ಮಾಣ ವೇದಿಕೆಯ ರಾಜ್ ಠಾಕ್ರೆ, ಶಿವಸೇನೆಯ ಉದ್ಧವ್ ಠಾಕ್ರೆ ಮುಂಬೈನ ಹಾದಿಬೀದಿಗಳಲ್ಲಿ ಉತ್ತರ ಭಾರತೀಯರನ್ನು ಕಂಡಕಂಡಲ್ಲಿ ಬಡಿದು ಹಾಕುತ್ತಾ ಭಯಭೀತ ವಾತಾವರಣ ಸೃಷ್ಟಿಸುತ್ತಿದ್ದಾಗ ಸಚಿನ್ ತೆಂಡೂಲ್ಕರ್ ಅದನ್ನೆಲ್ಲಾ ನೋಡುತ್ತಾ ಮನೆಯಲ್ಲಿ ಮಲಗಿದ್ದರೆ ಹೊರತು 'ಮುಂಬೈ ಭಾರತಕ್ಕೆ ಸೇರಿದ್ದು' ಎಂದು ಹೇಳಲಿಲ್ಲ, 2002ರಲ್ಲಿ ಹಿಂದೂ ಮತೋನ್ಮಾದಿಗಳು ಗುಜರಾತ್‌ನ ಬೀದಿಗಳಲ್ಲಿ ಮಕ್ಕಳು ಮರಿಗಳೆನ್ನದೇ, ವೃದ್ಧರು ಮಹಿಳೆಯರೆನ್ನದೇ ಎಲ್ಲರನ್ನೂ ಕೊಚ್ಚಿ ಕೊಲ್ಲುತ್ತಿದ್ದಾಗ, ಜೀವಂತ ಸುಡುತ್ತಿದ್ದಾಗ ತೆಂಡೂಲ್ಕರ್ ತುಟಿ ಎರಡು ಮಾಡದೆ ಹಾಯಾಗಿದ್ದರು. ಇನ್ನೂ ವಿಚಿತ್ರ ನೋಡಿ. ರೇಸ್‌ನಲ್ಲಿ ದಂತಕತೆಯಾಗಿರುವ ಮೈಕೆಲ್ ಶ್ಯುಮೇಕರ್ ಅವರು 2003ರಲ್ಲಿ ಸಚಿನ್ ತೆಂಡೂಲ್ಕರ್‌ಗೆ ಫೆರಾರಿ 360 ಮೊಡೆನಾ ಕಾರನ್ನು ನೀಡಿದಾಗ ಅದಕ್ಕೆ ಒಂದೂವರೆ ಕೋಟಿ ರೂಪಾಯಿ ಟ್ಯಾಕ್ಸ್ ರದ್ದುಗೊಳಿಸಬೇಕೆಂದು ಅಂದಿನ ಐಟಿ ಮಂತ್ರಿಯಾಗಿದ್ದ ಪ್ರಮೋದ್ ಮಹಾಜನ್‌ಗೆ ದುಂಬಾಲು ಬಿದ್ದಿದ್ದರು. ತೆಂಡೂಲ್ಕರ್‌ಗೆ ತೆರಿಗೆ ವಿನಾಯಿತಿ ಕೊಡುವುದಕ್ಕೆ ಅವರೇನೂ ಕಡುಬಡವರಾಗಿರಲಿಲ್ಲ, ಸಾವಿರಾರು ಕೋಟಿ ರೂಪಾಯಿಗಳ ಆಸ್ತಿಗೆ ಒಡೆಯರಾಗಿದ್ದರು. ತೆರಿಗೆ ಕಟ್ಟಿದರೆ ಅದು ಬೇರೆ ಎಲ್ಲಿಗೂ ಹೋಗುವುದಿಲ್ಲ, ನಮ್ಮ ದೇಶದ ಖಜಾನೆಗೆ ಹೋಗುತ್ತದೆ, ಆ ಮೂಲಕ ದೇಶದ ಅಭಿವೃದ್ಧಿಗೆ ಬಳಕೆಯಾಗುತ್ತದೆ ಎಂದು ಯೋಚಿಸದೇ ತೆರಿಗೆ ವಿನಾಯಿತಿ ಕೇಳಿದ್ದು ಅವರ ಅಭಿಮಾನಿಗಳಿಗೇ ನೋವುಂಟುಮಾಡಿತ್ತು, ಅವರು ಸಾವಿರಾರು ಕೋಟಿ ಆಸ್ತಿಗೆ ಒಡೆಯರಾಗಿದ್ದರೂ ಸುನಾಮಿ ಸಂತ್ರಸ್ತರಿಗೋ, ಪ್ರವಾಹಪೀಡಿತರಿಗೋ, ಭೂಕಂಪ ಬಾಧಿತರಿಗೋ ಒಂದು ಪೈಸೆ ಕೊಟ್ಟ ಉದಾಹರಣೆಗಳಿಲ್ಲ, ಮೊನ್ನೆ ಕೂಡ ಪತ್ರಕರ್ತರು ನಿರ್ದಿಷ್ಟವಾಗಿ ಪ್ರಶ್ನೆ ಕೇಳದಿದ್ದರೆ "ಮುಂಬೈ ಭಾರತಕ್ಕೆ ಸೇರಿದ್ದು" ಎಂಬ ಹೇಳಿಕೆಯನ್ನೂ ಅವರು ನೀಡುತ್ತಿರಲಿಲ್ಲ, ನಂತರ ಬಾಳ ಠಾಕ್ರೆಯ ಕೆಂಗಣ್ಣಿಗೂ ಗುರಿಯಾಗುತ್ತಿರಲಿಲ್ಲ.

ಇನ್ನೊಂದೆಡೆ ಅದೇ ಮರಾಠಿ ನೆಲದಲ್ಲಿ ಹುಟ್ಟಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ತನ್ನದೇ ಹೆಜ್ಜೆಗುರುತುಗಳನ್ನು ಒತ್ತಿ ಭಾರತಕ್ಕೆ ಕೀರ್ತಿ ತಂದುಕೊಟ್ಟ ಇನ್ನೊಬ್ಬ ಕ್ರಿಕೆಟ್ ತಾರೆಯಾದ ಲಿಟಲ್ ಮಾಸ್ಟರ್ ಸುನೀಲ್ ಗವಾಸ್ಕರ್‌ರನ್ನು ನೋಡಿ. 1992ರ ಡಿಸೆಂಬರ್ 6ರಂದು ಹಿಂದೂ ದುರಭಿಮಾನಿ ಶಕ್ತಿಗಳು ಬಾಬ್ರಿ ಮಸೀದಿಯನ್ನು ಕೆಡವಿ, ಹಿಂದೂ-ಮುಸ್ಲಿಂ ಸಮುದಾಯಗಳ ನಡುವಿನ ಸ್ನೇಹ, ಸೌಹಾರ್ದತೆ, ಸಹಬಾಳ್ವೆ, ಭ್ರಾತೃತ್ವಗಳ ಬಂಧನವನ್ನು ಒಡೆದು ದೇಶದಾದ್ಯಂತ ಕೋಮುದಳ್ಳುರಿ ಹಚ್ಚಿ, ಸಾವಿರಾರು ಸಂಖ್ಯೆಯಲ್ಲಿ ಅಮಾಯಕ ಮುಸ್ಲಿಮರನ್ನು ಕೊಂದು ಹಾಕಿದ ಕರಾಳ ಚರಿತ್ರೆ ನಮಗೆಲ್ಲಾ ಗೊತ್ತೇ ಇದೆ. 1993ರ ಜನವರಿಯಲ್ಲಿ ಶಿವಸೇನೆ, ಬಿಜೆಪಿ ಮತ್ತು ಸಂಘಪರಿವಾರದ ಗೂಂಡಾಗಳು ಬಾಂಬೆ ಮತ್ತು ಸೂರತ್‌ಗಳಿಗೆ ಬೆಂಕಿಯಿಟ್ಟು ಭಯಭೀತಗೊಳಿಸಿದ್ದರು. ಮುಸ್ಲಿಂ ಮಹಿಳೆಯರನ್ನು ಹಾದಿಬೀದಿಗಳಲ್ಲೇ ಸಾಮೂಹಿಕವಾಗಿ ರೇಪ್ ಮಾಡುವುದು, ಅವರ ಮನೆಮಠಗಳನ್ನು ಸುಟ್ಟುಹಾಕುವುದು, ಕಂಡ ಕಂಡ ಮುಸ್ಲಿಮರನ್ನು ಇರಿದು ಕೊಲ್ಲುವುದು, ಜೀವಂತವಾಗಿ ಸುಡುವುದು ದಿನನಿತ್ಯದ ಕಾಯಕವಾಗಿತ್ತು, ಆ ಭಯಾನಕ ದಿನಗಳ ಒಂದು ದಿನ (1993ರ ಜನವರಿ 13ರಂದು) ಸುನೀಲ್ ಗವಾಸ್ಕರ್ ಮುಂಬೈನ ಹೃದಯ ಭಾಗದ ವರ್ಲಿ ಎಂಬಲ್ಲಿದ್ದ ತಮ್ಮ ಮನೆಯಲ್ಲಿದ್ದರು. ಕಿಟಕಿಯಿಂದ ಹೊರಗಡೆ ಅಮಾಯಕ ಮುಸ್ಲಿಮರ ಮೇಲೆ ಶಿವಸೇನೆಯ ಗೂಂಡಾಗಳು ದಾಳಿ ನಡೆಸುತ್ತಿದ್ದ ಭಯಭೀತ ದೃಶ್ಯಗಳನ್ನು ನೋಡುತ್ತಿದ್ದರು. ಅವರ ಮನಸ್ಸು

ಸುತ್ತ ಮುತ್ತ



▶ ಕುಮಾರ್ ಬುರಡಿಕಟ್ಟಿ

ತಡೆಯಲಾಗಲಿಲ್ಲ, ತಾನು ದಾಳಿಗೊಳಗಾಗುತ್ತಿರುವವರ ನೆರವಿಗೆ ಹೋದರೆ ತನ್ನ ಜೀವಕ್ಕೂ ಅಪಾಯವಿದೆ ಎಂಬುದು ಗೊತ್ತಿದ್ದೂ ಗೊತ್ತಿದ್ದೂ ಕೂಡಲೇ ಮನೆಯಿಂದ ಹೊರನಡೆದು ದಾಳಿ ಮಾಡುತ್ತಿದ್ದವರಿಗೆ ಅಡ್ಡಲಾಗಿ ನಿಂತು "ಅವರನ್ನು ಕೊಲ್ಲುವ ಮೊದಲು ನನ್ನನ್ನು ಕೊಲ್ಲಿ" ಎಂದರು. ಕ್ರಿಕೆಟ್ ಲೋಕದ ದಿಗ್ಗಜ, ತಮ್ಮ ಹೀರೋ ಗವಾಸ್ಕರ್ ಅವರೇ ಹೀಗೆ ತಮ್ಮೆದುರು ದೇವರಂತೆ ಪ್ರತ್ಯಕ್ಷವಾಗಿದ್ದೇ ತಡ ದಾಳಿ ಮಾಡುತ್ತಿದ್ದವರು ತಮ್ಮ ಕೈಯಲ್ಲಿದ್ದ ಕಲ್ಲು, ದೊಣ್ಣೆ ಸಲಾಕೆಗಳನ್ನು ಕೆಳಗೆಸೆದು ಬಿಟ್ಟರು. ದಾಳಿಕೋರರಿಂದ ತಮ್ಮನ್ನು ರಕ್ಷಿಸಿ ಜೀವದಾನ ಮಾಡಿದ ಗವಾಸ್ಕರ್‌ಗೆ ಬಚಾವಾದ ಜನರೆಲ್ಲರೂ ಕೃತಜ್ಞತೆ ಹೇಳಿದರು. ಒಂದು ವೇಳೆ ಗವಾಸ್ಕರ್ ಸ್ಥಾನದಲ್ಲಿ ತೆಂಡೂಲ್ಕರ್ ಇದ್ದಿದ್ದರೆ ಏನು ಮಾಡುತ್ತಿದ್ದರು ಎಂಬುದನ್ನು ಊಹಿಸುವುದು ಕಷ್ಟವಲ್ಲ, ಮನೆಯ ಬಾಗಿಲು, ಕಿಟಕಿಗಳನ್ನು ಮುಚ್ಚಿ ಒಳಸೇರುತ್ತಿದ್ದರಷ್ಟೆ. ಇದು ಗವಾಸ್ಕರ್ ಮತ್ತು ತೆಂಡೂಲ್ಕರ್ ನಡುವಿನ ವ್ಯತ್ಯಾಸ.

ತೆಂಡೂಲ್ಕರ್ ಅವರ ಮೌನಕ್ಕೆ 'ಅವರೊಬ್ಬ ಆಟಗಾರ, ಅವರಿಂದ ರಾಜಕೀಯ ಹೇಳಿಕೆಗಳನ್ನು ನಿರೀಕ್ಷಿಸಬಾರದು' ಎಂಬ ಸಮರ್ಥನೆಯನ್ನೂ ಹಲವರು ಕೊಡುತ್ತಾರೆ. ಆದರೆ, ಆಟಗಾರರಾಗುವ ಮೊದಲು ಅವರೊಬ್ಬ ಮನುಷ್ಯರಾಗಬೇಕು ಎಂಬುದನ್ನು ಮರೆಯಬಾರದು. ಆಟಗಾರ ಎಂದಾಕ್ಷಣಕ್ಕೆ ತಮ್ಮ ಸುತ್ತಲಿನ ನೋವಿಗೆ ಮಿಡಿಯಬಾರದು ಎಂತೇನೂ ಇಲ್ಲ, ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ದಂತಕತೆಯಾಗಿರುವ ವೆಸ್ಟ್ ಇಂಡೀಸ್‌ನ ರಿಚರ್ಡ್ಸ್‌ಗೆ ಕ್ರಿಕೆಟ್ ಒಂದು ಕ್ರೀಡೆ ಮಾತ್ರ ಆಗಿರಲಿಲ್ಲ, ಬಿಳಿಯರ ದೌರ್ಜನ್ಯಗಳ ವಿರುದ್ಧ ಕಪ್ಪು ಜನರ ಸ್ವಾಭಿಮಾನಿ ಹೋರಾಟವಾಗಿತ್ತು. ಬಿಳಿಯ ಆಟಗಾರ ಎಸೆಯುವ ಒಂದೊಂದು ಬಾಲ್ ಅನ್ನೂ ಅವರು ಹೊಡೆಯುತ್ತಿದ್ದ ರೀತಿ ನೋಡಿದರೆ ಬಿಳಿಯರು ಶತಮಾನಗಳಿಂದ ತಮಗೆ ಮಾಡಿದ ಅವಮಾನ, ಎಸಗಿದ ದೌರ್ಜನ್ಯಕ್ಕೆ ಪ್ರತ್ಯುತ್ತರ ಕೊಡುತ್ತಿದ್ದಾರೆ ಎನ್ನಿಸುವಂತಿರುತ್ತಿತ್ತು. ರಿಚರ್ಡ್ಸ್ ತಮ್ಮ ಕ್ರಿಕೆಟ್‌ನಿಂದ ನಿವೃತ್ತಿ ಹೊಂದಿದ ನಂತರವೂ ಕಪ್ಪು ಜನರ ಸ್ವಾಭಿಮಾನಿ ಬದುಕಿಗಾಗಿ ಹೋರಾಡಿದರು. ವಿಶ್ವದ ಅನೇಕ ಕಪ್ಪು ಅಥ್ಲೀಟ್‌ಗಳ ವಿಚಾರದಲ್ಲೂ ಇದು ಸತ್ಯ. ಗವಾಸ್ಕರ್ ಆಗಲೀ, ರಿಚರ್ಡ್ಸ್ ಆಗಲಿ ಅಥವ ಕಪ್ಪು ಅಥ್ಲೀಟ್‌ಗಳಾಗಲೀ 'ಆಟಗಾರ'ರಾಗುವ ಮೊದಲು 'ಮನುಷ್ಯ'ರಾಗಿದ್ದರು. ದುರಂತ ಎಂದರೆ ವಿಶ್ವವೇ ನಿಬ್ಬೆರಗಾಗುವಂತೆ ಕ್ರಿಕೆಟ್ ಆಡುತ್ತಿರುವ ತೆಂಡೂಲ್ಕರ್ ಕೇವಲ 'ಆಟಗಾರ'ರಾಗಿದ್ದಾರೆಯೇ ಹೊರತು 'ಮನುಷ್ಯ'ರಾಗಿಲ್ಲ. ಅವರು ಮೊದಲು ಮನುಷ್ಯರಾಗಲಿ. ಆಗ ಅವರ ಅತ್ಯದ್ಭುತ ಆಟಕ್ಕೆ ಮತ್ತಷ್ಟು ಮೆರಗು ಸಿಗುತ್ತದೆ.


ಆಕಾಶವನ್ನು ಚುಂಬಿಸುವಾಸೆ!



ಚಿತ್ರದಲ್ಲಿರುವ ಕಟ್ಟಡವನ್ನು ನೋಡಿ. ಹೇಗೆ ಆಕಾಶಕ್ಕೆ ಮುತ್ತು ಕೊಡುವುದಕ್ಕಾಗಿ ಪ್ರಯತ್ನಿಸುತ್ತಿದೆ.

ಅದು ದುಬೈನಲ್ಲಿರುವ 'ಬುರ್ಜ್ ದುಬೈ' ಎಂಬ ಕಟ್ಟಡ. ವಿಶ್ವದ ಅತ್ಯಂತ ಎತ್ತರದ ಮಾನವ ನಿರ್ಮಿತ ಕಟ್ಟಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಆರು ವರ್ಷಗಳ ಹಿಂದೆ ಪ್ರಾರಂಭವಾದ ಅದರ ನಿರ್ಮಾಣ ಕಾರ್ಯವೀಗ ಸಂಪೂರ್ಣವಾಗಿ ಮುಗಿದಿದ್ದು 2010ರ ಜನವರಿಯಲ್ಲಿ ಹೊಸ ವರ್ಷಾಚರಣೆಯೊಂದಿಗೆ ಸಾರ್ವಜನಿಕರಿಗೆ ಮುಕ್ತವಾಗಲಿದೆ. ದುಬೈನ ಪ್ರಧಾನಮಂತ್ರಿ ಹಾಗೂ ಉಪಾಧ್ಯಕ್ಷರಾಗಿರುವ ಶೇಕ್ ಮೊಹ್ಮದ್ ಬಿನ್ ರಶೀದ್ ಅವರು ದುಬೈನ ಆಡಳಿತಗಾರರಾಗಿ ಅಧಿಕಾರ ವಹಿಸಿಕೊಂಡ ನಾಲ್ಕನೇ ವರ್ಷಾಚರಣೆಯ ದಿನದಂದೇ ಅಂದರೆ 2010ರ ಜನವರಿ 5ರಂದು ಉದ್ಘಾಟನೆ ಯಾಗುತ್ತಿರುವುದು ವಿಶೇಷ.


ಬುರ್ಜ್ ದುಬೈ 818 ಮೀಟರ್ ಎತ್ತರವಿದೆ. ಅಂದರೆ ಹತ್ತಿರ ಹತ್ತಿರ ಒಂದು ಕಿ.ಮೀ.! ಇದನ್ನು ಕಟ್ಟುವುದಕ್ಕೆ 3,30,000 ಕ್ಯೂಬಿಕ್ ಮೀಟರ್ ಕಾಂಕ್ರೀಟ್, 39,000 ಮೆಟ್ರಿಕ್ ಟನ್ ಕಬ್ಬಿಣ, 1,42,000 ಚದರ ಮೀಟರ್ ಗ್ಲಾಸ್ ಹಾಗೂ ಎರಡು ಕೋಟಿ ಇಪ್ಪತ್ತು ಲಕ್ಷ ಮಾನವ ಗಂಟೆಗಳನ್ನು ಬಳಸಲಾಗಿದೆ. ಇದರಲ್ಲಿ ಪ್ರತಿ ಸೆಕೆಂಡಿಗೆ 60 ಮೀಟರ್ ವೇಗದಲ್ಲಿ ಚಲಿಸಬಲ್ಲ 57 ಎಲಿವೇಟರ್‌ಗಳನ್ನು ಹಾಗೂ ಎಂಟು ಎಸ್ಕಲೇಟರ್‌ಗಳನ್ನು ಅಳವಡಿಸಲಾಗಿದೆ. ಮುಖ್ಯ ಸರ್ವೀಸ್ ಎಲಿವೇಟರ್ 504 ಮೀಟರ್ ಎತ್ತರದಲ್ಲಿ ಚಲಿಸುತ್ತಾ 160 ಅಂತಸ್ತುಗಳಿಗೆ ಸೇವೆ ಕಲ್ಪಿಸಲಿದೆ.



ವಾಸ ಮತ್ತು ವಾಣಿಜ್ಯ ಎರಡೂ ಉದ್ದೇಶಗಳಿಗೆ ಬಳಸಲು ಅನುವಾಗುವಂತೆ 'ಬುರ್ಜ್ ದುಬೈ' ಕಟ್ಟಡವನ್ನು ನಿರ್ಮಿಸಲಾಗಿದೆ. ಮೊದಲ 37 ಮಹಡಿಗಳನ್ನು 175 ರೂಮುಗಳ ಐಶಾರಾಮಿ ಅರ್ಮಾನಿ ಹೋಟೆಲ್‌ಗಾಗಿ ಮೀಸಲಿರಿಸಲಾಗಿದೆ. 42ನೇ ಮಹಡಿಯಿಂದ 108ನೇ ಮಹಡಿಗಳ ತನಕ ಖಾಸಗೀ ಅಪಾರ್ಟ್‌ಮೆಂಟ್‌ಗಳನ್ನು ನಿರ್ಮಿಸಲಾಗಿದೆ. ಉಳಿದ ಮಹಡಿಗಳನ್ನು ಕಾರ್ಪೊರೇಟ್ ಆಫೀಸುಗಳು ಆಕ್ರಮಿಸಿಕೊಳ್ಳಲಿವೆ. ಈ ಕಟ್ಟಡದಲ್ಲಿ 30,000 ಕುಟುಂಬಗಳು ವಾಸ ಮಾಡುವುದಕ್ಕೆ ಅವಕಾಶವಿರುವಂತೆ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟಲಾಗಿದೆ. 200 ಮೀಟರ್ ಎತ್ತರದಲ್ಲಿ ಸ್ವಿಮ್ಮಿಂಗ್ ಪೂಲ್ ನಿರ್ಮಿಸಲಾಗಿದೆ. ಥಿಯೇಟರ್‌ಗಳು, ಹೋಟೆಲ್‌ಗಳು, ಶಾಪಿಂಗ್ ಮಾಲ್‌ಗಳು, ಬ್ಯಾಂಕ್‌ಗಳು - ಹೀಗೆ ಒಂದು ನಗರಕ್ಕೆ ಅವಶ್ಯವಿರುವ ಎಲ್ಲಾ ಸೌಲಭ್ಯಗಳೂ ಅಲ್ಲಿ ಸಿಗುವಂತೆ ವ್ಯವಸ್ಥೆ ಮಾಡಲಾಗಿದೆ.

ಬುರ್ಜ್ ದುಬೈ ಕಟ್ಟಡ ನಿರ್ಮಾಣಕ್ಕೆ ಒಟ್ಟು 800 ಮಿಲಿಯನ್ ಡಾಲರ್ ದುಡ್ಡು ಖರ್ಚಾಗಿದೆ. ಅಂದರೆ ಸುಮಾರು 3800 ಕೋಟಿ ರೂಪಾಯಿಗಳು. ಈ ಕಟ್ಟಡವನ್ನೂ ಒಳಗೊಂಡಂತೆ ಎರಡು ಚ.ಕಿ.ಮೀ. ವ್ಯಾಪ್ತಿಯಲ್ಲಿನ ಒಟ್ಟಾರೆ ಪ್ರದೇಶವನ್ನು ಅಭಿವೃದ್ಧಿಪಡಿಸುವುದಕ್ಕೆ ಸುಮಾರು 20 ಬಿಲಿಯನ್ ಡಾಲರ್ ಖರ್ಚಾಗಿದೆ. ಅಂದರೆ ಸುಮಾರು 92 ಸಾವಿರ ಕೋಟಿ ರೂಪಾಯಿಗಳು. ಪ್ರಸ್ತುತವಾಗಿ 14,000 ಕಾರ್ಮಿಕರು ಕಟ್ಟಡದ ಅಂತಿಮ ಕೆಲಸದಲ್ಲಿ ತೊಡಗಿದ್ದಾರೆ. ಅವರಲ್ಲಿ ಬಹುತೇಕರು ಭಾರತೀಯರಾಗಿದ್ದಾರೆ. Emaar Properties ಎಂಬ ಕಂಪೆನಿಯು ಇದರ ಒಡೆಯನಾಗಿದೆ.

ಅಮೆರಿಕನ್ ಕಾಕತಾಳೀಯ



ಇವು ಅಮೆರಿಕದ ಅಧ್ಯಕ್ಷರಾಗಿದ್ದ ಅಬ್ರಹಾಂ ಲಿಂಕನ್ ಮತ್ತು ಜಾನ್ ಎಫ್ ಕೆನಡಿಯವರ ಬದುಕು ಮತ್ತು ಸಾವಿನ ಕುರಿತ ಕಾಕತಾಳೀಯ ಘಟನೆಗಳು.


ಅಬ್ರಹಾಂ ಲಿಂಕನ್ ಅಮೆರಿಕದ ಮೇಲ್ಮನೆಯಾದ ಕಾಂಗ್ರೆಸ್‌ಗೆ ಆಯ್ಕೆಯಾಗಿದ್ದು 1846ರಲ್ಲಿ, ಜಾನ್ ಎಫ್ ಕೆನಡಿ ಕಾಂಗ್ರೆಸ್‌ಗೆ ಆಯ್ಕೆಯಾಗಿದ್ದು 1946ರಲ್ಲಿ. ಅಂದರೆ ಲಿಂಕನ್ ಆಯ್ಕೆಯಾದ ಸರಿಯಾಗಿ 100 ವರ್ಷಕ್ಕೆ.

ಅಬ್ರಹಾಂ ಲಿಂಕನ್ ಅಮೆರಿಕದ ಅಧ್ಯಕ್ಷರಾಗಿದ್ದು 1860ರಲ್ಲಿ, ಕೆನಡಿ ಅಮೆರಿಕದ ಅಧ್ಯಕ್ಷರಾಗಿದ್ದು 1960ರಲ್ಲಿ. ಅಂದರೆ ಲಿಂಕನ್ ಅಧ್ಯಕ್ಷರಾಗಿ ಆಯ್ಕೆಯಾದ ಸರಿಯಾಗಿ 100 ವರ್ಷಕ್ಕೆ.

ಲಿಂಕನ್ ಮತ್ತು ಕೆನಡಿ ಇಬ್ಬರೂ ಮಾನವ ಹಕ್ಕುಗಳ ಬಗ್ಗೆ ಕಾಳಜಿಯುಳ್ಳವರಾಗಿದ್ದರು. ಲಿಂಕನ್ ಮತ್ತು ಕೆನಡಿಯವರ ಹೆಂಡತಿಯರು ಶ್ವೇತಭವನದಲ್ಲಿರುವಾಗಲೇ ತಮ್ಮ ಮಕ್ಕಳನ್ನು ಕಳೆದುಕೊಂಡರು.

ಲಿಂಕನ್ ಮತ್ತು ಕೆನಡಿ ಇಬ್ಬರೂ ಶುಕ್ರವಾರದಂದೇ ಹಂತಕರ ಗುಂಡಿಗೆ ಬಲಿಯಾದರು. ಇಬ್ಬರನ್ನೂ ತಲೆಗೆ ಗುಂಡಿಟ್ಟು ಕೊಲ್ಲಲಾಯಿತು. ಲಿಂಕನ್ ಮತ್ತು ಕೆನಡಿಯವರನ್ನು ಕೊಂದ ಹಂತಕರು ಅಮೆರಿಕದ ದಕ್ಷಿಣ ಭಾಗಕ್ಕೆ ಸೇರಿದವರಾಗಿದ್ದರು. ಲಿಂಕನ್ ಅವರನ್ನು ಹತ್ಯೆಗೈದ ಹಂತಕ ಜಾನ್ ವಿಲ್ಕ್ಸ್ ಬೂತ್ ಹುಟ್ಟಿದ್ದು 1839ರಲ್ಲಿ, ಕೆನಡಿಯನ್ನು ಹತ್ಯೆಗೈದ ಲೀ ಹಾರ್ವೆ ಓಸ್ವಾಲ್ಡ್ ಹುಟ್ಟಿದ್ದು 1939ರಲ್ಲಿ. ಅಂದರೆ ಜಾನ್ ವಿಲ್ಕ್ಸ್ ಬೂತ್ ಹುಟ್ಟಿದ ಸರಿಯಾಗಿ 100 ವರ್ಷಕ್ಕೆ. ಇಬ್ಬರೂ ಹಂತಕರ ಹೆಸರುಗಳೂ ಇಂಗ್ಲಿಷಿನ 15 ಅಕ್ಷರಗಳಿಂದ ಕೂಡಿದ್ದವು (John Wilkes Booth ಮತ್ತು Lee Harvey Oswald).

ಲಿಂಕನ್ ಅವರ ಆಪ್ತ ಕಾರ್ಯದರ್ಶಿಗೆ ಕೆನಡಿ ಎಂದು ಹೆಸರಿಡಲಾಗಿತ್ತು. ಅಂತೆಯೇ ಕೆನಡಿಯವರ ಕಾರ್ಯದರ್ಶಿಗೆ ಲಿಂಕನ್ ಎಂದು ಹೆಸರಿಡಲಾಗಿತ್ತು.



ಲಿಂಕನ್ ಹಾಗೂ ಕೆನಡಿಯವರ ಹತ್ಯೆಯ ನಂತರ ಅಮೆರಿಕದ ಅಧ್ಯಕ್ಷರಾಗಿ ಅಧಿಕಾರ ವಹಿಸಿಕೊಂಡವರು ಜಾನ್ಸನ್ ಎಂಬ ಹೆಸರಿನವರಾಗಿದ್ದರು: ಆಂಡ್ರೂ ಜಾನ್ಸನ್ ಮತ್ತು ಲಿಂಡನ್ ಜಾನ್ಸನ್. ಇವರಿಬ್ಬರೂ ಅಮೆರಿಕದ ದಕ್ಷಿಣ ಭಾಗಕ್ಕೆ ಸೇರಿದವರಾಗಿದ್ದರು. ಇನ್ನೊಂದು ವಿಶೇಷ ಎಂದರೆ ಲಿಂಕನ್ ಉತ್ತರಾಧಿಕಾರಿಯಾಗಿ ಅಮೆರಿಕದ ಅಧ್ಯಕ್ಷರಾದ ಆಂಡ್ರೂ ಜಾನ್ಸನ್ ಹುಟ್ಟಿದ್ದು 1808ರಲ್ಲಿ, ಕೆನಡಿಯವರ ಉತ್ತರಾಧಿಕಾರಿಯಾಗಿ ಅಮೆರಿಕದ ಅಧ್ಯಕ್ಷರಾದ ಲಿಂಡನ್ ಜಾನ್ಸನ್ ಹುಟ್ಟಿದ್ದು 1908ರಲ್ಲಿ. ಅಂದರೆ ಆಂಡ್ರೂ ಜಾನ್ಸನ್ ಹುಟ್ಟಿದ ಸರಿಯಾಗಿ 100 ವರ್ಷಕ್ಕೆ.


ಲಿಂಕನ್ ಅವರನ್ನು ಫೋರ್ಡ್ ಹೆಸರಿನ ಥಿಯೇಟರ್‌ನಲ್ಲಿ ಗುಂಡಿಟ್ಟು ಕೊಲ್ಲಲಾಯಿತು. ಕೆನಡಿಯವರನ್ನು ಫೋರ್ಡ್ ಸಂಸ್ಥೆ ತಯಾರಿಸಿದ 'ಲಿಂಕನ್' ಎಂಬ ಹೆಸರಿನ ಕಾರಿನಲ್ಲಿ ಗುಂಡಿಟ್ಟು ಕೊಲ್ಲಲಾಯಿತು. ಲಿಂಕನ್ ಅವರನ್ನು ಥಿಯೇಟರಿನಲ್ಲಿ ಕೊಂದ ಹಂತಕ ಅಲ್ಲಿಂದ ಓಡಿಹೋಗಿ ಸರಕುಗಳನ್ನು ಸಂಗ್ರಹಿಸಿಟ್ಟಿರುವ ಗೋಡನ್‌ನಲ್ಲಿ ಅವಿತು ಕುಳಿತಿದ್ದ. ಕೆನಡಿಯವರನ್ನು ಸರಕುಗಳನ್ನು ಸಂಗ್ರಹಿಸಿಡುವ ಗೋಡನ್‌ನಿಂದ ಗುಂಡುಹಾರಿಸಿ ಕೊಂದ ಹಂತಕ ಥಿಯೇಟರ್‌ನಲ್ಲಿ ಅವಿತುಕೊಂಡಿದ್ದ. ಇಬ್ಬರೂ ಹಂತಕರನ್ನು ವಿಚಾರಣೆ ನಡೆಯುವ ಮೊದಲೇ ಕೊಂದು ಹಾಕಲಾಯಿತು.

ಹತ್ಯೆಗೊಳಗಾಗುವ ಒಂದು ವಾರ ಮುಂಚೆ ಲಿಂಕನ್ ಮೇರಿಲ್ಯಾಂಡ್‌ನ ಮನ್ರೋ ಎಂಬ ಜಾಗದಲ್ಲಿದ್ದರು. ಹತ್ಯೆಗೊಳಗಾಗುವ ಒಂದು ವಾರ ಮುಂಚೆ ಕೆನಡಿಯವರು ಮರ್ಲಿನ್ ಮನ್ರೋ ಎಂಬ ವಿಖ್ಯಾತ ಬ್ಯೂಟಿ ಕ್ವೀನ್ ಜೊತೆಗಿದ್ದರು.

ಎಂಥ ವಿಚಿತ್ರ ಕಾಕತಾಳೀಯವಲ್ಲವೆ?

ಉದಾರೀಕರಣ: 'ಅದಿರಿ'ಕರಣ, 'ಉದರೀ'ಕರಣ!


● ಪಿ.ಕೆ. ಮಲ್ಲನಗೌಡರ್



ದೇಶದ ಅಮೂಲ್ಯ ಸಂಪತ್ತನ್ನು ಲೂಟಿ ಹೊಡೆದು ನಾಲ್ಕು ಸಾವಿರ ಕೋಟಿ ರೂಪಾಯಿಗಳ ಹಗರಣ ಸೃಷ್ಟಿಸಿರುವ ಜಾರ್ಖಂಡಿನ ಮಾಜಿ ಮುಖ್ಯಮಂತ್ರಿ ಮಧು ಕೋಡಾ ಏನೂ ಆಗೇ ಇಲ್ಲ ಎಂಬಂತೆ ತಿರುಗುತ್ತಿದ್ದಾನೆ.

25 ವರ್ಷ ಹಿಂದಕ್ಕೆ ಹೋಗಿ. ಆಗೇನಾದರೂ ಈ ಹಗರಣ ನಡೆದಿದ್ದರೆ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗುತ್ತಿತ್ತು, ಬೀದಿಬೀದಿಗಳಲ್ಲಿ ಪ್ರತಿಭಟನಾ ರ್‍ಯಾಲಿ ನಡೆಯುತ್ತಿದ್ದವು. ಸಂಸತ್ತಿನಲ್ಲಿ ಕೋಲಾಹಲವಾಗುತ್ತಿತ್ತು. 1985-86ರ ಅವಧಿಯಲ್ಲಿ ರಾಜೀವ್ ಗಾಂಧಿ ಸರ್ಕಾರದ ಬೋಫೋರ್ಸ್ ಹಗರಣ ಸರ್ಕಾರವನ್ನೇ ಬಲಿ ತೆಗೆದುಕೊಂಡಿತ್ತು. ಅದು ಕೇವಲ (!) 65 ಕೋಟಿ ಮೊತ್ತದ ಹಗರಣ. ಆದರೀಗ ಸಾವಿರ ಕೋಟಿ ಹಗರಣಗಳು ಕಾಮನ್ ಆಗಿಹೋಗಿವೆ. ರೆಡ್ಡಿ ಮತ್ತು ಕೋಡಾಗಳಂತಹ ಗಣಿಗಳ್ಳರೇ ಇವತ್ತು ರಾಜಕೀಯ ವ್ಯವಸ್ಥೆಯನ್ನೇ ನಿಯಂತ್ರಿಸುವ ಮಟ್ಟಕ್ಕೆ ಬಂದಿದ್ದಾರೆ.

ಅಂದರೆ ಇದು 1991ರ ನಂತರ ಅಟಕಾಯಿಸಿಕೊಂಡ ಮುಕ್ತ ಮಾರುಕಟ್ಟೆ ಸೃಷ್ಟಿಸಿರುವ ಅರಾಜಕ ಸ್ಥಿತಿ. ಕೆಲವೇ ಕೆಲವು ತಿಮಿಂಗಿಲಗಳಿಗೆ ರಾಷ್ಟ್ರ ಸಂಪತ್ತನ್ನು ಕೊಳ್ಳೆ ಹೊಡೆಯಲು ಬಿಟ್ಟು ದಿನೇ ದಿನೇ ಸಾಮಾಜಿಕ, ಆರ್ಥಿಕ ಅಸಮಾನತೆಯನ್ನು ಹೆಚ್ಚಿಸುತ್ತ ಸಾಗಿದೆ ನಮ್ಮ ಈ ಉದಾರೀಕರಣ ನೀತಿ.




1948ರಲ್ಲಿ ಸೈನ್ಯಕ್ಕೆಂದು ಜೀಪ್‌ಗಳನ್ನು ಖರೀದಿಸುವಾಗ 84 ಲಕ್ಷ ರೂ.ಗಳ ಹಗರಣ ನಡೆದಾಗ, ಬ್ರಿಟನ್ನಿನಲ್ಲಿ ಭಾರತದ ಹೈ ಕಮೀಷನರ್ ಆಗಿದ್ದ ವಿ.ಕೆ. ಕೃಷ್ಣನ್ ಮೆನನ್ ವಿರುದ್ಧ ಸಂಸತ್ತಿನಲ್ಲಿ ಭಾರೀ ಟೀಕೆ, ವಿಮರ್ಶೆ ಕೇಳಿ ಬಂದಿದ್ದವು.

ಆದರೆ ಈಗ? ದೇಶದ ಒಟ್ಟು ಖನಿಜ ಸಂಪತ್ತಿನಲ್ಲಿ ಶೇ.18 ರಷ್ಟನ್ನು ಹೊಂದಿರುವ ಜಾರ್ಖಂಡ್ ರಾಜ್ಯವನ್ನೇ ಕಾರ್ಪೊರೇಟ್ ಕಂಪೆನಿಗಳಿಗೆ ಹರಾಜು ಹಾಕಿದ ಮಧು ಕೋಡಾನನ್ನು ಪ್ರಶ್ನಿಸುವರೇ ಇಲ್ಲ, ಆದರೆ ಆ ಖನಿಜ ಸಂಪತ್ತಿನ ಮೇಲೆ ನೈಜ ಅಧಿಕಾರ ಹೊಂದಿರುವ ಆದಿವಾಸಿಗಳು ಇಂತಹ ನಿತ್ಯ ಲೂಟಿಗಳಿಗೆ ಪ್ರತಿರೋಧ ಒಡ್ಡುತ್ತಿದ್ದಾರೆ ಎಂಬ ಕಾರಣಕ್ಕೆ ಅವರ ಮೇಲೆ 'ಆಪರೇಷನ್ ಗ್ರೀನ್ ಹಂಟ್' ಎಂಬ ಯುದ್ಧ!

91ರ ಹಿಂದಿನ ಲೈಸೆನ್ಸ್ ರಾಜ್‌ಗಿಂತ ಭೀಕರವಾಗಿರುವ ಈಗಿನ ಉದಾರೀಕರಣ ನೀತಿಯು ಸೃಷ್ಟಿಸಿರುವ ಹಗರಣಗಳನ್ನು ನೋಡಿ: 1992ರ ನಂತರ ಬಯಲಾಗಿರುವ ಪ್ರಮುಖ ಹಗರಣಗಲಲ್ಲಿ ನಡೆದ ಲೂಟಿಯ ಮೊತ್ತ 74000000000000 ರೂ. ಮಾತ್ರ!

74ರ ಮುಂದೆ ಹನ್ನೆರಡು ಸೊನ್ನೆ ಮಾತ್ರ!!


ಅಂದರೆ 74 ಲಕ್ಷ ಕೋಟಿ ರೂ.ಗಳು!!!



1992	ಹರ್ಷದ್ ಮೆಹ್ತಾ ಸೆಕ್ಯುರಿಟಿಸ್ ಹಗರಣ:	5,000 ಕೋಟಿ ರೂ.
1994	ಸಕ್ಕರೆ ಆಮದು ಹಗರಣ:	650 ಕೋಟಿ ರೂ.
1995	ಪ್ರೆಫರೆಂಟಲ್ ಅಲಾಟ್‌ಮೆಂಟ್ ಹಗರಣ:	5,000 ಕೋಟಿ ರೂ.
	ಯುಗೋಸ್ಲಾವ್ ದಿನಾರ್ ಹಗರಣ:	400 ಕೋಟಿ ರೂ.
1996	ಗೊಬ್ಬರ ಹಗರಣ:	1,300 ಕೋಟಿ ರೂ.
	ಯೂರಿಯಾ ಹಗರಣ:	133 ಕೋಟಿ ರೂ.
	ಬಿಹಾರಿನ ಮೇವು ಹಗರಣ:	950 ಕೋಟಿ ರೂ.
1997	ಸುಖರಾಮ್ ಟೆಲಿಕಾಂ ಹಗರಣ:	1,500 ಕೋಟಿ ರೂ.
	ಎಸ್‌ಎನ್‌ಸಿ ಲವ್ಲಿನ್ ವಿದ್ಯುತ್ ಪ್ರಾಜೆಕ್ಟ್ ಹಗರಣ:	374 ಕೋಟಿ ರೂ.
	ಬಿಹಾರ್ ಭೂ ಹಗರಣ:	400 ಕೋಟಿ ರೂ.
	ಸಿಆರ್ ಭನ್ಸಾಲಿ ಷೇರು ಹಗರಣ:	1,200 ಕೋಟಿ ರೂ.
1998	ಟೀಕ್ ಪ್ಲಾಂಟೇಷನ್ ಹಗರಣ:	1,800 ಕೋಟಿ ರೂ.
2001	ಯುಟಿಐ ಹಗರಣ:	4,800 ಕೋಟಿ ರೂ.
	ದಿನೇಶ್ ಡಾಲ್ಮಿಯಾ ಷೇರು ಹಗರಣ:	595 ಕೋಟಿ ರೂ.
	ಕೇತನ್ ಪಾರೇಖ್ ಷೇರು ಹಗರಣ:	1,250 ಕೋಟಿ ರೂ.
2002	ಸಂಜಯ್ ಅಗರವಾಲ್ ಹೋಮ್‌ಟ್ರೆಡ್ ಹಗರಣ:	600 ಕೋಟಿ ರೂ.
2003	ತೆಲಗಿ ಸ್ಟಾಂಪ್ ಪೇಪರ್ ಹಗರಣ:	172 ಕೋಟಿ ರೂ.
2005	ಐಪಿಒ-ಡಿಮ್ಯಾಟ್ ಹಗರಣ:	146 ಕೋಟಿ ರೂ.
	ಬಿಹಾರ್ ನೆರೆ ಪರಿಹಾರ ಹಗರಣ:	17 ಕೋಟಿ ರೂ.
	ಸ್ಕಾರ್ಪಿನ್ ಸಬ್‌ಮೆರಿನ್ ಹಗರಣ:	18,978 ಕೋಟಿ ರೂ.
2006	ಪಂಜಾಬಿನ ಸಿಟಿಸೆಂಟರ್ ಪ್ರಾಜೆಕ್ಟ್ ಹಗರಣ:	1,500 ಕೋಟಿ ರೂ.
	ತಾಜ್ ಕಾರಿಡಾರ್ ಹಗರಣ:	175 ಕೋಟಿ ರೂ.
2008	ಪುಣೆಯ ಹಸನ್ ಅಲಿಖಾನ್ ತೆರಿಗೆ ವಂಚನೆ	50,000 ಕೋಟಿ ರೂ.
	ಸತ್ಯಂ ಹಗರಣ:	10,000 ಕೋಟಿ ರೂ.
	2-ಜಿ ತರಂಗಾಂತರದ ಟೆಲಿಕಾಂ ಹಗರಣ:	60,000 ಕೋಟಿ ರೂ.
	ಸ್ಟೇಟ್ ಬ್ಯಾಂಕ್ ಆಫ್ ಸೌರಾಷ್ಟ್ರದ ಹಗರಣ:	95 ಕೋಟಿ ರೂ.
	ಸ್ವಿಸ್ ಬ್ಯಾಂಕ್‌ನ ಅಕ್ರಮ ಅಂದಾಜು ಹಣ:	71,00,000 ಕೋಟಿ ರೂ.
2009	ಜಾರ್ಖಂಡಿನ ವೈದ್ಯಕೀಯ ಉಪಕರಣ ಹಗರಣ	130 ಕೋಟಿ ರೂ.
	ಅಕ್ಕಿ ರಫ್ತು ಹಗರಣ:	2,500 ಕೋಟಿ ರೂ.
	ಒರಿಸ್ಸಾ ಗಣಿ ಹಗರಣ:	7000 ಕೋಟಿ ರೂ.
	ಮಧುಕೋಡಾ ಗಣಿ ಹಗರಣ:	4,000 ಕೋಟಿ ರೂ.

● (ಮಾಹಿತಿ ಮೂಲ: ಔಟ್‌ಲುಕ್ ಪತ್ರಿಕೆ)

ಈ 73 ಲಕ್ಷ ಕೋಟಿ ರೂ.ಗಳಲ್ಲಿ ಏನೇನು ಮಾಡಬಹುದಿತ್ತು?



ಈ ಕೆಳಗಿನ ಯಾವುದಾದರೊಂದನ್ನು ಆರಾಮವಾಗಿ ಮಾಡಬಹುದಿತ್ತು.

1.4 ಕೋಟಿ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಸ್ಥಾಪನೆ. ಪ್ರತಿಹಳ್ಳಿಗೆ 3 ಕೇಂದ್ರ, ತಲಾ 30 ಲಕ್ಷ ರೂ. ವೆಚ್ಚದಲ್ಲಿ.

24.1 ಲಕ್ಷ ಕೇಂದ್ರೀಯ ವಿದ್ಯಾಲಯ ಸ್ಥಾಪನೆ.

14.6 ಕೋಟಿ ಮನೆ ಕಟ್ಟುವುದು. ಪ್ರತಿಯೊಂದಕ್ಕೆ 5 ಲಕ್ಷ ವೆಚ್ಚ ಮಾಡುವುದು.

2,703 ಕಲ್ಲಿದ್ದಲು ಆಧಾರಿತ ವಿದ್ಯುತ್ ಸ್ಟೇಷನ್‌ಗಳ ಸ್ಥಾಪನೆ.

12 ಲಕ್ಷ ಸಿಎಫ್‌ಎಲ್ ಬಲ್ಬ್‌ಗಳನ್ನು ಜನರಿಗೆ ಹಂಚಬಹುದಿತ್ತು. ಆಗ ಭಾರತದ ಎಲ್ಲ ಹಳ್ಳಿಗಳೂ ಬೆಳಗುತ್ತಿದ್ದವು.

14.6 ಲಕ್ಷ ಕಿ.ಮೀ. ಉದ್ದದ ಎರಡು ಪಥದ ಹೆದ್ದಾರಿ ನಿರ್ಮಾಣ

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಮಾದರಿಯ 90 ಸ್ಕೀಮ್‌ಗಳನ್ನು ಆರಂಭಿಸಬಹುದಿತ್ತು.

ಮುಂದಿನ 121 ವರ್ಷಗಳಿಗೆ ಸ್ವಚ್ಛವಾಗುವಂತೆ 50 ಪ್ರಮುಖ ನದಿಗಳನ್ನು ಶುದ್ಧೀಕರಿಸಬಹುದಿತ್ತು.

121 ಸಾಲ ಮನ್ನಾ ಯೋಜನೆ ಜಾರಿಗೆ. ಪ್ರತಿಯೊಂದು 60 ಸಾವಿರ ಕೋಟಿಯ ಯೋಜನೆ.

ಪ್ರತಿ ಭಾರತೀಯನಿಗೆ 56,000 ನೀಡಬಹುದಿತ್ತು ಅಥವಾ ಬಿಪಿಎಲ್ ವ್ಯಾಪ್ತಿಗೆ ಬರುವ 40 ಕೋಟಿ ಜನರಿಗೆ ತಲಾ 1.82 ರೂ. ಲಕ್ಷ ನೀಡಬಹುದಿತ್ತು.

60.8 ಕೋಟಿ ಜನರಿಗೆ ತಲಾ ಒಂದು ಟಾಟಾ ನ್ಯಾನೋ ಕಾರು ಕೊಡಬಹುದಿತ್ತು.

ಈ ಹಗರಣದ ಮೊತ್ತ ನಮ್ಮ ಜಿಡಿಪಿ ಮೊತ್ತಕ್ಕಿಂತ ಶೇ 27 ಹೆಚ್ಚಿದೆ. ಈ ಹಣ ಬಳಸಿ ಜಿಡಿಪಿಯನ್ನು ಗಗನಕ್ಕೇರಿಸಬಹುದಿತ್ತು.

****

ಹಾಗಾದರೆ ಈಗ ಬೇಕಾಗಿರುವುದು 'ಆಪರೇಷನ್ ಗ್ರೀನ್‌ಹಂಟ್' ಅಲ್ಲ; 'ಆಪರೇಷನ್ ಕರಪ್ಟ್ ಹಂಟ್' ಅಲ್ಲವೇ?

ಜೆಡಿಎಸ್ ಮುಖಂಡ ಬಾಬುರೆಡ್ಡಿಯ ಹತ್ಯೆ

ಹೆಬ್ಬಗೋಡಿಯ ರಕ್ಕಸ ಬ್ರದರ್ಸ್

ಹೊಸೂರು ರಸ್ತೆಯ ಚಂದಾಪುರವೆಂಬ ಊರಿಗೆ ಊರೇ ರೊಚ್ಚಿಗೆದ್ದು ಒಂದು ಲಾಡ್ಜು ಮತ್ತೊಂದು ಮನೆ, ಮಗದೊಂದು ಸ್ಕಾರ್ಪಿಯೋ ಗಾಡಿಗೆ ಬೆಂಕಿಯಿಟ್ಟಿದೆ. ಕೊಲೆಯಾದ ಬಾಬುರೆಡ್ಡಿ ಅಲಿಯಾಸ್ ಆನಂದ ರೆಡ್ಡಿಯ ಹಂತಕರ ವಿರುದ್ಧ ಈ ಸುತ್ತಮುತ್ತಲ ಬಸನಹಳ್ಳಿ, ಹೆಬ್ಬಗೋಡಿ, ಕಿತ್ತಗಾನಹಳ್ಳಿ, ಅತ್ತಿಬೆಲೆ ಇತ್ಯಾದಿ ಊರುಗಳ ಗ್ರಾಮಸ್ಥರಿಗಿದ್ದ ಆಕ್ರೋಶ ಇಷ್ಟಕ್ಕೇ ನಿಲ್ಲುವ ಲಕ್ಷಣಗಳಿಲ್ಲ.


ಬೆಂಗಳೂರು-ಹೊಸೂರು ರಸ್ತೆಯ ಚಂದಾಪುರಕ್ಕೆ ಹೊಂದಿಕೊಂಡಂತೆ ತಲೆ ಎತ್ತಿದ ನಾರಾಯಣ ಹೃದಯಾಲಯ. ಅಲ್ಲಿಗೆ ದಾಖಲಾದ ರೋಗಿಗಳ ಸಂಬಂಧಿಗಳು ತಂಗುತ್ತಿದ್ದ ವಿಷ್ಣು ಡಾಬಾ ಎಂಬ ಲಾಡ್ಜು, ಅಲ್ಲಿ ನಡೆಯುತ್ತಿದ್ದ ಅನೈತಿಕ ದಂಧೆಗಳು, ಅದರ ಮಾಲೀಕರಾದ ವೆಂಕಟೇಶ್ ರೆಡ್ಡಿ ಮತ್ತು ಶ್ರೀನಿವಾಸ ರೆಡ್ಡಿ ಎಂಬಿಬ್ಬರು ಸಹೋದರ ಕುಖ್ಯಾತಿ, ಇವರಿಬ್ಬರ ಗೂಂಡಾಗಿರಿ ಮತ್ತು ರಿಯಲ್ ಎಸ್ಟೇಟ್ ಕೊಳ್ಳೆಯ ವಿರುದ್ಧ ಸುತ್ತಮುತ್ತಲ ಜನಕ್ಕೆ ಅದಿನ್ನೆಂಥ ಆಕ್ರೋಶವಿತ್ತೆಂಬುದಕ್ಕೆ ನವೆಂಬರ್ 16 ದೊಂಬಿಯೊಂದೇ ಸಮರ್ಥನೆಯಂತಿತ್ತು.

ಈ ಧೂರ್ತ ಸಹೋದರರ ದುರಾಚಾರಕ್ಕೆ ಬಲಿಯಾದ ಚಂದಾಪುರ ಬನಹಳ್ಳಿಯ ಬಾಬುರೆಡ್ಡಿ ಅಲಿಯಾಸ್ ಆನಂದ ರೆಡ್ಡಿಯ ವಿಧವಾ ಪತ್ನಿ ಸುಮಾಳ ಆಕ್ರಂದನ, ಆಕೆಯ ಏಳು ವರ್ಷದ ಮಗನ ಗೋಳಾಟ ಮತ್ತು ಕಣ್ಣೀರಿಡುವ ಚಂದಾಪುರದ ಗ್ರಾಮಸ್ಥರನ್ನು ಕಂಡ ಯಾರಿಗಾದರೂ ಆತ ಎಂಥಾ ವ್ಯಕ್ತಿ ಎಂಬುದು ಗೊತ್ತಾಗಲೇಬೇಕು. ಇವತ್ತು ಜೈಲುಪಾಲಾದ ವೆಂಕಟೇಶ್ ರೆಡ್ಡಿ ಮತ್ತು ಶ್ರೀನಿವಾಸ್ ರೆಡ್ಡಿ ಇದೇ ಬಾಬು ರೆಡ್ಡಿಯೇ ಸಾಕಿದ ಸರ್ಪಗಳು!



ಬಾಬು ತಂದೆ-ತಾಯಿ

ಇವತ್ತು ಕಮ್ಮಿಯೆಂದರೂ ಹತ್ತು ಕೋಟಿಯ ಆಸ್ತಿವಂತರಾದ ಚಂದಾಪುರದ ವೆಂಕಟೇಶ್ ರೆಡ್ಡಿಯನ್ನು ಸಾಕಿ, ಸಲುಹಿ, ಬೆಳೆಸಿದ್ದೇ ಬಾಬುರೆಡ್ಡಿ. ಚಂದಾಪುರದ ಪಕ್ಕದ ಬನಹಳ್ಳಿಯ ಬಾಬು ರೆಡ್ಡಿ ಸ್ಥಳೀಯ ಜೆಡಿಎಸ್ ನಾಯಕ. ಸಣ್ಣಮಟ್ಟ ಫೈನಾನ್ಸಿಂಗ್ ಬಿಟ್ಟರೆ ಸಮಾಜಸೇವೆ ಆತನ ಫುಲ್ ಟೈಂ ಕಾಯಕ. ರಾಜ್ಯೋತ್ಸವ, ಅಣ್ಣಮ್ಮ, ರಕ್ತದಾನ ಶಿಬಿರಗಳ ಮೂಲಕವೇ ಜನಾನುರಾಗಿಯಾಗಿದ್ದ ಬಾಬು ರೆಡ್ಡಿ ಕೊನೆಗೊಮ್ಮೆ ತನ್ನ ಪರೋಪಕಾರಿ ಬುದ್ಧಿಗೆ ಬಲಿಯಾಗುತ್ತಾನೆಂದು ಯಾರಿಗೆ ಗೊತ್ತಿತ್ತು?

ಇಂತಹ ಬಾಬುರೆಡ್ಡಿಗೆ ಗಂಟು ಬಿದ್ದವರೆ ವೆಂಕಟೇಶ್ ರೆಡ್ಡಿ ಮತ್ತು ಶ್ರೀನಿವಾಸ್ ರೆಡ್ಡಿ ಎಂಬಿಬ್ಬರು ಧೂರ್ತ ಸಹೋದರರು. ಒಂದಾನೊಂದು ಕಾಲಕ್ಕೆ ಕೃಷಿ ಇಲಾಖೆಯಲ್ಲಿದ್ದ ಯಲ್ಲಾರೆಡ್ಡಿ ಎಂಬಾತನ ಎರಡನೇ ಪತ್ನಿಯ ಮಕ್ಕಳಿವರು. ಅಪ್ಪ ಯಲ್ಲಾರೆಡ್ಡಿ ಆ ಕಾಲಕ್ಕೆ ಎರಡು ಅನಾಹುತಕಾರಿ ಕೊಲೆ ಮಾಡಿ ಊರು ಬಿಟ್ಟಿದ್ದ. ಚಂದಾಪುರದ ಪಕ್ಕದ ಚಿಕ್ಕನಹಳ್ಳಿಯಲ್ಲಿ ಒಪ್ಪತ್ತು ಊಟಕ್ಕೂ ತಡಕಾಡುತ್ತಿದ್ದ ಈ ನಿರ್ಗತಿಕ ಸಹೋದರರ ನೆರವಿಗೆ ನಿಂತು ಬಾಬುರೆಡ್ಡಿ ಸರಿಸುಮಾರು ನಲ್ವತ್ತು ಲಕ್ಷ ರೂಪಾಯಿಗಳಷ್ಟು ಸಾಲ ಕೊಟ್ಟು ಅಣ್ಣ ತಮ್ಮಂದಿರಿಬ್ಬರನ್ನೂ ಉದ್ಧಾರ ಮಾಡದೇ ಹೋಗಿದ್ದರೆ ಇವತ್ತು ಆತ ಕೊಲೆಯಾಗುತ್ತಿರಲಿಲ್ಲ.


ಬಾಬು ಪತ್ನಿ ಸುಮಾ

ಬಾಬುರೆಡ್ಡಿಯಿಂದ ಪಡೆದ ಸಾಲದಲ್ಲೇ ವೆಂಕಟೇಶ್ ರೆಡ್ಡಿ ವಿಷ್ಣು ಡಾಬಾ ಎಂಬ ನಾಲ್ಕಂತಸ್ತಿನ ಲಾಡ್ಜ್ ಕಟ್ಟಿಸಿದ. ಅದಕ್ಕೆ ಹೊಂದಿಕೊಂಡಂತೆ ತನ್ನ ಮಗಳ ಹೆಸರಲ್ಲಿ ಶ್ವೇತಾ ಸಾಗರ್ ಎಂಬ ಫಾಸ್ಟ್‌ಫುಡ್ ಕ್ಯಾಂಟೀನನ್ನು ತೆರೆದ. ಚಂದಾಪುರದ ಬಸ್‌ಸ್ಟ್ಯಾಂಡ್‌ಗೆ ಹೊಂದಿಕೊಂಡಂತಿದ್ದ ವಿಷ್ಣು ಡಾಬಾದ ಎದುರೇ ನಾರಾಯಣ ಹೃದಯಾಲಯ ಬಂತು. ಅಲ್ಲಿನ ಹೃದ್ರೋಗಿಗಳ ಸಂಬಂಧಿಕರೆಲ್ಲ ಅಲ್ಲೇ ತಂಗಲು ಪ್ರಾರಂಭಿಸುತ್ತಿದ್ದಂತೆ ವೆಂಕಟೇಶನಿಗೆ ದುಡ್ಡು ಹರಿದುಬಂತು. ಸಾಲದಕ್ಕೆ ವಿಷ್ಣು ಡಾಬಾದ ಒಂದು ಮಹಡಿ ತುಂಬ ಒಂದಷ್ಟು ಹುಡುಗಿಯರನ್ನು ಜಮಾಯಿಸಿದ್ದೇ ಮೈಕಸುಬು ದಂಧೆಗೂ ವೆಂಕಟೇಶ್‌ರೆಡ್ಡಿ ಕೈಯಿಟ್ಟ.


ಆನಂದ ರೆಡ್ಡಿ ಅಲಿಯಾಸ್ ಬಾಬು

ಮೊದಲೇ ಸದಾ ಗಿಜಿಗುಡುವ ಹೊಸೂರು ರಸ್ತೆ ಅತ್ತಿಬೆಲೆ ಚೆಕ್‌ಪೋಸ್ಟ್ ಸುತ್ತ ತಲೆ ಎತ್ತಿದ ಕಳ್ಳಸಾಗಾಣಿಕೆದಾರರು, ರಿಯಲ್ ಎಸ್ಟೇಟ್ ಖದೀಮರು, ಇಸ್ಪೀಟು ವ್ಯಸನಿಗಳೆಲ್ಲರಿಗೂ ವಿಷ್ಣು ಡಾಬಾವೇ ಅಡ್ಡೆಯಾಯಿತು. ಇದಕ್ಕೆ ತಕ್ಕಂತೆ ವೆಂಕಟೇಶ್ ರೆಡ್ಡಿ ಮತ್ತು ಶ್ರೀನಿವಾಸ್ ರೆಡ್ಡಿ ಕಂಡಕಂಡವರ ಜಮೀನಿಗೆ ವಕ್ಕರಿಸಿ ತಮ್ಮದೇ ರೌಡಿ ಗ್ಯಾಂಗ್ ಕಟ್ಟಿಕೊಂಡರು. ಇಷ್ಟೆಲ್ಲಾ ದುಡ್ಡು ಮಾಡಿದ ನಿಮಗೆ ನನಗೆ ಕೊಡಬೇಕಿದ್ದ ನಲವತ್ತು ಲಕ್ಷ ಸಾಲ ತೀರಿಸೋದು ಯಾವ ಲೆಕ್ಕ? ಎಂದು ವಸೂಲಿಗೆ ನಿಂತ ಬಾಬು ರೆಡ್ಡಿಯ ಉಪಕಾರವನ್ನು ಧೂರ್ತ ಸಹೋದರರು ಮರೆತುಬಿಟ್ಟರು.

ಈ ಮಧ್ಯೆ ಒಂದೆರಡು ಲ್ಯಾಂಡ್ ಡಿಸ್‌ಪ್ಯೂಟುಗಳಲ್ಲಿ ಬಾಬು ರೆಡ್ಡಿ ಬಡವರ ಪರ ನಿಂತು ವೆಂಕಟೇಶ್ ರೆಡ್ಡಿಗೆ ಬುದ್ಧಿ ಹೇಳಿದ್ದ. ಯಾವತ್ತು ತನಗೆ ಬರಬೇಕಿದ್ದ ಬಾಕಿಗಾಗಿ ಬಾಬು ರೆಡ್ಡಿಯ ಒತ್ತಾಯ ಜಾಸ್ತಿಯಾಯಿತೋ ಅಣ್ಣತಮ್ಮಂದಿರು ತಿರುಗಿ ಬಿದ್ದರು. ಹಾಗಂತ ಬಾಬು ರೆಡ್ಡಿ ಬಿಡಬೇಕಲ್ಲ- ವಿಷ್ಣು ಡಾಬಾದಲ್ಲಿ ನಡೆಯುತ್ತಿರುವ ಅನೈತಿಕ ಚಟುವಟಿಕೆಗಳ ವಿರುದ್ಧ ಪೊಲೀಸ್ ವರಿಷ್ಠರಿಗೆ ದೂರು ಕೊಟ್ಟ. ಜೊತೆಗೆ ತನ್ನ ಡಾಬಾಕ್ಕೆ ಹೊಂದಿಕೊಂಡಂತೆ ಖಾಲಿ ಬಿದ್ದಿದ್ದ ಐದು ಗುಂಟೆ ಭೂಮಿಗೆ ನಕಲಿ ದಾಖಲೆ ಸೃಷ್ಟಿಸಿ ಕೆಐಎಡಿಬಿಯ ಅಧಿಕಾರಿಗಳ ಮೂಲಕ ಅದನ್ನು ಲಪಟಾಯಿಸಲು ಯತ್ನಿಸಿದ ವೆಂಕಟೇಶನ ವಿರುದ್ಧ ಲೋಕಾಯುಕ್ತಕ್ಕೂ ದೂರು ಕೊಟ್ಟ.

ಈ ಬಗ್ಗೆ ತನಿಖೆ ನಡೆಸಿದ ಲೋಕಾಯುಕ್ತ ಕೆಐಎಡಿಬಿಯ ಖದೀಮರ ವಿರುದ್ಧ ನೋಟೀಸು ಕೊಟ್ಟಿದೆ. ಇದಕ್ಕೆ ಪೂರಕವೆಂಬಂತೆ ವಿಷ್ಣು ಡಾಬಾ ಎದುರು ಅಂಗಡಿ ಇಟ್ಟುಕೊಂಡಿದ್ದ ಮಲ್ಲೇಶ್ ರೆಡ್ಡಿ ಮತ್ತು ಕೃಷ್ಣಾ ರೆಡ್ಡಿ ಎಂಬಿಬ್ಬರು ಬಾಬುರೆಡ್ಡಿಯ ಬೆಂಬಲಿಗರು ಪರವಾನಗಿಯಿಲ್ಲದೇ ನಾಲ್ಕಂತಸ್ತು ಕಟ್ಟಿದ ವಿಷ್ಣು ಡಾಬಾದ ವಿರುದ್ಧ ದೂರು ದಾಖಲಿಸಿದ್ದಾರೆ. ಹೀಗೆ ಊರಿಗೆ ಊರೇ ದುಷ್ಟ ಬ್ರದರ್ಸ್ ವಿರುದ್ಧ ಕಿಡಿಕಾರುತ್ತಿದ್ದುದ್ದರ ಮಧ್ಯೆಯೇ ಚಂದಾಪುರದ ಹಿರಿಯರೆಲ್ಲ ಸೇರಿ ಪಂಚಾಯ್ತಿ ನಡೆಸಿ ಬಾಬುರೆಡ್ಡಿಗೆ ಕೊಡಬೇಕಿದ್ದ ನಲವತ್ತು ಲಕ್ಷವನ್ನು ತೀರಿಸುವಂತೆ ವೆಂಕಟೇಶ್ ರೆಡ್ಡಿ ಮತ್ತು ಶ್ರೀನಿವಾಸ್ ರೆಡ್ಡಿಗೆ ತಾಕೀತು ಮಾಡಿದ್ದಾರೆ.

ಇದಕ್ಕೆ ಮರ್ಯಾದೆ ಕೊಟ್ಟಂತೆ ನಟಿಸಿದ ರೆಡ್ಡಿ ಬ್ರದರ್ಸ್ ಆನೇಕಲ್ ತಾಲ್ಲೂಕು ಬಗ್ಗನದೊಡ್ಡಿಯಲ್ಲಿದ್ದ ಎರಡೆಕರೆ ಜಮೀನಿನಲ್ಲಿ ಒಂದೆಕರೆಗೆ ಬಾಬುರೆಡ್ಡಿ ಹೆಸರಿಗೆ ಜಿಪಿಎ ಮಾಡಿಸಿಕೊಟ್ಟಿದ್ದಾರೆ. ಹೆಚ್ಚುವರಿಯಾಗಿ ವೆಂಕಟೇಶ್ ರೆಡ್ಡಿ ಬಾಬುರೆಡ್ಡಿಗೆ ಎರಡು ಲಕ್ಷದ ಚೆಕ್ ಕೊಟ್ಟು ಮೇಲು ಕಾಸೆಂದು ಐವತ್ತು ಸಾವಿರ ರೂಪಾಯಿ ನಗದನ್ನೂ ಕೊಟ್ಟಿದ್ದ. ಯಾವತ್ತು ಎರಡು ಲಕ್ಷದ ಚೆಕ್ ಬೌನ್ಸ್ ಆಯಿತೋ ಮತ್ತೆ ಊರಹಿರಿಯರು ಪಂಚಾಯ್ತಿ ಕರೆದು ಒಂದೋ ಎರಡು ಲಕ್ಷ ಕೊಡು ಇಲ್ಲಾಂದ್ರೆ ನಿನ್ನ ಲಾಡ್ಜ್ ಪಕ್ಕದ ಐದು ಗುಂಟೆ ಕೆಐಎಡಿಬಿ ಜಾಗದಲ್ಲಿ ಒಂದು ಗುಂಟೆಯನ್ನು ಬಾಬುರೆಡ್ಡಿಗೆ ಬರೆದುಕೊಡು ಎಂದಿದ್ದಾರೆ.

ಪಂಚಾಯ್ತಿ ಹಿರಿಯರ ಮುಂದೆ ತಲೆತಗ್ಗಿಸಿ ಎಲ್ಲಕ್ಕೂ ಒಪ್ಪಿಕೊಂಡು ಬಂದ ಖದೀಮ ಸಹೋದರರು ಬೇರೆಯದೇ ಲೆಕ್ಕ ಹಾಕಿದ್ದಾರೆ. ಮೊದಲೇ ಇಡೀ ಊರಿಗೆ ಊರೇ ತಿರುಗಿಬಿದ್ದಿದೆ. ಇನ್ನು ಬಾಬುರೆಡ್ಡಿಗೆ ಕೊಡಬೇಕಿದ್ದ ನಲವತ್ತು ಲಕ್ಷದ ಬಾಕಿ ಕೊಟ್ಟರೆ ಮತ್ತಷ್ಟು ಅವಮಾನವಾಗುತ್ತದೆ. ಅದರ ಬದಲಿಗೆ ಬಾಬುರೆಡ್ಡಿಯನ್ನೇ ಮುಗಿಸಿಬಿಟ್ಟರೆ?

ಕೊಡಬೇಕಿದ್ದ ದುಡ್ಡೂ ಉಳಿಯುತ್ತದೆ. ತಿರುಗಿಬಿದ್ದ ಊರ ಜನಕ್ಕೆ ತಕ್ಕ ಪಾಠ ಕಲಿಸಿದಂತಾಗುತ್ತದೆ. ಕನಿಷ್ಠ ತಮ್ಮ ಗೂಂಡಾಗಿರಿಗಾದರೂ ಜನ ಹೆದರಿ ತೆಪ್ಪಗಾಗುತ್ತಾರೆಂದು ಲೆಕ್ಕ ಹಾಕಿದ ಅಣ್ಣ ತಮ್ಮಂದಿರಿಬ್ಬರೂ ಸರಿಯಾದ ಸ್ಕೆಚ್ಚನ್ನೇ ಹೆಣೆದಿದ್ದಾರೆ. ಕೊಲೆಯ ಹಿಂದಿನ ದಿನ ಅಂದರೆ ನವೆಂಬರ್ ಹತ್ತರ ಬೆಳಗ್ಗೆ ಎಂಟೂವರೆ ಹೊತ್ತಿಗೆ ಚಂದಾಪುರದಿಂದ ತನ್ನ ಬನಹಳ್ಳಿಯ ಮನೆಗೆ ಬಾಬು ರೆಡ್ಡಿ ಸ್ಕೂಟರಿನಲ್ಲಿ ಹೊರಟರೆ ದಾರಿ ಮಧ್ಯೆಯೇ ಹಂತಕ ಪಡೆ ಹೊಂಚಿ ಕುಳಿತಿತ್ತು.

ಬರುತ್ತಿದ್ದ ಸ್ಕೂಟರಿಗೆ ಯಾವುದೋ ಕಾರೊಂದು ವೇಗವಾಗಿ ಬಂದು ಗುದ್ದಿದೆ. ಡಿಕ್ಕಿ ಹೊಡೆದ ರಭಸಕ್ಕೆ ಬಾಬುರೆಡ್ಡಿ ನೆಲಕ್ಕೆ ಬಿದ್ದು ರಕ್ತ ಕಾರುತ್ತಿದ್ದ. ಬಹುಶಃ ಒಂದೇ ಡಿಕ್ಕಿಗೆ ಬಾಬುರೆಡ್ಡಿ ಖಲಾಸ್ ಆಗುತ್ತಾನೆಂದೂ ಆಕ್ಸಿಡೆಂಟ್ ಬಣ್ಣ ಕಟ್ಟಿ ಕೇಸನ್ನೇ ಮುಚ್ಚಿ ಹಾಕುವುದೆಂದೂ ಲೆಕ್ಕ ಹಾಕಿದ್ದ ವೆಂಕಟೇಶ್ ರೆಡ್ಡಿ ಮತ್ತು ಶ್ರೀನಿವಾಸ ರೆಡ್ಡಿಗೆ ದಿಕ್ಕೇ ತೋಚದಂತಾಗಿದೆ. ತಕ್ಷಣವೇ ತಮ್ಮ ಲಾಡ್ಜಿನ ನೌಕರ ಮಂಜುನಾಥನ ಮೂಲಕ ಬಾಬುರೆಡ್ಡಿಯನ್ನು ಎಳೆದು ಕಾರಿಗೆ ಹಾಕಿಕೊಂಡಿದ್ದಾರೆ. ಕಾರಿನಲ್ಲೇ ಬೆಲ್ಟ್‌ನಿಂದ ಕತ್ತು ಬಿಗಿದು ಕೊಂದಿದ್ದಾರೆ. ಆನಂತರ ಸೀದಾ ತಮಿಳುನಾಡು ಗಡಿಯ ತಳಿ ರಸ್ತೆಯ ಮರಳವಾಡಿಗೆ ಹೆಣ ಸಾಗಿಸಿದ್ದೇ ಅಲ್ಲಿನ ನಿರ್ಜನ ಪೊದೆಗಳ ಮಧ್ಯೆ ಹೆಣಕ್ಕೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿದ್ದಾರೆ.

ಸಾಕಿ-ಬೆಳೆಸಿ ಸಾಲ ಕೊಟ್ಟು ತಮ್ಮೆಲ್ಲಾ ಉನ್ನತಿಗೆ ಕಾರಣನಾದ ಗುರುವನ್ನೇ ಅಮಾನುಷವಾಗಿ ಕೊಂದು ಹಾಕಿದ ರೆಡ್ಡಿ ಬ್ರದರ್ಸ್ ತಾವಿನ್ನು ಬಚಾವಾದಂತೆಯೇ ಎಂದು ಹಾಕಿದ ಲೆಕ್ಕಾಚಾರ ಉಲ್ಟಾ ಹೊಡೆದಿದೆ. ರಾತ್ರಿ ಹನ್ನೊಂದುವರೆಯಾದರೂ ಗಂಡ ಮನೆಗೆ ಬರದೇ ಹೋಗಿದ್ದಕ್ಕೆ ಕಂಗಾಲಾದ ಪತ್ನಿ ಸುಮಾ ತನ್ನೆಲ್ಲಾ ಸಂಬಂಧಿಗಳಿಗೆ ಫೋನ್ ಮಾಡಿದ್ದಾಳೆ. ಆಕೆಯ ತಂದೆ ಭದ್ರಾ ರೆಡ್ಡಿ ಹಳೇ ತಲೆಮಾರಿನ ರಾಜಕಾರಣಿ. ಒಂದಾನೊಂದು ಕಾಲಕ್ಕೆ ಮಾಜಿ ಮಂತ್ರಿ ವೈ. ರಾಮಕೃಷ್ಣರ ಅನುಯಾಯಿಯಾಗಿದ್ದಾತ. ಮರುದಿನವೇ ಚಂದಾಪುರ ಪೊಲೀಸ್ ಠಾಣೆಗೆ ಬಂದು ಅಳಿಯನ ನಾಪತ್ತೆ ಬಗ್ಗೆ ದೂರು ದಾಖಲಿಸಿದ್ದಾರೆ.


ವಿಷ್ಣು ಡಾಬಾ

ಮೊದಮೊದಲು ಎಲ್ಲೋ ಟ್ರಿಪ್ಪಿಗೆ ಹೋಗಿರಬೇಕೆಂದು ಲೆಕ್ಕ ಹಾಕಿದ ಚಂದಾಪುರದ ಸಬ್ ಇನ್ಸ್‌ಪೆಕ್ಟರ್ ಮಂಜುನಾಥ್‌ರಿಗೆ ದಿನಕಳೆದಂತೆ ಕೊಲೆಯ ವಾಸನೆ ಹತ್ತಿದೆ. ಅದಕ್ಕೆ ತಕ್ಕಂತೆ ಎಸ್ಪೈ ವಿರೂಪಾಕ್ಷಸ್ವಾಮಿ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಯಲ್ಲಗಯ್ಯ ಸೇರಿಕೊಂಡು ವೆಂಕಟೇಶ್ ಮತ್ತು ಶ್ರೀನಿವಾಸ್‌ರನ್ನು ಎಳೆತಂದು ರುಬ್ಬಿದ್ದಾರೆ. ಕೊನೆಗೂ ಬಾಯಿಬಿಟ್ಟ ಧೂರ್ತ ಬ್ರದರ್ಸ್ ಬಾಬುರೆಡ್ಡಿಯ ಹೆಣ ಸುಟ್ಟ ಜಾಗವನ್ನು ತೋರಿಸುತ್ತಿದ್ದಂತೆ ಹೊಸೂರು ರಸ್ತೆಯ ಚಂದಾಪುರ, ಕಿತ್ತನಹಳ್ಳಿ, ಬಸನಹಳ್ಳಿ, ಹೆಬ್ಬಗೋಡಿ ಸುತ್ತಮುತ್ತಲ ಜನ ರೊಚ್ಚಿಗೆದ್ದಿದ್ದಾರೆ. ಬಹುಶಃ ದುಷ್ಟ ಸಹೋದರರ ಪಾಪದ ಕೊಡ ತುಂಬಿ ಬಂದಿತ್ತೇನೋ ಜನರ ಆಕ್ರೋಶಕ್ಕೆ ಸಿಲುಕಿದ ವೆಂಕಟೇಶನ ವಿಷ್ಣು ಡಾಬಾ ಮನೆ, ಸ್ಕಾರ್ಪಿಯೋ ಗಾಡಿ ಇತ್ಯಾದಿಗಳೆಲ್ಲವೂ ಬೆಂಕಿಗಾಹುತಿಯಾಗಿತ್ತು.

ಜನರ ಕೈಗೇನಾದರೂ ರೆಡ್ಡಿ ಬ್ರದರ್ಸ್ ಸಿಕ್ಕಿದ್ದರೆ ಏನಾಗುತ್ತಿತ್ತೋ. ಲಾಕಪ್ಪು ಸೇರಿ ಬಚಾವಾಗಿದ್ದಾರೆ. ಸದ್ಯ



ಸುಟ್ಟು ಹೋದ ಸ್ಕಾರ್ಪಿಯೋ

ಈ ಭಾಗದ ಎಲ್ಲಾ ಅನಾಚಾರಗಳ ಕೇಂದ್ರಬಿಂದುವಾಗಿ ವಿಷ್ಣು ಡಾಬಾ ಮುಚ್ಚಿದೆ. ಇವತ್ತಲ್ಲ ನಾಳೆ ವೆಂಕಟೇಶ್ ಮತ್ತು ಶ್ರೀನಿವಾಸ್ ಜೈಲಿಂದ ಹೊರಬಿದ್ದು ಮ... ಚಂದಾಪುರಕ್ಕೇನಾದರೂ ಕಾಲಿಟ್ಟರೆ ಜನರೇ ದೊ... ಕೈಗೆತ್ತಿಕೊಳ್ಳುತ್ತಾರೆ. ಏನೇ ಆದರೂ ಈ ಭಾಗದ ಬಡವ... ಪಾಲಿನ ಬಂಧು ಬಾಬುರೆಡ್ಡಿಯ ಪ್ರಾಣ ಬರುತ್ತಾ?

ತನ್ನ ಪರೋಪಕಾರಿ ಬುದ್ಧಿಗೆ ತಾನೇ ಬಲಿಯಾ... ಬಾಬುರೆಡ್ಡಿಯ ಸಾವಿಗೆ ಕಣ್ಣೀರು ತಾನೇ ಯಾವ ಲೆಕ್ಕ...

-ರಾ. ಸೋಮನಾಥ್

ಎಮ್ಮೆಲ್ಲೇ ನಾರಾಯಣಸ್ವಾಮಿ ಬಂಟರು



ಆನೇಕಲ್ ಬಿಜೆಪಿ ಶಾಸಕ ನಾರಾಯಣಸ್ವಾಮಿಗೆ ನಯಾಪೈಸೆಯಷ್ಟಾದರೂ ವಿವೇಕ ಎಂಬುದಿದ್ದರೆ ವೆಂಕಟೇಶ್ ಮತ್ತು ಶ್ರೀನಿವಾಸ್‌ರಂಥ ದುಷ್ಟ ಸಹೋದರಿಬ್ಬರು ಚಂದಾಪುರದಲ್ಲಿ ತಲೆ ಎತ್ತುತ್ತಿರಲಿಲ್ಲ.

ಇವತ್ತು ಇಡೀ ಹೊಸೂರು ರಸ್ತೆಯೇ ಶಾಸಕ ನಾರಾಯಣ ಸ್ವಾಮಿಯತ್ತ ಬೆರಳು ತೋರುತ್ತಿದೆಯೆಂದರೆ, ಅದಕ್ಕೆ ಮುಖ್ಯ ಕಾರಣ ಈ ಧೂರ್ತರಿಬ್ಬರೂ ಎಮ್ಮೆಲ್ಲೇ ಸಾಹೇಬರ ನಂಬಿಕಸ್ಥ ಬಂಟರಾಗಿದ್ದದ್ದು. ಇಲ್ಲಿಗೆ ಆರು ತಿಂಗಳ ಹಿಂದೆ ಅಣ್ಣತಮ್ಮಂದಿರಿಬ್ಬರೂ ಸೇರಿ ತಮ್ಮ ತಾಯಿಯನ್ನೇ ಆಸ್ತಿಗಾಗಿ ಕೊಂದು ಮನೆಯಲ್ಲೇ ಸುಟ್ಟಿದ್ದಾರೆಂದು ಜನ ಹೆಬ್ಬಗೋಡಿ ಪೊಲೀಸ್ ಠಾಣೆಗೆ ದೂರು ಕೊಟ್ಟರು. ಎಮ್ಮೆಲ್ಲೇ ನಾರಾಯಣಸ್ವಾಮಿಯೇ ಹಂತಕರ ಬೆನ್ನಿಗೆ ನಿಂತಿರುವಾಗ ಪೊಲೀಸರು ತಾನೇ ಏನು ಮಾಡಲು ಸಾಧ್ಯ? ಕಳೆದ ಚುನಾವಣೆಯಲ್ಲಿ ಬಿಜೆಪಿ ಪರವಾಗಿ ಬೇಕಾಬಿಟ್ಟಿ ಕಾಸು ಹಂಚಿದ ಇದೇ ದುಷ್ಟ ಬ್ರದರ್ಸ್ ಪರವಾಗಿ ಈಗಲೂ ನಾರಾಯಣಸ್ವಾಮಿ ಫೋನ್ ಹೊಡೆಯುತ್ತಾರೆಂದರೆ ಆನೇಕಲ್ಲಿನಲ್ಲಿ ನ್ಯಾಯಕ್ಕೆಲ್ಲಿ ಉಳಿಗಾಲ?

ತಾಯಿಯನ್ನು ಕೊಂದವರನ್ನು ಅವತ್ತೇ ಜೈಲಿಗೆ ದಬ್ಬಿದ್ದರೆ ಇವತ್ತೇಕೆ ಬಾಬುರೆಡ್ಡಿ ಕೊಲೆಯಾಗುತ್ತಿದ್ದ?

ನಾಲ್ಕು ತಿಂಗಳಲ್ಲಿ ಯಡ್ಡಿ ಮನೆಗೆ?

ಕರ್ನಾಟಕದ ಆಡಳಿತ ಪಕ್ಷ ಬಿಜೆಪಿಯಲ್ಲಿನ ಭಿನ್ನ ...ಮತೀಯ ಚಟುವಟಿಕೆಗಳು ಒನ್ ಡೇ ಕ್ರಿಕೆಟ್ ಮ್ಯಾಚ್ ...ನಡೆಯುತ್ತಿವೆ. ಮೊದಲ ಪಂದ್ಯ ಬೆಂಗಳೂರಿನಲ್ಲಿ ...ದಾಗ ಅರುಣ್ ಜೇಟ್ಲಿ ಅಂಪೈರ್ ಆಗಿದ್ದರು. ಆದರೆ ...ಪಂದ್ಯ ಡ್ರಾ ಆಗಿತ್ತು! ಅನಂತರ ಎರಡನೇ ಪಂದ್ಯಕ್ಕೆ ...ದೆಹಲಿಯಲ್ಲಿ ಪಿಚ್ ರೆಡಿಯಾಯಿತು. ರೆಡ್ಡಿ ತಂಡ ಮತ್ತು ಯಡಿಯೂರಪ್ಪನ ತಂಡ ದೆಹಲಿಗೆ ಹೋದರು. ಅಲ್ಲಿ ಸುಷ್ಮಾ ಸ್ವರಾಜ್ ಥರ್ಡ್ ಅಂಪೈರ್ ಆಗಿ ಕಾರ್ಯ ನಿರ್ವಹಿಸಿ ರೆಡ್ಡಿ ಬಣ ಜಯಗಳಿಸುವಲ್ಲಿ ಸಹಕರಿಸಿದರು. ...ಂದೇ ವಾರದ ಗ್ಯಾಪ್ ನಂತರ ಹೋಂ ಪಿಚ್ ಬೆಂಗಳೂರಿ...ಲ್ಲಿ ಮತ್ತೊಂದು ಪಂದ್ಯ ನಡೆಯಿತು. ಈ ಬಾರಿ ಸುಷ್ಮಾ ...ರಾಜ್ ಜೊತೆಗೆ ವೆಂಕಯ್ಯ ನಾಯ್ಡು ಮತ್ತು ...ನಂತಕುಮಾರ್ ಅಂಪೈರ್‌ಗಳಾದರು. ದೆಹಲಿ ಪಿಚ್‌ನಲ್ಲಿ ...ೋಲು ಕಂಡ ಯಡಿಯೂರಪ್ಪ ಹೋಂ ಪಿಚ್‌ನಲ್ಲಿ ...ಯಭೇರಿ' ಬಾರಿಸಿದ್ದಾರೆ.

ಅಲ್ಲಿಗೆ ಮೂರು ಪಂದ್ಯಗಳ ಈ ಸರಣಿಯಲ್ಲಿ ಯಡ್ಡಿ ...ದು ಪಂದ್ಯವನ್ನು, ಗಣಿ ರೆಡ್ಡಿಗಳು ಇನ್ನೊಂದು ಪಂದ್ಯವನ್ನು ...ದ್ದಿರುವುದರಿಂದ ಸದ್ಯಕ್ಕೆ ಸರಣಿ ಸಮಬಲವಾಗಿದೆ. ...ಮುಂದಿನ ತಿಂಗಳು ಸ್ಥಳೀಯ ಸಂಸ್ಥೆಗಳ ಚುನಾವಣೆ ...ಯುವುದರಿಂದ ಬರುವ ಮೂರು ತಿಂಗಳ ಕಾಲ ಯಾವುದೇ ...ಂದ್ಯಗಳಿರುವುದಿಲ್ಲ. ಅಲ್ಲಿಯತನಕ ಎರಡು ತಂಡದ ...ಡುವೆ ಕದನ ವಿರಾಮ ಘೋಷಿಸಲಾಗಿದೆ. ಆದರೆ ...ನೆಟ್ ಪ್ರಾಕ್ಟೀಸ್ ಅಂತೂ ತೆರೆಮರೆಯಲ್ಲಿ ನಡೆಯುತ್ತಲೇ ...ಇತ್ತದೆ. ಅದೇನೇ ಇದ್ದರೂ ಸ್ಥಳೀಯ ಚುನಾವಣೆಯ ...ತರ ಒಂದು ಫೈನಲ್ ಪಂದ್ಯ ನಡೆಯಲಿದೆ. ಆದರಲ್ಲಿ ...ರು ಗೆಲ್ಲುತ್ತಾರೋ ಅವರು ಈ ರಾಜ್ಯದ ಮುಖ್ಯಮಂತ್ರಿ ...ಆಗಲಿದ್ದಾರೆ ಅಥವಾ ಈ ಎರಡು ತಂಡಗಳ ...ಯಕರನ್ನು ಬದಿಗಿಟ್ಟು ಥರ್ಡ್ ಅಂಪೈರ್‌ಗಳೇ ...ಮುಕರಾದರೂ ಆಶ್ಚರ್ಯವಿಲ್ಲ!

ಹೈಕಮಾಂಡ್ ನಾಟಕ

...ಮೊನ್ನೆಮೊನ್ನೆಯಷ್ಟೇ ದೆಹಲಿಯಲ್ಲಿ ದಣಿಗಳ ಪರ ... ಒಲವು-ನಿಲುವುಗಳನ್ನು ತೋರಿದ್ದ ಬಿಜೆಪಿಯ ...ಮಾಂಡ್ ಈಗ ಬೆಂಗಳೂರಿನಲ್ಲಿ ಯಡಿಯೂರಪ್ಪನವರ ...ನಿಂತಿರುವಂತೆ ನಾಟಕವನ್ನಾಡಿದೆ. ಈಗ ರಚಿಸಲ್ಪಟ್ಟಿರುವ ...ನ್ವಯ ಸಮಿತಿಯಲ್ಲಿ ಬಳ್ಳಾರಿ ದಣಿಗಳ ಕೆಂಗಣ್ಣಿಗೆ ...ಗಾಗಿರುವ ಸಚಿವ ಬಸವರಾಜ್ ಬೊಮ್ಮಾಯಿಯನ್ನು ...ರಿದ್ದು ದೆಹಲಿ ನಾಯಕರ ನಾಟಕದ ಒಂದು ಚಿಕ್ಕ ...ಪಲ್. ಅಷ್ಟೇ ಅಲ್ಲ, ಆ ಸಮಿತಿಯಲ್ಲಿ ಯಡಿಯೂರಪ್ಪ ... ಬೆಂಬಲಿಗರಾದ ಸುರೇಶ್ ಕುಮಾರ್, ಆಶೋಕ್, ...ರಾಜ್ ಬೊಮ್ಮಾಯಿ, ಕಾಗೇರಿ... ಮೊದಲಾದವರಿಗೆ ...ಕಲ್ಪಿಸಿದ ಹೈಕಮಾಂಡ್ ರೆಡ್ಡಿಗಳ ಗುಂಪಿನಿಂದ ಕರುಣಾಕರ ರೆಡ್ಡಿ ಮತ್ತು ಜಗದೀಶ್ ಶೆಟ್ಟರ್‌ಗೆ ಸ್ಥಾನ ನೀಡಿದೆ. ಇದರ ಹಿಂದಿರುವ ತಂತ್ರ ಬಿಜೆಪಿಯ ಹೈಕಮಾಂಡ ಸಂಪೂರ್ಣವಾಗಿ ಗಣಿದಣಿಗಳ ಗುಲಾಮ ಅಲ್ಲ ಎಂದು ಸದ್ಯಕ್ಕೆ ತೋರಿಸಿಕೊಳ್ಳುವ ಉದ್ದೇಶ.

ಹೈಕಮಾಂಡಿನ ಈ ತಂತ್ರದ ಒಳಾರ್ಥವನ್ನು ಅರಿಯದ ಯಡಿಯೂರಪ್ಪ ಕೃತಾರ್ಥರಾದಂತೆ ದೆಹಲಿಯವರಿಗೆ ಕೃತಜ್ಞತಾ ಭಾವದಿಂದ ಸಲಾಂ ಹೊಡೆದಿದ್ದಾರೆ. ವಾಸ್ತವವಾಗಿ ರೆಡ್ಡಿ ತಂಡದ ಬೌನ್ಸರ್‌ಗಳನ್ನು ಎದುರಿಸಲಾಗದೆ ಯಡ್ಡಿ ತಂಡದ ಒಬ್ಬೊಬ್ಬ ಸದಸ್ಯರೇ 'ಔಟ್' ಆಗಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಕ್ರಿಕೆಟ್ ಮ್ಯಾಚಿನಲ್ಲಿ ಟೈಲೆಂಡರ್ಸ್ ಬ್ಯಾಟ್ಸ್‌ಮನ್‌ಗಳು ಕಣ್ಮುಚ್ಚಿ ಕೊನೆ ಓವರ್‌ನಲ್ಲಿ ಸಿಕ್ಸರ್ ಎತ್ತಿದಾಗ ಹೇಗೆ ತಂಡದ ನಾಯಕ ಸಂತೋಷಪಡುತ್ತಾನೋ ಅದೇ ರೀತಿ ಬಸವರಾಜ್ ಬೊಮ್ಮಾಯಿಯನ್ನು ಸಮನ್ವಯ ಸಮಿತಿಗೆ ಹೈಕಮಾಂಡ್ ಸೇರಿಸಿದ್ದನ್ನು ಕಂಡು ಯಡಿಯೂರಪ್ಪ ಸಂತೋಷಪಡುತ್ತಿದ್ದಾರೆ.

ಯಡಿಯೂರಪ್ಪ ಅದೇನೇ ಮಾಡಿದರೂ ಇನ್ನು ಕೆಲವೇ ತಿಂಗಳುಗಳಲ್ಲಿ ಅವರ ಇನ್ನಿಂಗ್ಸ್ ಮುಗಿದುಹೋಗುವುದು ಶತಸಿದ್ಧ. ಈ ಸತ್ಯದ ಅರಿವಿಲ್ಲದೆ ಯಡ್ಡಿ ತಾನು ಮ್ಯಾಚ್ ಗೆದ್ದಿರುವಂತೆ ಸಂತೋಷಪಡುತ್ತಿರುವುದನ್ನು ನೋಡಿದರೆ ಅವರ ಬಗ್ಗೆ ಕನಿಕರವುಂಟಾಗುತ್ತದೆ.

ತ್ರಿಕೋನ ಸ್ಪರ್ಧೆ

ಇಲ್ಲೊಂದು ವಿಪರ್ಯಾಸ ನೋಡಿ. ಈತನಕ ರಾಜ್ಯ ಬಿಜೆಪಿಯಲ್ಲಿ ಎರಡೇ ತಂಡಗಳು ಆಟವಾಡುತ್ತಿದ್ದವು. ಆದರೀಗ ಸಮನ್ವಯ ಸಮಿತಿಯನ್ನು ರಚಿಸುವ ಮೂಲಕ ಬಿಜೆಪಿ ಹೈಕಮಾಂಡ್ ತ್ರಿಕೋನ ಸ್ಪರ್ಧೆಗೆ ದಾರಿ ಮಾಡಿಕೊಟ್ಟಿದೆ. ಗಣಿ ರೆಡ್ಡಿಗಳ ತಂಡದ ಹೊರತಾಗಿ ಈಗ ಸಮನ್ವಯ ಸಮಿತಿಯ ಹದಿನಾಲ್ಕು ಸದಸ್ಯರನ್ನು ಕೂಡಾ ಯಡ್ಡಿ ಎದುರಿಸಬೇಕಾಗಿದೆ. ಸದ್ಯಕ್ಕೆ ಯಡ್ಡಿಯ ಬಂಟ ಸದಾನಂದ ಗೌಡ ಸಮಿತಿಯ ಅಧ್ಯಕ್ಷರಾಗಿರುವುದರಿಂದ ಯಾವುದೇ ತೊಂದರೆಯಿಲ್ಲ. ಆದರೆ ನಾಳೆ ಸದಾನಂದ ಗೌಡರ ಸ್ಥಾನಕ್ಕೆ ಹೊಸಬ ಬಂದರೆ ಯಡ್ಡಿಗೆ ಯಡವಟ್ಟು ಗ್ಯಾರಂಟಿ. ಹೀಗಾಗಿ ಸಮನ್ವಯ ಸಮಿತಿಯ ಮುಂದಿನ ಅಧ್ಯಕ್ಷ - ಅರ್ಥಾತ್ ಬಿಜೆಪಿಯ ರಾಜ್ಯಾಧ್ಯಕ್ಷ - ಚುನಾವಣೆಗೆ ಸಖತ್ ರಂಗೇರ ಲಿದೆ. ಆ ಅಧ್ಯಕ್ಷನ ಆಯ್ಕೆಯ ನಂತರವಷ್ಟೇ ಯಡ್ಡಿ ಇನ್ನೆಷ್ಟು ಸಮಯ ಮುಖ್ಯಮಂತ್ರಿ ಸ್ಥಾನದಲ್ಲಿ ಮುಂದುವರೆಯಲಿದ್ದಾರೆ ಎಂದು ಹೇಳಬಹುದು.

ಬಿಜೆಪಿಯ ಶಾಸಕರೇ ಹೇಳುತ್ತಿರುವಂತೆ ಮುಂದಿನ ನಾಲ್ಕು ತಿಂಗಳುಗಳೊಳಗೆ ಯಡಿಯೂರಪ್ಪನವರ ಪದಚ್ಯುತಿ ಖಂಡಿತ. ಸದ್ಯಕ್ಕೆ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಯಡ್ಡಿಯ ನಾಯಕತ್ವದಲ್ಲೇ ತಯಾರಿ ನಡೆಸಲಾಗುತ್ತದೆ. ಈ ಚುನಾವಣೆಯಲ್ಲಿ ಬಿಜೆಪಿಗೆ ಮುಖಭಂಗವಾಗುವುದು ಖಚಿತ ಎಂಬುದು ಬಿಜೆಪಿ ಶಾಸಕರ ಅಭಿಪ್ರಾಯ. ಆಗ ಆ ನೆಪದಲ್ಲಿ ಯಡ್ಡಿಯನ್ನು ಮುಖ್ಯಮಂತ್ರಿಗಾದಿಯಿಂದ ಇಳಿಸುವುದು ಸದ್ಯಕ್ಕೆ ಹೈಕಮಾಂಡ್ ಹಾಕಿರುವ ಮಾಸ್ಟರ್ ಪ್ಲಾನ್. ಅಂದರೆ ಯಡ್ಡಿಯನ್ನು ಬಲಾತ್ಕಾರವಾಗಿ ಮುಖ್ಯಮಂತ್ರಿ ಗದ್ದುಗೆಯಿಂದ ಇಳಿಸುವ ಬದಲು ಅತ್ಯಂತ ಗೌರವಯುತವಾಗಿ ಅವರನ್ನು ಕೆಳಗಿಳಿಸುವ ವೇದಿಕೆಯನ್ನು ಸಿದ್ಧಗೊಳಿಸಲಾಗುತ್ತಿದೆ.



ಇಂತಹ ಮಾಸ್ಟರ್ ಪ್ಲಾನ್ ಹಾಕಿರುವುದು ಬೇರೆ ಯಾರೂ ಅಲ್ಲ, ಥರ್ಡ್ ಅಂಪೈರ್‌ಗಳಾಗಿ ಕಾರ್ಯನಿರ್ವಹಿಸುತ್ತಿರುವ ಸುಷ್ಮಾ ಸ್ವರಾಜ್ ಮತ್ತು ಅನಂತಕುಮಾರ್. ಯಡ್ಡಿಯ ಕೈಯನ್ನು ಬಲಪಡಿಸುವುದೇ ಹೈಕಮಾಂಡಿದ ಉದ್ದೇಶವಾಗಿದ್ದಲ್ಲಿ ಶೋಭಾ ಕರಂದ್ಲಾಜೆಗೆ ಯಾಕೆ ಕೊಕ್ ನೀಡಬೇಕಿತ್ತು? ವಿ.ಪಿ.ಬಳಿಗಾರನ್ನು ಯಾಕೆ ಎತ್ತಂಗಡಿ ಮಾಡಬೇಕಿತ್ತು? ಅಷ್ಟೇ ಅಲ್ಲ ಯಡ್ಡಿ ಟ್ರಾನ್ಸ್‌ಫರ್ ಮಾಡಿದ್ದ ಬಳ್ಳಾರಿಯ ಅಧಿಕಾರಿಗಳನ್ನು ಅದೇ ಸ್ಥಾನಗಳಿಗೆ ಮತ್ತೆ ಮರುನೇಮಕ ಮಾಡುವ ಅವಶ್ಯಕತೆಯಾದರೂ ಏನಿತ್ತು? ಇವೆಲ್ಲಾ ವಿಷಯಗಳಿಗೆ ಕಳಸವಿಟ್ಟಂತೆ ಸಮನ್ವಯ ಸಮಿತಿಯನ್ನೂ ರಚಿಸಿ ಯಡ್ಡಿಯ ಕೈಗಳನ್ನು ಬಲಪಡಿಸಿಲ್ಲ, ಬದಲಾಗಿ ಕಟ್ಟಿಹಾಕಲಾಗಿದೆ ಎಂಬುದು ವಾಸ್ತವ.

ಹೈಕಮಾಂಡಿನ ಈ ಎಲ್ಲಾ ಕೆಲಸಗಳಿಂದಾಗಿ ಯಡ್ಡಿಯ ರೆಕ್ಕೆಪುಕ್ಕವನ್ನು ಕತ್ತರಿಸಿ ಅವರನ್ನು ನಿಸ್ತೇಜರನ್ನಾಗಿಯೂ, ನಿಶ್ಯಕ್ತರನ್ನಾಗಿಯೂ ಮಾಡಲಾಗಿದೆ. ಯಡ್ಡಿ ಮುಖ್ಯಮಂತ್ರಿಯಾಗಿದ್ದರೂ ಅವರು ಯಾವುದೇ ನಿರ್ಣಯವನ್ನು ನಿಂತ ಕಾಲಲ್ಲಿ ತೆಗೆದುಕೊಳ್ಳಲಾಗದಂತಹ ಪರಿಸ್ಥಿತಿಯನ್ನು ನಿರ್ಮಿಸಲಾಗಿದೆ. ಈ ಎಲ್ಲ ಕಾರಣಗಳಿಂದಾಗಿ ಇವತ್ತು ಯಡ್ಡಿ ನಾಮಕಾವಾಸ್ತೆ ಮುಖ್ಯಮಂತ್ರಿಯಾಗಿದ್ದು ಈ ರಾಜ್ಯ ಕಂಡ ಅತ್ಯಂತ ದುರ್ಬಲ ಮತ್ತು ಅಸಹಾಯಕರ ನಾಯಕರಾಗಿದ್ದಾರೆ.

ಸೋತವರಿಂದ ಗೆದ್ದವರಿಗೆ ಪಾಠ!

ವಿಪರ್ಯಾಸವೆಂದರೆ ಇವತ್ತು ಬಿಜೆಪಿಯ ಹೈಕಮಾಂಡೇ ಒಳಜಗಳದಿಂದಾಗಿ ಮುರಿದ ಮನೆಯಾಗಿದೆ. ಆದರೆ ತನ್ನ ಸ್ವಂತ ಬಲದಿಂದ 19 ಲೋಕಸಭಾ ಸ್ಥಾನಗಳನ್ನು ಬಿಜೆಪಿಗೆ ಗೆಲ್ಲಿಸಿಕೊಟ್ಟಿದ್ದ ಯಡಿಯೂರಪ್ಪ ಕೇಂದ್ರದಲ್ಲಿ ಬಿಜೆಪಿಯ ಸೋಲಿಗೆ ಕಾರಣಕರ್ತರಾದ ಸುಷ್ಮಾ ಸ್ವರಾಜ್, ಅನಂತಕುಮಾರ್ ಮತ್ತು ವೆಂಕಯ್ಯ ನಾಯ್ಡು ತರದ ಸೋಕಾಲ್ಡ್ ನಾಯಕರ ಮುಂದೆ ಅಧಿಕಾರದ ಭಿಕ್ಷೆಗಾಗಿ ಬೇಡಿ ನಿಲ್ಲುವಂತಾಗಿದೆ. ಇದು ಹಾಸ್ಯಾಸ್ಪದ ವಿಷಯವಲ್ಲವೇ?


ಇದು ಏನನ್ನು ಸೂಚಿಸುತ್ತದೆ? ಭಾರತೀಯ ಜನತಾ ಪಕ್ಷದ ದೆಹಲಿ ನಾಯಕರು ಗಣಿದಣಿ ರೆಡ್ಡಿಗಳ ಮರ್ಜಿಗೆ ತಕ್ಕಂತೆ ಕುಣಿಯುತ್ತಿದ್ದಾರೆ ಎಂಬುದನ್ನಲ್ಲವೇ? ಇನ್ನು ಮೂರ್ನಾಲ್ಕು ತಿಂಗಳಗಳ ನಂತರ ಯಡಿಯೂರಪ್ಪ ಓರ್ವ ಬಲಹೀನ, ಅಸಹಾಯಕ ಮತ್ತು ಶಾಸಕರ ಬೆಂಬಲವಿಲ್ಲದ ನಾಯಕ ಎಂಬ ನೆಪ ಮುಂದಿಟ್ಟು ರೆಡ್ಡಿಗಳ ಆಶಯದಂತೆ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಸುವುದು ಶತಸಿದ್ಧ. ಅಲ್ಲಿಯತನಕ ರಾಜ್ಯ ಬಿಜೆಪಿ ನಿಂತ ನೀರಿನಂತೆ ಶಾಂತವಾಗಿರುತ್ತದಷ್ಟೇ.

● ಸದಾಶಿವ ಶೆಣೈ

...ಳ್ಳ - ಪೊಲೀಸ್: ಬೆಂಗಳೂರ್ ಮಟಾಶ್

...ಳ್ಳಕಾಕರಿಂದ ಜನರನ್ನು ರಕ್ಷಿಸಬೇಕಾದ ಪೊಲೀಸರೇ ...ಬಿಟ್ಟರೆ? ಅಥವ ಕಳ್ಳರೊಂದಿಗೆ ಕೈಜೋಡಿಸಿಬಿಟ್ಟರೆ? ...ಂಥ ಪ್ರಶ್ನೆಗಳೇ ಅಸಂಬದ್ಧ ಎಂದು ಕೆಲವರಿಗೆ ...ಬಹುದು. ಹಾಗಾಗಲು ಸಾಧ್ಯವೇ ಇಲ್ಲ ಎಂದು ...ಭಾವಿತರು ಅಂದುಕೊಳ್ಳಬಹುದು. ಅದು ಕೇವಲ ...ಚಿತ್ರಗಳಲ್ಲಿ ಮಾತ್ರ ಸಾಧ್ಯ ಎಂದು ಇನ್ನು ಕೆಲವರು ...ವಾದಬಹುದು. ಆದರೆ, ಅದು ನಿಜಜೀವನದಲ್ಲೂ ... ಎಂಬುದನ್ನು ಬೆಂಗಳೂರಿನ ...ಗರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ...ದ್ ತಬ್ರೇಜ್ ತೋರಿಸಿಕೊಟ್ಟ ...ಅಂತೆಯೇ ರೆಡ್ ಹ್ಯಾಂಡಾಗಿ ...ಕೊಂಡು ಪೊಲೀಸ್ ಕಮೀಷ ...ಂಕರ್ ಬಿದರಿಯಿಂದ ಸಸ್ಪೆಂಡ್ ...ಕೈಲಿ ಹಿಡಿದುಕೊಂಡು ಮನೆ ...ದ್ದಾರೆ.

...ಸಿನಿಮೀಯ ಘಟನೆ ನಡೆದದ್ದು ...ರ್ ಎರಡನೇ ವಾರದಲ್ಲಿ ... ಕೆಲ ದಿನಗಳ ಮೊದಲು ...ರಿನ ಪೊಲೀಸರು ಬಾಲಾಜಿ ...ವಾಹನ ಕಳ್ಳನನ್ನು ಮೈಸೂರಿನಲ್ಲಿ ...ಅವನಿಂದ ಒಂದು ಕಾರೂ ...ದಂತೆ ಹದಿಮೂರು ವಾಹನ ...ವಶಪಡಿಸಿಕೊಂಡಿದ್ದರು. ಬಾಲಾಜಿ ...ನಾಲ್ಕು ತಮಟುತ್ತಿದ್ದಂತೆಯೇ ವಾಹನ ಕಳ್ಳತನದಲ್ಲಿ ...ದಿಗೆ ಬೆಂಗಳೂರಿನ ಮುಜಾಹಿದ್ ಎಂಬುವವನೂ ...ಗಿದ್ದಾನೆಂದು ಬಾಲಾಜಿ ಮೈಸೂರು ಪೊಲೀಸರಿಗೆ ...ಅಲ್ಲದೇ ಕದ್ದ ವಾಹನಗಳನ್ನು ಮುಜಾಹಿದ್‌ನೇ ...ಮಾಡುತ್ತಾನೆಂದು ಪೊಲೀಸರಿಗೆ ತಿಳಿಸಿದ. ...ಪೊಲೀಸರು ಬಾಲಾಜಿಯಿಂದ ಮುಜಾಹಿದ್‌ನ ಮೊಬೈಲ್ ನಂಬರ್ ಪಡೆದುಕೊಂಡು ಅವನನ್ನು ಬಂಧಿಸುವುದಕ್ಕೆ ಬಲೆ ಹೆಣೆಯತೊಡಗಿದರು. ಅಸಲಿಗೆ ಬಾಲಾಜಿ ಅರೆಸ್ಟ್ ಆಗಿರುವುದು ಮುಜಾಹಿದ್‌ಗೆ ಗೊತ್ತೇ ಇರಲಿಲ್ಲವಾದ್ದರಿಂದ ಆತ ಯಾವುದೇ ಮುನ್ನೆಚ್ಚರಿಕೆ ವಹಿಸದೇ ಎಂದಿನಂತೆ ಪಾರ್ಕಿಂಗ್‌ನಲ್ಲಿ ನಿಲ್ಲಿಸಿರುವ ವಾಹನಗಳನ್ನು ಕದಿಯುವ ತನ್ನ ಕಾಯಕದಲ್ಲಿ ನಿರತನಾಗಿದ್ದ. ಆದರೆ, ಮೈಸೂರು ಪೊಲೀಸರು ಮುಜಾಹಿದ್‌ನ ಮೊಬೈಲ್ ನಂಬರ್ ಮೂಲಕ ಅವನ ಹಿಂದೆ ಬಿದ್ದಿದ್ದರು. ಆತ ಬೆಂಗಳೂರಿನ ಜಯನಗರ ನಾಲ್ಕನೇ ಹಂತದ ಏರಿಯಾದಲ್ಲಿ ಓಡಾಡುತ್ತಿರುವುದು ಪೊಲೀಸರಿಗೆ ಗೊತ್ತಾಯಿತು.


ಸಯೀದ್ ತಬ್ರೇಜ್

ಅಂತಿಮವಾಗಿ ಮುಜಾಹಿದ್ ಇನ್ನೊಬ್ಬ ವ್ಯಕ್ತಿಯೊಂದಿಗೆ ಬೆಂಗಳೂರಿನಲ್ಲಿ ಹೋಗುತ್ತಿರುವಾಗ ಅವನನ್ನು ಮೈಸೂರು ಪೊಲೀಸರು ಹಿಂಬಾಲಿಸಲಾರಂಭಿಸಿದರು. ಅಸಲಿಗೆ ಮುಜಾಹಿದ್ ಬೈಕ್ ಹಿಂದೆ ಕುಳಿತಿದ್ದರೆ ಇನ್ನೊಬ್ಬ ವ್ಯಕ್ತಿ ಬೈಕ್ ಚಾಲನೆ ಮಾಡುತ್ತಿದ್ದ. ಮೈಸೂರ ಪೊಲೀಸರು ತಡಮಾಡದೇ ಬೈಕನ್ನು ಹಿಂಬಾಲಿಸಿ ಮುಜಾಹಿದ್‌ನನ್ನು ಹಿಡಿದೇಬಿಟ್ಟರು. ವಾಹನ ಕಳ್ಳ ಮುಜಾಹಿದ್‌ನನ್ನು ಹಿಂದೆ ಕೂರಿಸಿಕೊಂಡು ಬೈಕ್ ಚಾಲನೆ ಮಾಡುತ್ತಿದ್ದ ವ್ಯಕ್ತಿ ಬೇರಾರೂ ಅಲ್ಲ, ಜಯನಗರ ಪೊಲೀಸ್ ಸ್ಟೇಷನ್‌ನ ಸಬ್ ಇನ್ಸ್‌ಪೆಕ್ಟರ್ ಸಯೀದ್ ತಬ್ರೇಜ್ ಎಂಬುದು ಗೊತ್ತಾಗುತ್ತಿದ್ದಂತೆಯೇ ಮೈಸೂರು ಪೊಲೀಸರಿಗೆ ಒಂದು ಕ್ಷಣ ದಿಗಿಲು. ಅವರಿಬ್ಬರೂ ಒಂದೇ ಬೈಕ್‌ನಲ್ಲಿ ಅನ್ಯೋನ್ಯವಾಗಿ ಸ್ನೇಹಿತರಂತೆ ಹೋಗುತ್ತಿದ್ದುದು ಮೈಸೂರು ಪೊಲೀಸರಲ್ಲಿ ಒಂದಿಷ್ಟು ಅನುಮಾನ ಮೂಡಿಸಿದ್ದು ನಿಜವಾದರೂ ತಾವು ಹುಡುಕುತ್ತಿದ್ದ ಮುಜಾಹಿದ್‌ನನ್ನು ಆಗಲೇ ಸಬ್‌ಇನ್ಸ್‌ಪೆಕ್ಟರ್ ತಬ್ರೇಜ್ ಅರೆಸ್ಟ್ ಮಾಡಿರಬೇಕು ಎಂದು ಯೋಚಿಸಿದರು. ಆದರೆ ಮೈಸೂರು ಪೊಲೀಸರು ಮುಜಾಹಿದ್‌ನ ಹಿಂದೆ ಬಿದ್ದಿದ್ದಾರೆಂಬುದು ಸಬ್‌ಇನ್ಸ್‌ಪೆಕ್ಟರ್ ತಬ್ರೇಜ್‌ಗೆ ಗೊತ್ತೇ ಇರಲಿಲ್ಲವಾದ್ದರಿಂದ ತಬ್ರೇಜ್‌ಗೂ ದಿಗಿಲು.

ನಿಜ ಹೇಳಬೇಕೆಂದರೆ ಅದು ಪ್ರಕರಣದ ಅಂತ್ಯವಾಗಿರಲಿಲ್ಲ, ಸಿನಿಮೀಯ ಘಟನೆಯೊಂದರ ಆರಂಭವಾಗಿತ್ತು. ಮೈಸೂರು ಪೊಲೀಸರು ಸಬ್‌ಇನ್ಸ್‌ಪೆಕ್ಟರ್ ತಬ್ರೇಜ್‌ಗೆ ಯಾವುದೇ ಮಾಹಿತಿಯ ಗುಟ್ಟು ಬಿಟ್ಟುಕೊಡದೇ ಮುಜಾಹಿದ್‌ನನ್ನು ಅರೆಸ್ಟ್ ಮಾಡಿ ತಮ್ಮ ಜೀಪಿಗೆ ಹತ್ತಿಸಿಕೊಂಡರು. ಇನ್ನೇನು ಜೀಪು ಹೊರಡಬೇಕು ಎನ್ನುವಷ್ಟರಲ್ಲಿ ಇನ್ಸ್‌ಪೆಕ್ಟರ್ ತಬ್ರೇಜ್ ಜೀಪಿನತ್ತ ಓಡಿ ಬಂದು "ನನ್ನ ಲೋಡೆಡ್ ಸರ್ವೀಸ್ ರಿವಾಲ್ವಾರ್ ಮುಜಾಹಿದ್ ಹತ್ತಿರ ಇದೆ, ತೆಗೆದುಕೊಡಿ ಪ್ಲೀಸ್" ಎಂದಾಗ ಮೈಸೂರು ಪೊಲೀಸರು ತಬ್ಬಿಬ್ಬಾದರು. ಪೊಲೀಸ್ ಸಬ್‌ಇನ್ಸ್‌ಪೆಕ್ಟರ್ ಒಬ್ಬ ಕಳ್ಳನಿಗೆ ತನ್ನ ಗುಂಡು ತುಂಬಿದ ರಿವಾಲ್ವಾರ್ ಕೊಟ್ಟು, ಬೈಕ್‌ನಲ್ಲಿ ಕೂರಿಸಿಕೊಂಡು ಹೋಗುತ್ತಾನೆಂದರೆ ಯಾವ ಪೊಲೀಸನಿಗೆ ಆಶ್ಚರ್ಯವಾಗುವುದಿಲ್ಲ ಹೇಳಿ? ಹೆಚ್ಚೇನೂ ಮಾತನಾಡದೆ ಮುಜಾಹಿದ್‌ನಿಂದ ರಿವಾಲ್ವಾರ್ ತೆಗೆದುಕೊಂಡು ತಬ್ರೇಜ್‌ಗೆ ಕೊಟ್ಟು ಮುಜಾಹಿದ್‌ನನ್ನು ಕರೆದುಕೊಂಡು ಮೈಸೂರಿಗೆ ಹೋದರು. ಅಂತೆಯೇ ನಡೆದ ಘಟನೆಯನ್ನೆಲ್ಲಾ ಒಂಚೂರು ಬಿಡದಂತೆ ತಮ್ಮ ಮೇಲಧಿಕಾರಿಗಳಿಗೆ ತಿಳಿಸಿದರು. ವಿಷಯ ಬೆಂಗಳೂರು ಪೊಲೀಸ್ ಕಮೀಷನರ್ ಶಂಕರ್ ಬಿದರಿಯವರ ತನಕ ಹೋಯಿತು.


ಬಿದರಿಯವರು ಸಬ್‌ಇನ್ಸ್‌ಪೆಕ್ಟರ್ ಸಯೀದ್ ತಬ್ರೇಜ್ ಮತ್ತು ವಾಹನ ಕಳ್ಳ ಮುಜಾಹಿದ್ ನಡುವಿನ ಲಿಂಕ್ ಬಗ್ಗೆ ವಸ್ತುನಿಷ್ಠ ಮಾಹಿತಿ ಪಡೆಯಲು ಇಲಾಖಾ ತನಿಖೆ ನಡೆಸುವಂತೆ ಜಯನಗರ ಸಬ್ ಡಿವಿಜನ್ ಎಸಿಪಿಯವರಿಗೆ ಆದೇಶಿಸಿದರು. ಅಂತೆಯೇ ಎಸಿಪಿಯವರು ಈ ಕುರಿತಂತೆ ತನಿಖೆ ನಡೆಸಿ 29 ಪುಟಗಳ ವರದಿಯನ್ನು ಸಿದ್ಧಪಡಿಸಿ ಕಮೀಷನರ್ ಶಂಕರ್ ಬಿದರಿಯವರಿಗೆ ಕಳುಹಿಸಿಕೊಟ್ಟರು. ವರದಿಯಲ್ಲಿ ಸಬ್‌ಇನ್ಸ್‌ಪೆಕ್ಟರ್ ತಬ್ರೇಜ್ ಮತ್ತು ವಾಹನ ಕಳ್ಳ ಮುಜಾಹಿದ್ ನಡುವೆ ಗಾಢ ಸಂಬಂಧವಿರುವುದು, ಮುಜಾಹಿದ್‌ನ ವಾಹನ ಕಳ್ಳತನಕ್ಕೆ ಸಬ್‌ಇನ್ಸ್‌ಪೆಕ್ಟರ್ ತಬ್ರೇಜ್ ಬೆಂಗಾವಲಾಗಿ ನಿಂತಿದ್ದು - ಎಲ್ಲವೂ ತನಿಖೆಯಲ್ಲಿ ಬಯಲಾಯಿತು. ಇನ್ನೂ ವಿಶೇಷ ಎಂದರೆ ಆ ಹೊತ್ತು ಮೈಸೂರು ಪೊಲೀಸರು ಮುಜಾಹಿದ್‌ನನ್ನು ಬಂಧಿಸುವಾಗ ತಬ್ರೇಜ್ ಮತ್ತು ಮುಜಾಹಿದ್ ಇಬ್ಬರೂ ಹೋಗುತ್ತಿದ್ದ ಬೈಕ್ ಕೂಡ ಕದ್ದ ವಾಹನವಾಗಿತ್ತು! ವರದಿಯನ್ನು ಕೂಲಂಕಷವಾಗಿ ಓದಿದ ಶಂಕರ್ ಬಿದರಿ ತಬ್ರೇಜ್‌ಗೆ ಸಸ್ಪೆಂಡ್ ಆರ್ಡರ್ ಕೊಟ್ಟು ಮನೆಗೆ ಕಳುಹಿಸಿದ್ದಾರೆ.

ಸಬ್‌ಇನ್ಸ್‌ಪೆಕ್ಟರ್ ತಬ್ರೇಜ್ ಈಗ್ಗೆ ಕೆಲವು ತಿಂಗಳ ಹಿಂದೆಯಷ್ಟೇ ಜಯನಗರ ಪೊಲೀಸ್ ಠಾಣೆಗೆ ವರ್ಗವಾಗಿ ಬಂದಿದ್ದ. ಅಲ್ಲಿಂದ ಇಲ್ಲಿಯತನಕ ಸುಮಾರು 180 ಕ್ರಿಮಿನಲ್ ಕೇಸುಗಳು ಠಾಣೆಯಲ್ಲಿ ದಾಖಲಾಗಿದ್ದರೂ ಒಂದೇ ಒಂದು ಕೇಸನ್ನು ಭೇದಿಸುವಲ್ಲಿ ಯಾವುದೇ ಪ್ರಗತಿಯಾಗಿಲ್ಲ. ಒಬ್ಬನೇ ಒಬ್ಬ ಕ್ರಿಮಿನಲ್ ಅನ್ನು ಹಿಡಿದಿಲ್ಲ. ಇನ್ನೂ ಗಂಭೀರವಾದ ವಿಚಾರ ಎಂದರೆ ತಬ್ರೇಜ್ ಜಯನಗರ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಆಗಿ ಬಂದ ಮೇಲೆ ಆ ಠಾಣಾ ವ್ಯಾಪ್ತಿಯಲ್ಲಿ ಬೈಕ್ ಕಳ್ಳತನ ಹೆಚ್ಚಾಗಿದೆ! ತಬ್ರೇಜ್ ಕೇವಲ ವಾಹನ ಕಳ್ಳರೊಂದಿಗೆ ಕೈಜೋಡಿಸಿರುವುದು ಮಾತ್ರವಲ್ಲ, ವೇಶ್ಯಾವಾಟಿಕೆಯ ದಂಧೆಯನ್ನೂ ನಡೆಸುತ್ತಿರುವುದಾಗಿ ಹಲವು ಪೊಲೀಸ್ ಅಧಿಕಾರಿಗಳೇ ಹೇಳುತ್ತಾರೆ.

● ಕುಮಾರ್ ಬುರಡಿಕಟ್ಟಿ

ಗಣಿ ಮಾಫಿಯಾ ಆಳ್ವಿಕೆ ಆರಂಭ

ಯಡ್ಡಿ ವಿರುದ್ಧ ಗಣಿರೆಡ್ಡಿಗಳ ಇತ್ತೀಚಿನ ಬುಡಮೇಲು ಕೃತ್ಯದ ಮರ್ಮ ಮತ್ತೆ ಬಯಲಾಗಿದೆ.



ಬಳ್ಳಾರಿಯ ಎಸ್ಪಿ ಡಿ.ಸಿ. ರಾಜಪ್ಪ ಜಿಲ್ಲಾಧಿಕಾರಿ ಹರ್ಷ ಗುಪ್ತಾ ಮತ್ತು ಮಹಾದಕ್ಷ ಡಿಸಿಎಫ್ ಬಿಶ್ವಜಿತ್ ಮಿಶ್ರಾರನ್ನು ಕೇವಲ ಹದಿಮೂರನೇ ದಿನಕ್ಕೇ ಎತ್ತಂಗಡಿ ಮಾಡಿಸುವಲ್ಲಿ ಗಣಿ ರೆಡ್ಡಿಗಳು ಸಫಲರಾಗುವ ಮೂಲಕ ಯಡ್ಡಿ ವಿರುದ್ಧದ ಗಣಿ ರೆಡ್ಡಿಗಳ ದಂಗೆಗೂ, ಬಳ್ಳಾರಿ ಅರಣ್ಯದಲ್ಲಿ ಪ್ರತಿನಿತ್ಯ ಲೂಟಿಯಾಗುತ್ತಿರುವ ಭೂಸಂಪತ್ತಿಗೂ ನೇರಾನೇರ ಸಂಬಂಧವಿದೆಯೆಂಬ ಕಟುವಾಸ್ತವ ಬಟ್ಟಂಬಯಲಾಗಿದೆ.


ಯಾವ ಹುಟ್ಟಾ ಭ್ರಷ್ಟ ಎಸ್ಪಿ ಸೀಮಂತ್ ಕುಮಾರ್, ಗಣಿಕಳ್ಳರ ಸಾಕು ನಾಯಿಯಂತಿದ್ದ ಜಿಲ್ಲಾಧಿಕಾರಿ ಬಿ. ಶಿವಪ್ಪ ಮತ್ತು ಖದೀಮ ಅರಣ್ಯಾಧಿಕಾರಿ ಡಿಸಿಎಫ್ ಮುತ್ತಯ್ಯರನ್ನು ಒದ್ದೋಡಿಸಿ ಆ ಜಾಗಕ್ಕೆ ಇಂಥ ನಿಷ್ಠುರಿ ಅಧಿಕಾರಿಗಳನ್ನು ಮುಖ್ಯಮಂತ್ರಿ ಯಡ್ಡಿ ನೇಮಿಸಿದ್ದರೋ ಕೇವಲ ಹದಿಮೂರೇ ದಿನದಲ್ಲಿ ಅದೇ ಕಳ್ಳರ ಗ್ಯಾಂಗ್ ಮತ್ತೆ ಬಳ್ಳಾರಿಗೆ ವಕ್ಕರಿಸುತ್ತಾರೆಂದರೆ; ಸಾಕ್ಷಾತ್ ಮುಖ್ಯಮಂತ್ರಿಯೇ 'ಕರ್ನಾಟಕದ ಖನಿಜ ಸಂಪತ್ತನ್ನು ಲೂಟಿಕೋರರಿಂದ ರಕ್ಷಿಸಲು ತನ್ನಿಂದ ಸಾಧ್ಯವಾಗುತ್ತಿಲ್ಲ' ಎಂದು ಅರಣ್ಯಾಧಿಕಾರಿಗಳ ಮುಂದೆ ಕಣ್ಣೀರಿಡದೇ ಮತ್ತೇನು ಮಾಡಲು ಸಾಧ್ಯ?

ಕರ್ನಾಟಕದ ಸಮಸ್ತ ಪ್ರಜಾತಾಂತ್ರಿಕ ಶಕ್ತಿಗಳಿಗಿದು ಅಗ್ನಿ ಪರೀಕ್ಷೆಯ ಕಾಲ. ಸರ್ಕಾರವೊಂದರ ಸೂತ್ರವಿಡೀ ಗಣಿ ಮಾಫಿಯಾಗಳ ಕೈವಶವಾಗುವ ಮೂಲಕ ಹೊಸ ಶಕೆಯೊಂದು ಸದ್ದಿಲ್ಲದೇ ಶುರುವಾಗಿದ್ದು ಎತ್ತಂಗಡಿಯಾದ ಖದೀಮ ಅಧಿಕಾರಿಗಳು ಮತ್ತೆ ಬಳ್ಳಾರಿಗೆ ವಕ್ಕರಿಸುವ ಮೂಲಕವೇ.


ಮುಖ್ಯಮಂತ್ರಿ ವಿರುದ್ಧ ಶಾಸಕರ ಅತೃಪ್ತಿ, ತನ್ಮೂಲಕ ನಾಯಕತ್ವದ ಬದಲಾವಣೆಯ ಬೊಬ್ಬೆ ಮತ್ತು ಗಣಿ ನಿಷ್ಠ ಶಾಸಕರ ರೆಸಾರ್ಟ್ ಕೂಟ ಇತ್ಯಾದಿಗಳೇನೇ ಇದ್ದರೂ ಅದು ನೆರೆಸಂತ್ರಸ್ತರ ಆಕ್ರಂದನವನ್ನೂ ಲೆಕ್ಕಿಸದೇ ಭುಗಿಲೆದ್ದಿದ್ದಕ್ಕೆ ಇದ್ದ ಮೂಲ ಕಾರಣವೇ ಬೇರೆಯಾಗಿತ್ತು.


ಸೀಮಂತ್‌ಕುಮಾರ್


ಹರ್ಷ ಗುಪ್ತಾ


ಮುತ್ತಯ್ಯ


ರಾಜಪ್ಪ


ಶಿವಪ್ಪ

ಅದು ಅದಿರು ಲೂಟಿ!

ಒಂದೆಡೆ ಪ್ರವಾಹ ಹೊಡೆದು ಇಡೀ ಉತ್ತರ ಕರ್ನಾಟಕವೇ ಕೊಚ್ಚಿ ಹೋದ ದುರಂತದ ಮಧ್ಯೆಯೇ ಮುಖ್ಯಮಂತ್ರಿ ಯಡ್ಡಿ ಪ್ರತಿ ಅದಿರು ಲಾರಿಗೆ ಸಾವಿರ ರೂಪಾಯಿ ಸುಂಕ ವಿಧಿಸುತ್ತೇನೆಂದೂ, ಆ ಮೂಲಕ ನೆರೆಸಂತ್ರಸ್ತರ ಪರಿಹಾರಕ್ಕೆ ನಿಧಿ ಸಂಗ್ರಹಿಸುತ್ತೇನೆಂದೂ ಘೋಷಿಸಿದರಲ್ಲ; ಅದು ಇಡೀ ಗಣಿ ಮಾಫಿಯಾದ ಬುಡಕ್ಕೇ ಕೊಳ್ಳಿ ಇಟ್ಟಂತಾಗಿತ್ತು, ಹಾಗೇ ಘೋಷಿಸಿದ ಮರುದಿನಕ್ಕೇ ಮುಖ್ಯಮಂತ್ರಿ ಯಡ್ಡಿ ಗಣಿ ಮಾಫಿಯಾಕ್ಕೆ ಮತ್ತೊಂದು ಪೆಟ್ಟು ಕೊಟ್ಟರು. ಅದು ಬಳ್ಳಾರಿಯ ಗಣಿ ರೆಡ್ಡಿಗಳ ಸಾಕುನಾಯಿಗಳಂತಿದ್ದ ಡಿಸಿ ಶಿವಪ್ಪ ಎಸ್ಪಿ ಸೀಮಂತ್ ಕುಮಾರ್ ಮತ್ತು ಡಿಸಿಎಫ್ ಮುತ್ತಯ್ಯ ಎಂಬ ಮೂವರು ಮನೆಹಾಳ ಅಧಿಕಾರಿಗಳ ಎತ್ತಂಗಡಿ.

ಅಲ್ಲಿಗೆ ಗಣಿ ಮಾಫಿಯಾದ ಬೆನ್ನುಮೂಳೆಯನ್ನೇ ಮುರಿದಂತಾಗಿತ್ತು, ಯಡ್ಡಿಯ ಈ ಎರಡು ಆದೇಶ ಹೊರಬಿದ್ದ ಮರುದಿನದಿಂದಲೇ ಗಣಿ ರೆಡ್ಡಿಗಳ ವಿಧ್ವಂಸಕ ಚಟುವಟಿಕೆಗಳು ಭುಗಿಲೆದ್ದವು. ರೇಣುಕಾಚಾರ್ಯ ಮತ್ತು ಬೇಳೂರು ಗೋಪಾಲಕೃಷ್ಣರಂಥ ಕ್ರಿಮಿನಲ್ ಶಾಸಕರಿಗೆ ಯಡ್ಡಿ ವಿರುದ್ಧ ಇದ್ದ ಅಸಹನೆ ಮತ್ತು ಜೊತೆಗಿದ್ದೇ ಕತ್ತಿ ಮಸೆಯುತ್ತಿದ್ದ ಶೆಟ್ಟರ್ ಬೆಂಬಲಿಗರ ಗುಂಪು ತಂತಮ್ಮ ಸ್ವಾರ್ಥ ಸಾಧನೆಗಾಗಿ ಗಣಿ ರೆಡ್ಡಿಗಳ ಜೊತೆ ಕೈಜೋಡಿಸಿತಾದರೂ ಅಂತಿಮವಾಗಿ ಭಾರೀ ಲಾಭ ಗಳಿಸಿದ್ದು ಮಾತ್ರ ಗಣಿ ರೆಡ್ಡಿಗಳೆ.

ಶೆಟ್ಟರ್ ಮತ್ತು ರೇಣುಕಾಚಾರ್ಯನನ್ನೂ ತಮ್ಮ ಜೊತೆ ಹಾಕಿಕೊಂಡ ರೆಡ್ಡಿಗಳು ಅವರಿಗೂ ಲಾಭ ಮಾಡಿಕೊಟ್ಟಿದ್ದು ಮಾತ್ರವಲ್ಲ ಪ್ರತಿನಿತ್ಯ ತಾವು ದೋಚುವ ಇಪ್ಪತ್ತು ಕೋಟಿ ಮೊತ್ತದ ಅದಿರು ಲೂಟಿಗೆ ಅಂಕೆಯೇ ಇಲ್ಲದಂತೆ ಮಾಡಿಕೊಂಡರು.

ಇದಕ್ಕೆ ಸ್ಪಷ್ಟ ಪುರಾವೆಯೆಂದರೆ ಮೊನ್ನೆಯಷ್ಟೇ ಬಳ್ಳಾರಿಗೆ ಕಾಲಿಟ್ಟಿದ್ದ ಹೊಸ ಡಿಸಿಎಫ್ ಬಿಶ್ವಜಿತ್ ಮಿಶ್ರಾ ಕೇವಲ ಹದಿಮೂರು ದಿನದಲ್ಲಿ ಸರ್ಕಾರಿ ಬೊಕ್ಕಸಕ್ಕೆ ಇಪ್ಪತ್ತು ಕೋಟಿಯ ಆದಾಯ ಕಲ್ಪಿಸಿದ್ದು!

ಹಿಂದಿದ್ದ ಡಿಸಿಎಫ್ ಮುತ್ತಯ್ಯ ವರ್ಷ ಪೂರ್ತಿ ವಸೂಲಿ ಮಾಡಲಾಗದ ತೆರಿಗೆಯನ್ನು ಹೊಸ ಡಿಸಿಎಫ್ ಮಿಶ್ರಾ ಕೇವಲ ಹದಿಮೂರು ದಿನದಲ್ಲಿ ಸಂಗ್ರಹಿಸಿದ್ದು ಪವಾಡದಂತೆ ಕಾಣಬಹುದು. ಅದು ಇಡೀ ಬಳ್ಳಾರಿಯ ಸರ್ಕಾರಿ ಯಂತ್ರಾಂಗ ಹೇಗೆ ಗಣಿ ಮಾಫಿಯಾದ ಜೇತಕ್ಕೆ ಬಿದ್ದಿದೆ ಎಂಬುದಕ್ಕೆ ಸಮರ್ಥನೆಯಂತಿತ್ತು.

ಯಡ್ಡಿ ವಿರುದ್ಧದ ಭಿನ್ನರ ಬಂಡಾಯಕ್ಕೆ ಯಾರೇನೇ ಕಾರಣ ಕೊಟ್ಟರೂ ಅಸಲೀ ಕಾರಣ ಮಾತ್ರ ಅದಿರು ಲೂಟಿಯೇ ಎಂಬುದಕ್ಕೆ ಇದಕ್ಕಿಂತ ಬೇರೆ ಪುರಾವೆ ಬೇಕೆ?

ಇದರರ್ಥ ಮುಖ್ಯಮಂತ್ರಿ ಯಡ್ಡಿಯನ್ನು ಉಚ್ಚಾಟನೆ ಮಾಡಿಯಾದರೂ ಈ ಮೂವರು ಅಧಿಕಾರಿಗಳನ್ನು ಮತ್ತೆ ಬಳ್ಳಾರಿಗೆ ತರುವುದು ರೆಡ್ಡಿಗಳ ಉದ್ದೇಶವಾಗಿತ್ತು. ಬಹುಶಃ ಈತನಕ ಯಾರಿಗೂ ಗೊತ್ತಿಲ್ಲದ ಒಂದು ಸಂಗತಿಯೇನೆಂದರೆ; ಅಧಿಕೃತವಾಗಿ ಅಥವಾ ಕಾನೂನುಬದ್ಧವಾಗಿ ಗಣಿ ರೆಡ್ಡಿಗಳಿಗೆ ಕರ್ನಾಟಕದಲ್ಲಿ ಯಾವುದೇ ಗಣಿ ಪರವಾನಗಿಯಿಲ್ಲ, ದಾಖಲೆ ಪ್ರಕಾರವೇ ಹೇಳುವುದಾದರೆ ತಾವು ಕರ್ನಾಟಕದಲ್ಲಿ ಯಾವುದೇ ಗಣಿಗಾರಿಕೆ ನಡೆಸುತ್ತಿಲ್ಲ ಎಂದು ಗಣಿ ರೆಡ್ಡಿಗಳು ಸುಲಭವಾಗಿ ಜಾರಿಕೊಳ್ಳಬಹುದು.

ಆದರೆ ಕಟುವಾಸ್ತವವೇ ಬೇರೆಯಿದೆ. ಸ[...] ಸಕ್ರಿಯವಾಗಿರುವ ಬಳ್ಳಾರಿ, ಸಂಡೂ[ರು] ಹೊಸಪೇಟೆಗಳ ಒಟ್ಟೂ 78 ಗಣಿಗಳ [...] ನಲವತ್ತಕ್ಕೂ ಹೆಚ್ಚು ಗಣಿಗಳನ್ನು ಗಣಿರೆಡ್ಡಿ[ಗಳು] ನಿಯಂತ್ರಿಸುತ್ತಾರೆ. ಇದರರ್ಥ ಗೂಂಡಾಪಡೆ ಮ[...] ಪೊಲೀಸ್ ಪಡೆಗಳನ್ನು ಒಟ್ಟೊಟ್ಟಿಗೇ ಛೂಬಿ[ಟ್ಟು] ಒಂದೊಂದೇ ಗಣಿಗಳನ್ನು ನುಂಗಿ ಕೂತ ಗಣಿರೆಡ್ಡಿ[ಗಳ] ಪಾಲಿಗೆ ಬ್ರಹ್ಮಾಸ್ತ್ರದಂತೆ ಬಳಕೆಯಾಗುವುದು ಅ[...] ಇಲಾಖೆ.

ರೆಡ್ಡಿಗಳ ಅಧಿಕೃತ ಸ್ವಾಮ್ಯಕ್ಕೊಳಪಟ್ಟ ಓಬಳಾಪು[ರಂ] ಮೈನಿಂಗ್ ಕಂಪೆನಿ ಮತ್ತು ಅನಂತಪುರಂ ಮೈನಿ[ಂಗ್] ಕಂಪೆನಿಗಳಿಗೆ ಹೆಚ್ಚೆಂದರೆ ಮೂರು ಗಣಿ ಪರವಾ[ನ]ಗಳಿರಬಹುದು. ಇವೆಲ್ಲವೂ ಆಂಧ್ರದೊಳಗಿನ ಗಣಿ[ಗಳೇ] ಹೊರತು ಕರ್ನಾಟಕದೊಳಗಿಲ್ಲ, ಆದರೆ ಕರ್ನಾಟಕದೊಳ[ಗಿನ] ನಲವತ್ತಕ್ಕೂ ಹೆಚ್ಚು ಗಣಿಗಳು ರೆಡ್ಡಿಗಳ ವಶಕ್ಕೊಳ[ಗಾ]ದ್ದಾದರೂ ಹೇಗೆ?

ಹಕೀಕತ್ತಿರುವುದೇ ಅಲ್ಲಿ, ಮೊದಮೊದಲು ಗಣಿ[...]ಗಳು ಈ ಕಾರ್ಯಕ್ಕೆ ಬಳಸಿದ್ದು ಖತರ್‌ನಾಕ್ ಶ್ರೀರಾಮು[ಲು]ವನ್ನು. ಆ ಮೂಲಕ ಬಳ್ಳಾರಿಯ ಒಂದೆರಡು ಗಣಿ[...] ರೈಸಿಂಗ್ ಕಾಂಟ್ರಾಕ್ಟು ಪಡೆದ ಜನಾರ್ದನರೆಡ್ಡಿ [...] ರಾಜಶೇಖರ ರೆಡ್ಡಿ ಆಂಧ್ರದ ಮುಖ್ಯಮಂತ್ರಿಯಾಗುತ್ತಿದ್ದ[...] ರಕ್ಕಸನಂತೆ ಬೆಳೆದು ನಿಂತಿದ್ದ. ಯಡ್ಡಿ ಉಪಮುಖ್ಯಮ[ಂತ್ರಿ]ಯಾಗಿ ಶ್ರೀರಾಮುಲು ಮಂತ್ರಿಯಾಗುತ್ತಿದ್ದಂತೆ ಡಿಸಿ[ಎಫ್] ಮುತ್ತಯ್ಯ ಮತ್ತು ಎಸ್ಪಿ ಸೀಮಂತ್‌ಕುಮಾರ್‌ರ[...] ಮನೆಹಾಳ ಅಧಿಕಾರಿಗಳನ್ನು ಬಳ್ಳಾರಿಗೆ ಹಾಕಿಸಿಕೊ[ಂಡ] ರೆಡ್ಡಿಗಳು ಒಂದೊಂದೇ ಗಣಿಯನ್ನು ನುಂಗಲಾರಂಭಿಸಿದ[ರು].

ಅದೂ ಎಂಥಾ ಟೆಕ್ನಿಕ್ ಎಂದರೆ ತೋಳ್ಬಲದಲ್ಲಿ ಮತ್ತು ರಾಜಕೀಯವಾಗಿ ಯಾರು ದುರ್ಬಲರಾಗಿದ್ದಾರೋ ಅಂಥ ಗಣಿ ಧಣಿಗಳಿಗೆ ಮೊದಲು ಗೂಂಡಾ ಧಮಕಿ ಹಾಕುವುದು. ಒಂದೋ ನಮಗೇ ರೈಸಿಂಗ್ ಕಾಂಟ್ರಾಕ್ಟ್ ಕೊಡಿ. ಅದಾಗದಿದ್ದರೆ ಇಂತಿಷ್ಟೆಂದು ಪರ್ಸೆಂಟೇಜ್ ಕೊಡಿ ಎಂದು ರೆಡ್ಡಿ ಗ್ಯಾಂಗ್ ಬೆದರಿಸುತ್ತದೆ. ಇದ್ಯಾವುದಕ್ಕ[ೂ] ಜಗ್ಗದೇ ಹೋದರೆ ಎರಡನೇ ತಂತ್ರವಾಗಿ ಅರಣ್ಯಾಧಿಕಾರಿಗಳನ್ನು ಛೂ ಬಿಡುತ್ತದೆ.

ಬಳ್ಳಾರಿ ಭಾಗದ ಬಹುತೇಕ ಗಣಿಗಳೆಲ್ಲ ಅರಣ್ಯದಲ್ಲಿ ನಡೆಯುವ ಅಕ್ರಮ ಗಣಿಗಳೇ ಆದ್ದರಿಂದ ಮೊದಮೊದಲು ಅರಣ್ಯಾಧಿಕಾರಿಗಳು ವಕ್ಕರಿಸಿ ನಿಮ್ಮಿಂದ ಇಂತಿಂಥಾ ಅಕ್ರಮಗಳಾಗುತ್ತಿ[ವೆ] ಕೂಡಲೇ ಅದನ್ನು ನಿಲ್ಲಿಸಿ ಎಂದು ಗಣಿ ಮಾಲೀಕರನ್ನು ಪೀಡಿಸುತ್ತಾರೆ. ಅಲ್ಲಿಗೆ ಗಣಿ ಧಣಿಯಾದವನಿಗದು ಅರ್ಥವಾಗಬೇಕು. ಅಲ್ಲಿಗ[ೂ] ಜಗ್ಗದೇ ಹೋದರೆ ಅರಣ್ಯ ಸಿಬ್ಬಂದಿ ಎರಡನೇ ದಾಳಿ ನಡೆಸಿ ಗಣಿ ನಿಲ್ಲಿಸದೇ ಹೋದರೆ ಕೇಸು ಹಾಕಲೇಬೇಕಾಗುತ್ತದೆ ಎಂದು ಹೂಂಕರಿಸುತ್ತಾರೆ.

ಇನ್ನು ಕೇಸೇನಾದರೂ ಬಿತ್ತೆಂದರೆ ಕೋರ್ಟು ವಿಚಾ[...]

▶▶▶

ಸಿಬಿಐ ತನಿಖೆಯಾದರೂ ಕರ್ನಾಟಕದ ಕೊಳ್ಳೆ ತಪ್ಪುತ್ತಾ?

ಕರ್ನಾಟಕದ ವಿರೋಧ ಪಕ್ಷಗಳು ಮತ್ತು ಆಡಳಿತಾರೂಢ ಬಿಜೆಪಿಯ ಕಪಾಳಕ್ಕೆ ಹೊಡೆದಂತೆ ಆಂಧ್ರ ಸರ್ಕಾರ ಓಬಳಾಪುರಂ ಮೈನಿಂಗ್ ಕಂಪೆನಿಯ ಗಣಿ ಲೂಟಿಯನ್ನು ಸಿಬಿಐ ತನಿಖೆಗೊಪ್ಪಿಸಿದೆ ನಿಜ. ಆದರೆ ಗಣಿ ರೆಡ್ಡಿಗಳು ದೋಚಿರುವುದು ಕರ್ನಾಟಕದ ಅರಣ್ಯವನ್ನೇ ಹೊರತು ಆಂಧ್ರದಲ್ಲಿ ದೋಚಿದ್ದು ತೀರಾ ಕಮ್ಮಿ. ಕರ್ನಾಟಕದ ರಾಜ್ಯಾಧಿಕಾರ ಹಿಡಿದು ಇಲ್ಲಿನ ಅರಣ್ಯ, ಗಣಿ ಮತ್ತು ಪೊಲೀಸು ಇಲಾಖೆಗಳನ್ನೇ ಬಳಸಿಕೊಂಡು ಗೂಂಡಾಗಿರಿ ನಡೆಸಿ ನಲವತ್ತಕ್ಕೂ ಹೆಚ್ಚು ಗಣಿಗಳನ್ನು ಬೇನಾಮಿಯಾಗಿ ದೋಚುತ್ತಿರುವ ಗಣಿ ರೆಡ್ಡಿಗಳು ಇದಕ್ಕಿಂತಲೂ ದೊಡ್ಡ ಮಟ್ಟದಲ್ಲಿ ಅರಣ್ಯಭೂಮಿಗೆ ಕನ್ನ ಹಾಕಿದ್ದಾರೆ. ಹೀಗೆ ಕರ್ನಾಟಕದಿಂದ ದೋಚಿದ ಅದಿರನ್ನು ಆಂಧ್ರದ ನಕಲಿ ಪರ್ಮಿಟ್ಟುಗಳನ್ನು ಬಳಸಿ ವಿದೇಶಕ್ಕೆ ಮಾರಿಕೊಂಡ ರೆಡ್ಡಿಗಳ ಲೂಟಿಗೆ ಶಿಕ್ಷೆಯಾಗಬೇಕೆಂದರೆ ಕರ್ನಾಟಕ ಕೂಡ ಇಡೀ ಹಗರಣವನ್ನು ಸಿಬಿಐ ತನಿಖೆಗೊಪ್ಪಿಸಬೇಕಾಗುತ್ತದೆ!

ಹಾಗೊಂದು ಪಕ್ಷ ಸಿಬಿಐ ತನಿಖೆಗೊಪ್ಪಿಸುವಂತೆ ಕರ್ನಾಟಕದ ಜನ ಬೀದಿಗಿಳಿಯದೇ ಹೋದರೂ ಯಾವ ಗಳಿಗೆಯಲ್ಲಾದರೂ ಗಣಿ ರೆಡ್ಡಿಗಳನ್ನು ಜೈಲಿಗೆ ಹಾಕುವ ಅಥವಾ ಅವರ ಸಂಪತ್ತನ್ನು ಮುಟ್ಟುಗೋಲು ಹಾಕಿಕೊಳ್ಳುವ ಎಲ್ಲಾ ಅಧಿಕಾರ ಮತ್ತು ಕಾನೂನುಬದ್ಧ ಅವಕಾಶಗಳು ಮುಖ್ಯಮಂತ್ರಿಗಿವೆ.

ಇದಾಗದೇ ಹೋದ ಪಕ್ಷದಲ್ಲಿ ಆಂಧ್ರ ಸರ್ಕಾರ ಕೊಟ್ಟ ನಕಲಿ ಪರ್ಮಿಟ್ಟುಗಳು ಮತ್ತು ಅಗೆದ ಅದಿರಿನ ಪ್ರಮಾಣದ ತನಿಖೆಯಾದರೂ ರೆಡ್ಡಿ ಗ್ಯಾಂಗ್ ಜೈಲು ಪಾಲಾಗುವುದು ಗ್ಯಾರಂಟಿ. ಹೀಗಿದ್ದೂ ಗಣಿ ರೆಡ್ಡಿಗಳು ಚಾಪೆ ಕೆಳಗೆ ನುಸುಳಲು ಷಡ್ಯಂತ್ರ ರಚಿಸಿದ್ದಾರೆ. ಇತ್ತೀಚೆಗೆ ಆಂಧ್ರದಲ್ಲಿ ತೆಲುಗು ದೇಶಂ, ಪ್ರಜಾ ರಾಜ್ಯಂ, ಸಿಪಿಐ, ಸಿಪಿಎಂ ಸೇರಿದಂತೆ ಬಹುತೇಕ ವಿರೋಧ ಪಕ್ಷಗಳು ಗಣಿ ಲೂಟಿಯ ವಿರುದ್ಧ ಬೀದಿಗಿಳಿಯುತ್ತಿದ್ದಂತೆ ಆಂಧ್ರ ಸರ್ಕಾರ ಕೂಡ ಕಠಿಣ ನಿಲುವು ತಳೆಯಿತು.

ಅದರರ್ಥ ಬಳ್ಳಾರಿಯ ಹಗರಿ, ಬನ್ನಟ್ಟಿ ಮತ್ತು ಅಲಕುಂದಿ ಚೆಕ್‌ಪೋಸ್ಟ್‌ಗಳಿಂದ ಆಂಧ್ರದ ಬಂದರುಗಳಿಗೆ ಸ್ಮಗಲ್ ಆಗುತ್ತಿದ್ದ ಕರ್ನಾಟಕದ ಅದಿರಿನ ಮೇಲೆ ನಿರ್ಬಂಧ ಹೇರಿತು. ಹೀಗಾಗಿ ಕಳೆದೊಂದು ವಾರದಿಂದ ಕದ್ದ ಮಾಲು ಆಂಧ್ರಕ್ಕೆ ಹೋಗದೇ ಮತ್ತೆ ಕಾರವಾರದ ಬೇಲೆಕೆರೆ, ಮಂಗಳೂರು ಮತ್ತು ಬೆಳಗಾವಿಯ ರಾಮನಗರ ಚೆಕ್‌ಪೋಸ್ಟ್ ಮೂಲಕ ಗೋವಾ ಬಂದರುಗಳಿಗೆ ರವಾನೆಯಾಗುತ್ತಿದೆ. ಮಂತ್ರಿ ಅಸ್ನೋಟಿಕರ್ ಹಿಡಿತದ ಬೇಲೆಕೆರೆ ಬಂದರೊಂದಕ್ಕೇ ದಿನಂಪ್ರತಿ ಎರಡೂವರೆ ಸಾವಿರ ಲಾರಿಗಳ ಕದ್ದಮಾಲು ಬರುತ್ತದೆ.

ಕರ್ನಾಟಕದ ಕೊಳ್ಳೆಯನ್ನು ಆಂಧ್ರದ ಮುಖ್ಯಮಂತ್ರಿಯೇ ಬಾಯಿ ತುಂಬ ಗುಣಗಾನ ಮಾಡಿ ಸಿಬಿಐ ತನಿಖೆಗೊಪ್ಪಿಸಿದಾಗಲೂ ಕನ್ನಡಿಗರಿಗಾಗಲಿ, ಕರ್ನಾಟಕ ಸರ್ಕಾರಕ್ಕಾಗಲಿ, ಇಲ್ಲಿನ ವಿರೋಧ ಪಕ್ಷಗಳಿಗಾಗಲಿ ನಾಚಿಕೆಯಾಗುತ್ತಿಲ್ಲವೆಂದರೆ ಇದಕ್ಕಿಂತ ದುರಂತ ಬೇಕೇ?

ಬಡಿದಾಡಲಾಗದೇ ಕಾಲಿಗೆ ಬಿದ್ದ ಅನಿಲ್ ಲಾಡ್



ಗಣಿ ರೆಡ್ಡಿಗಳಿಗೆ ಶರಣಾಗಿ ಕಪ್ಪ ಸಲ್ಲಿಸದೇ ಹೋದರೆ ಬಳ್ಳಾರಿಯ ಯಾವೊಬ್ಬ ಗಣಿ ಮಾಲಿಕನಿಗೂ ಉಳಿಗಾಲವಿಲ್ಲ ಎಂಬುದಕ್ಕೆ ಪಕ್ಕಾ ಉದಾಹರಣೆಯಂತಿದ್ದರೆ ಅದು ಕಾಂಗ್ರೆಸ್ ನಾಯಕ ಅನಿಲ್ ಲಾಡ್.

ಕಳೆದ ಚುನಾವಣೆ ಸೇರಿದಂತೆ ನಿನ್ನೆ ಮೊನ್ನೆಯ ತನಕ ಗಣಿ ರೆಡ್ಡಿಗಳ ವಿರುದ್ಧ ಇನ್ನಿಲ್ಲದಂತೆ ಕಿಡಿಕಾರುತ್ತಿದ್ದ ಲಾಡ್ ಬಿಜೆಪಿ ಸರ್ಕಾರದಲ್ಲಿ ರೆಡ್ಡಿಗಳ ಪ್ರಾಬಲ್ಯ ಹೆಚ್ಚಾದಂತೆ ಗಪ್‌ಚುಪ್ಪಾಗಿ ಹೋದರು. ಅದಕ್ಕೆ ಮುಖ್ಯ ಕಾರಣ ಲಾಡ್ ಸಾಹೇಬರ ಗಣಿ ಕಾಳಜಿ. ಸಂಡೂರಿನಲ್ಲಿ ವಿ.ಎಸ್. ಲಾಡ್ ಕಂಪೆನಿ ಹೊಸಪೇಟೆಯಲ್ಲಿ ಕೆಎಲ್‌ಡಿ ಅಂದರೆ ಕನ್ನಯ್ಯ ಲಾಲ್ ದುದೇರಿಯಾ ಎಂಬ ಇನ್ನೊಂದು ಕಂಪೆನಿಯ ಎರಡೆರಡು ಗಣಿಗಳನ್ನು ನಿಭಾಯಿಸುತ್ತಿರುವ ಲಾಡ್‌ಗ[ೆ] ಸದ್ಯ ಗಣಿಧೂರ್ತ ಜನಾರ್ದನ ರೆಡ್ಡಿಯೇ ಪಾರ್ಟ್‌ನರ್. ಅದು 30:70 ಸೆಂಟಸ್ತಿಕೆ! ಅಂದರೆ ಅನಿಲ್ ಲಾಡ್ ತನ್ನೆಲ್ಲಾ ತಪ್ಪುಗಳಿಗಾಗಿ ರೆಡ್ಡಿಗಳ ಕಾಲಿಗ[ೆ] ಬಿದ್ದು ಅಂಗಲಾಚಿ ತನ್ನ ಎರಡೂ ಗಣಿಯಲ್ಲಿ ದೋಚಿದ ಅದಿರಿನಲ್ಲಿ ಶೇ. 3[0] ರಷ್ಟನ್ನು ಜನಾರೆಡ್ಡಿಯ ಪಾದಕ್ಕರ್ಪಿಸಲೇಬೇಕು. ಇಲ್ಲದೇ ಹೋದರೆ ರೆಡ್ಡಿಗಳೇ ನಿಂತು ಗಣಿ ಮುಚ್ಚಿಸುತ್ತಾರೆ ಅಥವಾ ಜಬರ್‌ದಸ್ತಿ ಮಾಡಿ ಅದಿರನ್ನೇ ಹೊತ್ತೊಯ್ಯುತ್ತಾರೆ. ಇಲ್ಲಿ ಅನಿಲ್ ಲಾಡ್‌ಗೆ ಗಣಿ ರೆಡ್ಡಿಗಳು ತೋರಿದ ಕರುಣೆಯೆಂದರೆ ಬೇರೆಲ್ಲ ಗಣಿ ಧಣಿಗಳನ್ನು ಹಿಂಡಿದಂತೆ ಐವತ್ತೋ, ಅರವತ್ತೋ ಪರ್ಸೆಂಟ್ ಕೇಳಿಲ್ಲ, ಅನಿಲ್ ಲಾಡ್ ಥರದವರೇ ಈ ರೀತಿ ಶರಣಾದರ[ೆ] ಇನ್ನು ಬೇರೆ ಗಣಿದೊರೆಗಳ ಪಾಡು ಏನಾಗಿರಬೇಡ?



ಅಂತ ಅಲೆಯಬೇಕು. ಮಾಡಿದ ಪಾಪ ದಾಖಲೆಗಳಲ್ಲಿ ಶಾಶ್ವತವಾಗಿ ಉಳಿದುಬಿಡುತ್ತದೆ ಎಂದು ಲೆಕ್ಕ ಹಾಕಿದ ಧಣಿ ಸಹಜವಾಗೇ ಅರಣ್ಯಾಧಿಕಾರಿಗಳ ಜೊತೆ ಚೌಕಾಶಿಗಿಳಿಯುತ್ತಾನೆ. ಆಗ ಅರಣ್ಯಾಧಿಕಾರಿಗಳು ಸೂಚಿಸುವ ಏಕೈಕ ಪರಿಹಾರವೇ ಗಣಿ ರೆಡ್ಡಿಗಳ ಜೊತೆ ಸರಿ ಮಾಡಿಕೊಳ್ಳಿ ಎಂಬ ಸುಲಭೋಪಾಯ.

ಹಾಗೂ ಜಗ್ಗದೇ ಹೋದ ಗಣಿ ಧಣಿಗಳ ಮೇಲೆ ವಿನಾಕಾರಣ ಅರಣ್ಯಾಧಿಕಾರಿಗಳನ್ನು ಬಿಟ್ಟು ಕೇಸು ಹಾಕಿಸುವುದು, ಪೊಲೀಸರ ಮೂಲಕ ಜಾತಿ ನಿಂದನೆ ಕೇಸು ದಾಖಲಿಸುವುದು, ಜೇಸಿಬಿ ನುಗ್ಗಿಸಿದ್ದೇ ಬಲವಂತದಿಂದ ಅದಿರು ಹೊತ್ತೊಯ್ಯುವುದು; ಇತ್ಯಾದಿಗಳನ್ನು ರೆಡ್ಡಿಗಳು ಪ್ರಯೋಗಿಸುತ್ತಾರೆ. ಕೊನೆಕೊನೆಗೆ ವಿಧಿಯಿಲ್ಲದೇ ಗಣಿ ಮಾಲೀಕ ಶರಣಾಗಬೇಕು.

ಇದು ರೆಡ್ಡಿಗಳ ಗೂಂಡಾಗಿರಿಯ ಶೈಲಿ. ಹೀಗೆ ಸರ್ಕಾರಿ ಯಂತ್ರಾಂಗ ಬಳಸಿಕೊಂಡೇ ವೈ. ಮಹಾಬಲೇಶ್ವರಪ್ಪ, ಬಳ್ಳಾರಿ ಮೈನಿಂಗ್ ಕಾರ್ಪೊರೇಷನ್, ಹಿಂದ್ ಟ್ರೇಡರ್ಸ್, ಮೆಹಬೂಬ್ ಟ್ರಾನ್ಸ್‌ಪೋರ್ಟ್, ಎಜಿಕೆ, ಟ್ರೈಡೆಂಟ್ ಮಿನರಲ್ಸ್, ವಿನಾಗ್, ಎಸ್‌ವಿಕೆ, ಸ್ಪಾರ್ಕ್ ಲೈನ್ ಇಂಡಿಯಾದಂಥ ಫಲವತ್ತು ಗಣಿಗಳನ್ನು ಬೇನಾಮಿಯಾಗಿ ರೆಡ್ಡಿಗಳು ವಶಪಡಿಸಿಕೊಂಡರು.

ಹೆಸರಿಗಷ್ಟೇ ಲೈಸೆನ್ಸ್ ಇದೆ ಎಂಬುದನ್ನು ಬಿಟ್ಟರೆ ಇಡೀ ಗಣಿಯನ್ನು ಅಗೆದು ಅದಿರು ಸಾಗಿಸುವುದೆಲ್ಲ ರೆಡ್ಡಿ ಗ್ಯಾಂಗೇ. ಧಮಕಿಗೆ ಜಗ್ಗಿದರೆ ಇಂತಿಷ್ಟೆಂದು ಪರ್ಸೆಂಟೇಜ್ ಕೊಡುತ್ತಾರೆ. ಮಣಿಯದೇ ಹೋದರೆ ಇಡೀ ಗಣಿಗೇ ನುಗ್ಗಿ ಅದಿರು ದೋಚುತ್ತಾರೆ. ದೂರು ಕೊಟ್ಟರೆ ಪೊಲೀಸರು ಕೋರ್ಟಿಗೆ ಹೋಗಿ ಎನ್ನುತ್ತಾರೆ. ಅರಣ್ಯಾಧಿಕಾರಿಗಳಿಗೆ ದೂರು ಕೊಟ್ಟರೆ ಪೊಲೀಸರತ್ತ ಸಾಗ ಹಾಕುತ್ತಾರೆ. ಹೀಗೆ ದಬ್ಬಾಳಿಕೆ ತಾಳದೇ ತನ್ನ ಇಡೀ ಗಣಿಯನ್ನೇ ಎಸ್‌ಎ ಮೈನ್ಸ್ ತವಾಬ್ ಕಂಪೆನಿ ರೆಡ್ಡಿಗಳ ಪಾದಕ್ಕರ್ಪಿಸಿದರೆ, ಟಪಾಲ್ ನಾರಾಯಣ ರೆಡ್ಡಿ ಗವಿಸಿದ್ದೇಶ್ವರ ಎಂಟರ್‌ಪ್ರೈಸಸ್ ಮತ್ತು ಬಿಐಓಪಿ ಗಣಿಗಳು ಕೋರ್ಟ್ ತಗಾದೆಯಲ್ಲಿ ಸ್ಥಗಿತಗೊಂಡವು. ಇನ್ನೂ ಕೆಲವರು ತಮ್ಮ ಲಾಭದಲ್ಲಿ ಇಂತಿಷ್ಟು ಪಾಲು ಕೊಡುತ್ತೇವೆಂದು ರೆಡ್ಡಿಗಳಿಗೆ ಶರಣಾದರು.

ಈ ಪೈಕಿ ಹೊಸಪೇಟೆಯ ಕೆಎಂಎಂಐ ಇವತ್ತಿಗೂ ತನ್ನ ಪಾಲಿನಲ್ಲಿ 30 ರಷ್ಟನ್ನು ಗಣಿ ರೆಡ್ಡಿಗಳಿಗೊಪ್ಪಿಸುತ್ತದೆ. ಲೈಸೆನ್ಸಿಗಳಾದ ಚಾರುಚಂದ್ರ, ಆರ್. ಮಲ್ಲಪ್ಪ, ರಾಜಾಪುರ ಮೈನ್ಸ್, ಆರ್‌ಬಿಎಸ್‌ಎಸ್‌ಎನ್ ದಾಸ್ ಮುಂತಾದ ಹೊಸಪೇಟೆಯ ಗಣಿಗಳೆಲ್ಲ 25 ರಿಂದ 30 ಪರ್ಸೆಂಟಿನಷ್ಟು ಅದಿರನ್ನು ಇವತ್ತಿಗೂ ರೆಡ್ಡಿಗಳ ಪಾದಕ್ಕಿಡುತ್ತಿವೆ. ಇದೇ ಹೊಸಪೇಟೆಯ ಎಸ್.ಬಿ. ಮಿನರಲ್ಸ್ ಅನ್ನು ವಶಪಡಿಸಿಕೊಂಡಿರುವ ರೆಡ್ಡಿ ಗ್ಯಾಂಗ್ ಅದರ ಲೈಸೆನ್ಸುದಾರನಿಗೆಂದು ಬಿಸಾಕುವುದು ಕೇವಲ 15 ಪರ್ಸೆಂಟ್ ಮಾತ್ರ. ಶಾಂತಲಕ್ಷ್ಮಿ ಜಯರಾಮ್ ಎಂಬ ಒಡೆಯೊಡತಿ ಯಿಂದ ರೆಡ್ಡಿಗಳು ದಿನಂಪ್ರತಿ ಶೇ. 60 ರಷ್ಟು ಅದಿರು ಸುಲಿಯುತ್ತಿದ್ದಾರೆ.

ಇನ್ನು ಸಂಡೂರು ಸೆಕ್ಟರ್‌ಗೆ ಬಂದರೆ ಅಲ್ಲಿನ ಅಶ್ವತ್ಥ ನಾರಾಯಣಸಿಂಗ್, ಬಾಲಾಜಿ ಮೈನ್ಸ್ ಅಂಡ್ ಮಿನರಲ್ಸ್, ಭರತ್ ಮೈನ್ಸ್ ಅಂಡ್ ಮಿನರಲ್ಸ್, ಜಿ.ಜಿ. ಬ್ರದರ್ಸ್, ಮಂಜನಗೌಡ, ವೃಷಭೇಂದ್ರಯ್ಯ, ಕನ್ಹಯ್ಯಲಾಲ್ ದುದೇರಿಯಾ, ಎಂ. ಹನುಮಂತರಾವ್, ಎಂಎಂಸಿ, ನದೀಮ್ ಮಿನರಲ್ಸ್, ಸುಬ್ಬಾರೆಡ್ಡಿ ಅಂಡ್ ಸನ್ಸ್, ಎಸ್.ಎ. ತವಾಬ್, ಎಸ್‌ಕೆಎಂಇ, ಟಿಎಂಪಿಎಲ್, ವೆಸ್ಕೋ, ಝೆನಿತ್ ಟ್ರಾನ್ಸ್‌ಪೋರ್ಟ್ ಕಂಪೆನಿ; ಮುಂತಾದ ಗಣಿ ಕಂಪೆನಿಗಳೆಲ್ಲವೂ ದಿನಂಪ್ರತಿ ಅಗೆಯುವ ಅದಿರಿನ ಶೇ. 25 ರಿಂದ 30 ರಷ್ಟು ಪಾಲನ್ನು ರೆಡ್ಡಿಗಳಿಗರ್ಪಿಸಲೇಬೇಕು.

ಹೆಸರಿಗೆ ಯಾರದೋ ಗಣಿಯಾದರೂ ದೋಚುವುದು ಮಾತ್ರ ರೆಡ್ಡಿಗಳೇ. ಹೀಗೆ ದೋಚಿದ ಹಡಬಿಟ್ಟಿ ಅದಿರನ್ನು ಯಾವುದೇ ಪರ್ಮಿಟ್ಟಿಲ್ಲದೇ ಯಾವ ತೆರಿಗೆಯನ್ನೂ ಪಾವತಿಸದೇ, ಯಾವ ಚೆಕ್‌ಪೋಸ್ಟಿನ ಯಾವುದೇ ತಪಾಸಣೆಗೂ ನಿಲುಕದೇ ಲಾರಿಗಳಲ್ಲಿ ಓವರ್‌ಲೋಡಿಂಗ್ ಮಾಡಿ ಸಾಗಿಸುವ ಗಣಿ ರೆಡ್ಡಿಗಳ ದಿನವೊಂದರ ಪಾಪದ ಸಂಪಾದನೆಯೇ ಇಪ್ಪತ್ತು ಕೋಟಿ. ತಿಂಗಳೊಂದಕ್ಕೆ ಇದೇ 600 ಕೋಟಿಯಾಗುತ್ತದೆ. ವರ್ಷವೊಂದಕ್ಕೆ ಈ ಬಾಬತ್ತೇ ಏಳು ಸಾವಿರದ ಇನ್ನೂರು ಕೋಟಿಯಾಗುತ್ತದೆ.

ಜನಾರ್ದನರೆಡ್ಡಿ ಎತ್ತಂಗಡಿ ಮಾಡಿದ ಹರಾಮಿ ಅಧಿಕಾರಿ ... ಇಂಥದೊಂದು ಮಾಫಿಯಾ ನಡೆಯಲು ... ತಮ್ಮ ಚಿಲ್ಲರೆ ಬೇಡಿಕೆಗಳಿಗಾಗಿ ರೆಡ್ಡಿಗಳ ಜೊತೆ ... ಕೈಜೋಡಿಸಿದ ಶೆಟ್ಟರ್, ರೇಣುಕಾಚಾರ್ಯ ರಂಥವರಿಗೆ ... ಹೇಗೇ ತಾನೇ ಅರ್ಥವಾಗಲು ಸಾಧ್ಯ?

● ರಾ. ಸೋಮನಾಥ್


ಮುದಿ ಶ್ರೀಮಂತ ಅಕಬರ್ ಭಾಷಾನ ಸೆಕ್ಸ್ ಸೀಡಿ!

'ಉಡ' ಹೀರೋ ಹತ್ಯೆಗೆ ನಿರ್ಮಾಪಕನ ಸುಪಾರಿ?

ಅದು ಮುದಿ ಶ್ರೀಮಂತನೊಬ್ಬನ ಸಿನಿಮಾ ಶೋಕಿಯಿಂದಾದ ಫಜೀತಿಯೆ? ಸಿನಿಮಾ ನಟಿಯರೊಂದಿಗಿನ ಆತನ ಚಕ್ಕಂದದ ವೀಡಿಯೋ ತೆಗೆಯಲಾಗಿತ್ತಾ? ಅದನ್ನಿಟ್ಟುಕೊಂಡು ಯಾರಾದರೂ ಆತನನ್ನು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದರಾ? ಹಾಗೆ 'ಬ್ಲ್ಯಾಕ್‌ಮೇಲ್' ಮಾಡುತ್ತಿರುವುದು ತಾನೇ ನಿರ್ಮಿಸಿದ ಚಿತ್ರದ ಹೀರೋ ಎಂದು ಲೆಕ್ಕಹಾಕಿದ ಆತ ಬಾಡಿಗೆ ಹಂತಕರನ್ನು ಬಿಟ್ಟು ಹೀರೋ ಹತ್ಯೆಗೆ ಕೈಯಿಟ್ಟನೆ?

ಸದ್ಯ ಮೈತುಂಬಾ ಮಚ್ಚೇಟು ತಿಂದು ಮಲ್ಲೇಶ್ವರದ ಕೆ.ಸಿ. ಜನರಲ್ ಆಸ್ಪತ್ರೆಯಲ್ಲಿ ನರಳುತ್ತಿರುವ 'ಉಡ' ಚಿತ್ರದ ಹೀರೋ ಯುವರಾಜ್ ಅಲಿಯಾಸ್ ಬದ್ರಿ, ರಾಜಾಜಿನಗರ ಪೊಲೀಸರಿಗೆ ಕೊಟ್ಟ ಹೇಳಿಕೆಯೇನಾದರೂ ಮಕ್ಕಿಕಾಮಕ್ಕಿ ದಾಖಲುಗೊಂಡಿದ್ದರೆ ಇಡೀ ಪ್ರಕರಣಕ್ಕೊಂದು ವಿಚಿತ್ರ ತಿರುವು ಸಿಗುತ್ತಿತ್ತು. ಆದರೆ ರಾಜಾಜಿನಗರದ ಇನ್ಸ್‌ಪೆಕ್ಟರ್ ಕಾರಿಯಪ್ಪನೇ ನಿಂತು 'ರಾಜಿ ಮಾಡಿಕೋ' ಎಂದು ಗಾಯಾಳು ಯುವರಾಜ್‌ನನ್ನು ಪೀಡಿಸುತ್ತಾನೆಂದರೆ ಕೊಲೆಯತ್ನದ ಹಿಂದೆ ಇನ್ನೆಂಥಾ ಷಡ್ಯಂತ್ರವಿರಬೇಡ?


ಉಡ ಹೀರೋ




ಬಹುಶಃ ರಾಜಾಜಿನಗರದ ಇನ್ಸ್‌ಪೆಕ್ಟರ್ ಕಾರಿಯಪ್ಪನ ಸಮ್ಮತಿ ಮೇರೆಗೇ ಸುಪಾರಿ ಹಂತಕರನ್ನು ಛೂಬಿಟ್ಟ ಉಡದ ನಿರ್ಮಾಪಕ ಅಕಬರ್ ಭಾಷಾ ಈಗ ದುಡ್ಡು ಕೊಟ್ಟಾದರೂ ಸೈ ಕೇಸಿನಿಂದ ಬಚಾವಾಗಲು ಹವಣಿಸುತ್ತಿದ್ದಾನೆಂದು ಅದೇ 'ಉಡ'ದ ಹೀರೋ ಯುವರಾಜ್ ಕಮಿಷನರ್ ಬಿದರಿ ಸಾಹೇಬರಿಗೆ ದೂರು ಕೊಟ್ಟಿದ್ದಾನೆ. ಮಲ್ಲೇಶ್ವರಂ ಎಸಿಪಿ ಅಜ್ಜಪ್ಪ ಮತ್ತು ರಾಜಾಜಿನಗರದ ಇನ್ಸ್‌ಪೆಕ್ಟರ್ ಕಾರಿಯಪ್ಪನಿಂದ ತಮಗೆ ನ್ಯಾಯ ಸಿಗುವುದು ಕಷ್ಟ ಎಂದು ಪೆಟ್ಟು ತಿಂದ ಯುವರಾಜ್‌ನ ಪತ್ನಿ ಆರ್. ಪಂಕಜ ಕಂಡಕಂಡ ಪೊಲೀಸ್ ಅಧಿಕಾರಿಗಳ ಮುಂದೆ ಕಣ್ಣೀರಿಡುವುದಕ್ಕೂ ಕಾರಣವಿದೆ?

'ಉಡದ' ಹೀರೋ ಯುವರಾಜ್ ಮೇಲೆ ರೌಡಿ ಗ್ಯಾಂಗ್ ದಾಳಿ ನಡೆಸಿದ್ದು ನವೆಂಬರ್ 12 ರ ಬೆಳಿಗ್ಗೆ. ರಾಜಾಜಿನಗರದ ನವರಂಗ್ ವೃತ್ತದ ಬಳಿ ಹೋಟೆಲ್ ವೊಂದಕ್ಕೆ ಬಂದಿದ್ದ ಯುವರಾಜ್ ಮೇಲೆ ಏಕಾಏಕಿ ಐದು ಮಂದಿಯ ಗ್ಯಾಂಗ್ ದಾಳಿ ಮಾಡಿ ಕತ್ತರಿಸುತ್ತಿದ್ದರೆ, ಪಕ್ಕದಲ್ಲೇ ತನ್ನ ಕಾರಲ್ಲಿ ಕೂತು ನಿರ್ಮಾಪಕ ಅಕಬರ್ ಭಾಷಾ ಮತ್ತಾತನ ಮಗ ಕಮಲ್ '..... ಮಾರ್ ದಾಲೇ ಉಸ್ಕೋ.... ಸೆಕ್ಸ್ ಸೀಡಿ....?' ಎಂದೆಲ್ಲಾ ಕಿರುಚುತ್ತಿದ್ದದ್ದನ್ನು ತಾನೇ ಕಣ್ಣಾರೆ ನೋಡಿದ್ದೇನೆಂದು ಯುವರಾಜ್ ಹೇಳಿಕೆ ಕೊಟ್ಟಿದ್ದಾನೆ. ಆದರೆ ಹೇಳಿಕೆ ಬರೆದುಕೊಂಡ ರಾಜಾಜಿನಗರದ ಪೊಲೀಸರು ಅದನ್ನು ತಿರುಚಿ ಬರೆದು ಅಕಬರ್ ಎಂಬ ಹೆಸರನ್ನು 'ಅನ್ವರ್' ಎಂದೂ ಹತ್ಯೆಗೆ ಬಂದವರಿಗೂ ನಿರ್ಮಾಪಕನಿಗೂ ಸಂಬಂಧವೇ ಇಲ್ಲವೆಂದೂ ಬರೆದುಕೊಂಡು ಇಡೀ ಪ್ರಕರಣಕ್ಕೇ ಗತಿ ಕಾಣಿಸಲು ಯತ್ನಿಸುತ್ತಿದ್ದಾರೆಂದು ಸ್ವತಃ ಯುವರಾಜ್ ಬೊಬ್ಬೆ ಹಾಕುತ್ತಿದ್ದಾನೆ.

ಯುವರಾಜ್ ಆಸ್ಪತ್ರೆಯಿಂದ ಹೊರಬೀಳಬೇಕೆಂದರೆ ಇನ್ನೂ ಆರು ತಿಂಗಳು ಬೇಕು. ಎರಡೂ ಕೆನ್ನೆ ತುಂಬ ರೇಜರ್‌ನಿಂದ ಕುಯ್ದ ಗಾಯಗಳು. ಅಂಗೈ ಕತ್ತರಿಸಿ ಹೋಗಿದೆ. ಬಲಗಾಲಿಗೆ ಬೀಸಿದ ಲಾಂಗ್ ಹಿಮ್ಮಡಿಯನ್ನೇ ಸೀಳಿಬಿಟ್ಟಿದೆ. ಅಷ್ಟಕ್ಕೂ 'ಉಡ' ಚಿತ್ರದ ಹೀರೋನನ್ನೇ ಮುಗಿಸುವ ಕೃತ್ಯಕ್ಕೆ ಅದರ ಪ್ರೊಡ್ಯೂಸರ್ ಅಕಬರ್ ಭಾಷಾ ಕೈಯಿಟ್ಟಿದ್ದಾದರೂ ಏಕೆ ಎಂದು ಕೆದಕ ಹೊರಟರೆ ಅದು ಗಾಂಧಿನಗರದ ಅಸಹ್ಯ ಲೋಕವೊಂದನ್ನು ತೆರೆದಿಡುತ್ತದೆ.

'ಉಡ'ದ ನಿರ್ಮಾಪಕ ಅಕಬರ್ ಭಾಷಾ ಕಮ್ಮಿಯೆಂದರೂ ಮುನ್ನೂರು ಕೋಟಿಯ ಕುಳ. ವಿಜಯನಗರದಲ್ಲೊಂದು ಕಮರ್ಷಿಯಲ್ ಕಾಂಪ್ಲೆಕ್ಸ್, ರಾಜರಾಜೇಶ್ವರಿ ನಗರದಲ್ಲಿ ಮಕ್ಕಳ ಆಸ್ಪತ್ರೆ, ನೈಸ್ ರಸ್ತೆ ಗುಂಟ ಐಷಾರಾಮಿ ಫಾರ್ಮ್ ಹೌಸ್, ಆಂಧ್ರದ ಕಡಪದಲ್ಲಿ ಮೆಡಿಕಲ್ ಕಾಲೇಜು, ಕೊಳ್ಳೇಗಾಲದಲ್ಲಿ ಎಕರೆಗಟ್ಟಲೇ ತೋಟ ಮತ್ತು ಮುಂಬಯಿಯಲ್ಲಿ ಡಿಸ್ಟ್ರಿಬ್ಯೂಷನ್ ಏಜೆನ್ಸಿ ಇತ್ಯಾದಿ ದಂಧೆಗಳಿರುವ ಅಕಬರ್ ಭಾಷಾ ಒಂದಾನೊಂದು ಕಾಲಕ್ಕೆ ಯಕಶ್ಚಿತ್ ಕೆನರಾ ಬ್ಯಾಂಕ್‌ನಲ್ಲಿದ್ದ ಉಡುಪಿ ಮೂಲದ ಬ್ರಾಹ್ಮಣ ಹೆಂಗಸು ಶಾರದಾಬಾಯಿ ಎಂಬುವವರನ್ನು ಪ್ರೀತಿಸಿ ಮದುವೆಯಾದ ಭಾಷಾ ತನ್ನ ಪತ್ನಿಗಿಂತಲೂ ಹನ್ನೆರಡು ವರ್ಷ ಕಿರಿಯನಂತೆ.


ಭಾಷಾ

ಭಾಷಾನ ಮಗನ ಹೆಸರು ಕಮಲ್. ಈತ ದಂತವೈದ್ಯ. ಮುಂದೊಮ್ಮೆ ಪತ್ನಿ ಶಾರದಾಬಾಯಿಯ ತಂಗಿ ವಿಜಯಲಕ್ಷ್ಮಿ ಹೊಟ್ಟೆಪಾಡಿಗೆಂದು ದುಬೈನಲ್ಲಿ ಕೆಲಸ ಹುಡುಕಿ ಹೋದಾಗ ಆಕೆ ತನ್ನೆಲ್ಲಾ ಆಸ್ತಿಯ ದಾಖಲೆಗಳನ್ನು ಅಕ್ಕನ ವಶಕ್ಕೆ ಕೊಟ್ಟು ಹೋದಾಗ ನಾದಿನಿಯ ಆಸ್ತಿಯನ್ನೆಲ್ಲ ಭಾಷಾ ಮುಂಡಾಯಿಸಿ ಶ್ರೀಮಂತನಾದನೆಂಬುದು ಕೆಲವರ ಆರೋಪ. ರಿಯಲ್ ಎಸ್ಟೇಟ್ ದಂಧೆಯಲ್ಲಿ ವಿಪರೀತ ಸಂಪಾದಿಸಿದ್ದೇ ಆತನ ಶ್ರೀಮಂತಿಕೆಗೆ ಕಾರಣವೆಂದು ಇನ್ನೂ ಕೆಲವರ ವಾದ. ಹೀಗೆ ನಿಗೂಢ ಮೂಲಗಳಿಂದ ರಾತ್ರೋರಾತ್ರಿ ಕುಬೇರನಾದ ಅಕಬರ್ ಭಾಷಾನಿಗೀಗ ಅರವತ್ತರ ಆಜೂಬಾಜು. ಪತ್ನಿ ಶಾರದಾಬಾಯಿ ಕಾಯಿಲೆ ಬಿದ್ದು ಹಾಸಿಗೆ ಹಿಡಿದಿದ್ದಾರಾದರೂ ಅಕಬರ ಭಾಷಾ ಮಾತ್ರ ತನ್ನ ಚಾಯಮಾನಕ್ಕೇ ಹೊಂದದ ಸಿನಿಮಾ ನಿರ್ಮಾಣಕ್ಕೆ ಕೈಯಿಟ್ಟ.


ಭಾಷಾ ಜೊತೆ... ಹೀರೋಯಿನ್ ನಿಶಾಶೆಟ್ಟಿ

ಅದಕ್ಕೊಂದು ಭಾಷಾ ಗಂಟುಬಿದ್ದದ್ದು ಯುವರಾಜ್ ಅಲಿಯಾಸ್ ಬದ್ರಿ ಎಂಬ ಸ್ಟಿಲ್ ಫೋಟೋಗ್ರಾಫರ್‌ಗೆ. ಇಲ್ಲಿಗೆ ವರ್ಷದ ಹಿಂದೆ ಮುಹೂರ್ತ ಕಂಡ 'ಉಡ' ಎಂಬ ವಿಚಿತ್ರ ಹೆಸರಿನ ಚಿತ್ರಕ್ಕೆ ಹೀರೋಯಿನ್ನಾಗಿ ಬಂದವಳು ನಿಶಾ ಶೆಟ್ಟಿ. ಶಶಾಂಕ್ ರಾಜ್ ಇದಕ್ಕೆ ನಿರ್ದೇಶಕನಾದ. 'ಯಾರ್‍ಯಾರನ್ನೋ ಹೀರೋ ಮಾಡಿ ಅದಕ್ಕೇಕೆ ಲಕ್ಷಾಂತರ ರೂಪಾಯಿ ವೇಸ್ಟ್ ಮಾಡೋದು? ನೀನೇ ಹೀರೋ ಆಗಿಬಿಡು....' ಎಂದು ನಿರ್ಮಾಪಕ ಅಕಬರ್ ಭಾಷಾ ಡೈಲಾಗ್ ಹೊಡೆದದ್ದೇ ತಡ ಯುವರಾಜ್ ಹೀರೋ ಪೋಜು ಕೊಟ್ಟಿದ್ದೇ ಕೊಟ್ಟಿದ್ದು!

ಅದೇನಾಯಿತೋ 'ಉಡ' ಚಿತ್ರ ಬಿಡುಗಡೆಯಾಗಿದ್ದು ಜನ ಅದನ್ನು ನೋಡಿದ್ದು ಇತ್ಯಾದಿ ಯಾವೊಂದೂ ಸುದ್ದಿಯಾಗದೇ ಹೋದರೂ 'ಉಡದ' ನಿರ್ಮಾಪಕ ಅಕಬರ್ ಭಾಷಾ ಕುರಿತಂತೆ ಚಿತ್ರವಿಚಿತ್ರ ಗಾಸಿಪ್‌ಗಳು ಪುಂಖಾನುಪುಂಖವಾಗಿ ಹೊಗೆಯಾಡತೊಡಗಿದವು. ಈ ಪೈಕಿ ಗಂಭೀರವಾದದ್ದು ಆತನ ವಿಕೃತಿಗಳ ಕುರಿತ ಸೆಕ್ಸ್ ಸೀಡಿಯದ್ದು. ಬಸವೇಶ್ವರ ನಗರದ ಯಾರೋ ಖದೀಮನೊಬ್ಬ ಅಕಬರ್ ಭಾಷಾನ ಸೆಕ್ಸ್ ಸೀಡಿ ತೆಗೆದು 25 ಲಕ್ಷ ಕಿತ್ತನಂತೆ ಎಂಬುದು ಒಂದು ರೂಮರ್ ಆದರೆ 'ಸೂರ್ಯ ದಿ ಗ್ರೇಟ್' ಎಂಬ ಚಿತ್ರದ ಹೀರೋಯಿನ್ ಶಿವಾನಿ ಎಂಬಾಕೆಗೆ ಭಾಷಾ ಕಾರು ಕೊಡಿಸಿದರಂತೆ, ಸ್ವಾತಿ ಎಂಬ ಮತ್ತೊಬ್ಬ ಹೀರೋಯಿನ್ ಎರಡು ಲಕ್ಷ ಕಿತ್ತಳಂತೆ, ಲಕ್ಷ್ಮಿ ಎಂಬ ಮತ್ತೊಬ್ಬ ನಟಿಗೆ ಮನೆ ಮಾಡಿ ಕೊಟ್ಟರಂತೆ ಮತ್ತು ಸ್ವತಃ 'ಉಡ'ದ ಹೀರೋಯಿನ್ ನಿಶಾ ಶೆಟ್ಟಿಗೆ ಅಕಬರ್ ಭಾಷಾ ಮಹಾಲಕ್ಷ್ಮಿ ಲೇಔಟಿನಲ್ಲಿ ಮನೆ ಮಾಡಿ ಕೊಟ್ಟರಂತೆ ಎಂಬ ಗಾಸಿಪ್‌ಗಳು ಗಾಂಧಿನಗರದುದ್ದಕ್ಕೂ ಇಟ್ಟಾಡತೊಡಗಿದವು.

ಈ ಪೈಕಿ ಯಾವಳೋ ಒಬ್ಬಳು ನಟಿ ಭಾಷಾ ಸಾಹೇಬರ ವಿಕೃತಿಗಳ ಕುರಿತಂತೆ ಮೊಬೈಲಿನಲ್ಲಿ ವೀಡಿಯೋ ತೆಗೆದಿದ್ದಾಳೆಂದೂ, ಮೈಸೂರಿನ ಮಾಯಮ್ಮ ಎಂಬಾಕೆ ಯಾರ್‍ಯಾರೋ ಹೆಣ್ಣುಮಕ್ಕಳನ್ನು ಹೀರೋಯಿನ್ ಮಾಡಿಸುತ್ತೇನೆಂದು ಭಾಷಾರಿಗೆ ಪರಿಚಯಿಸಿದಳೆಂದೂ, ಆಕೆಯೇ ವೀಡಿಯೋ ತೆಗೆದು ಬ್ಲ್ಯಾಕ್‌ಮೇಲ್ ಮಾಡುತ್ತಿದ್ದಾಳೆಂದೂ ಮತ್ತೊಂದು ವದಂತಿ ಭುಗಿಲೆದ್ದಿತು. ಒಂದು ಹಂತದಲ್ಲಿ ಬಿಡುಗಡೆಯಾದ 'ಉಡ' ಚಿತ್ರಕ್ಕಿಂತಲೂ ಅದರ ನಿರ್ಮಾಪಕನ ಸೆಕ್ಸ್ ಸೀಡಿಯದೇ ದೊಡ್ಡ ಸುದ್ದಿಯಾಯಿತು.

ಇನ್ನೊಂದೆಡೆ ಅಕಬರ್ ಭಾಷಾನ ಚಿತ್ರವಿಚಿತ್ರ ವಿಕೃತಿಗಳ ಕುರಿತಂತೆ ಬೇರೆಬೇರೆ ಪತ್ರಿಕಾ ವರದಿಗಾರರಿಗೆ ಅನಾಮಧೇಯ ಫೋನ್ ಕರೆಗಳು ಶುರುವಾದವು. ಇದೇ ಹೊತ್ತಿಗೆ ಸರಿಯಾಗಿ ಹೀರೋ ಯುವರಾಜ್‌ಗೂ ನಿರ್ಮಾಪಕ ಅಕಬರ್ ಭಾಷಾಗೂ ದುಡ್ಡುಕಾಸಿನ ವಿಷಯದಲ್ಲಿ ಕಿತ್ತಾಟ ಬಂತು. ಜೊತೆಗೆ ತನ್ನ ಸೆಕ್ಸ್ ಸೀಡಿಯನ್ನು ಹೀರೋ ಯುವರಾಜ್‌ನೇ ತೆಗೆದು ಬ್ಲ್ಯಾಕ್‌ಮೇಲ್ ಮಾಡುತ್ತಿರಬಹುದೆಂಬ ಅನುಮಾನವೊಂದು ಭಾಷಾನ ತಲೆ ಹೊಕ್ಕಿದೆ. ಬಹುಶಃ ತನ್ನೆಲ್ಲ ದೌರ್ಬಲ್ಯಗಳ ಕುರಿತು ಮಾಹಿತಿಯಿದ್ದದ್ದು ಹೀರೋ ಯುವರಾಜ್‌ಗೆ ಮಾತ್ರವೇ ಎಂಬುದು ಆತನಿಗೆ ಮನದಟ್ಟಾಗಿತ್ತಾ? ಅಥವಾ ಯುವರಾಜ್‌ನ ವಿರೋಧಿಗಳ್ಯಾರಾದರೂ ಬತ್ತಿಯಿಟ್ಟರಾ? ಗೊತ್ತಿಲ್ಲ.

ಈ ಹಂತದಲ್ಲೇ ತಲೆ ಕೆಡಿಸಿಕೊಂಡ ಭಾಷಾ ಹೀರೋ ಯುವರಾಜ್‌ಗೆ ಮುಹೂರ್ತವಿಟ್ಟಿರಬೇಕು. ನವೆಂಬರ್ ಹನ್ನೆರಡರ ಬೆಳಿಗ್ಗೆ ರಾಜಾಜಿನಗರದ ನವರಂಗ್ ಟಾಕೀಸ್ ಹಿಂಭಾಗದ ಕರಾವಳಿ ಲಂಚ್ ಹೋಮ್‌ನಿಂದ ಹೊರಬಿದ್ದ ಯುವರಾಜ್ ಮೇಲೆ ಹಂತಕ ಪಡೆ ಮುಗಿಬಿದ್ದಿದೆ. ಅಪ್ಪ ಅಕಬರ ಭಾಷಾ ಮತ್ತು ಮಗ ಕಮಲ್ ತಮ್ಮ 7800 ನಂಬರಿನ ಮಾರುತಿ ಕಾರಲ್ಲಿ ಕೂತು 'ಮಾರ್ ದಾಲೋ.....!' ಎಂದು ಕಿರುಚಾಡುತ್ತಿದ್ದದ್ದನ್ನು ತಾನು ಕಣ್ಣಾರೆ ಕಂಡೆನೆಂದು ಯುವರಾಜ್ ಆಣೆ ಪ್ರಮಾಣ ಮಾಡುತ್ತಾನೆ.

ನಿಜಕ್ಕೂ ಉಡದ ನಿರ್ಮಾಪಕ ಅಕಬರ್ ಭಾಷಾನ ವಿಕೃತಿಗಳ ಕುರಿತಂತೆ ಯಾರಾದರೂ ಸೆಕ್ಸ್ ಸೀಡಿ ತೆಗೆದಿದ್ದರಾ? ಅದಕ್ಕೆ ಹೀರೋ ಯುವರಾಜ್ ಅನ್ಯಾಯವಾಗಿ ತಲೆಕೊಟ್ಟನಾ? ಸಿನಿಮಾ ಶೋಕಿಗೆ ಬಿದ್ದ ಶ್ರೀಮಂತರು, ರಿಯಲ್ ಎಸ್ಟೇಟ್ ಖದೀಮರಿಗೆ ಬಲಿಯಾಗುವ ನಿರ್ಗತಿಕ ಹೆಣ್ಣುಮಕ್ಕಳ ದುರಂತಕ್ಕೆ ನ್ಯಾಯ ಕೊಡುವವರ್‍ಯಾರು?

● ವರದಿಗಾರ

ಹಾಗಾದರೆ ಸೆಕ್ಸ್ ಸೀಡಿ ತೆಗೆದಿದ್ದು ಯಾರು?

ಇಲ್ಲಿ ಪ್ರಶ್ನೆಯೆಂದರೆ ತನಗೆ ಅಂಥಾ ವಿಕೃತಿಗಳಿಲ್ಲದೇ ಹೋಗಿದ್ದರೆ ಉಡದ ನಿರ್ಮಾಪಕ ಅಕಬರ್ ಭಾಷಾ ಹೀರೋ ಬದ್ರಿ ಉರ್ಫ್ ಯುವರಾಜ್‌ನ ಹತ್ಯೆಗೆ ಏಕಾದರೂ ಕೈ ಹಾಕುತ್ತಿದ್ದ? ಹಾಗಾದರೆ ವೀಡಿಯೋ ತೆಗೆದಿದ್ದು ಯಾರು? ಯಾವ ಸನ್ನಿವೇಶದಲ್ಲಿ?

ಈ ಬಗ್ಗೆ ಹೀರೋ ಯುವರಾಜ್ ಬೇರೆಯದೇ ಕತೆ ಹೇಳುತ್ತಾನೆ. ನಾನ್ಯಾಕೆ ಸೀಡಿ ತೆಗೆಯಲಿ? ಹಾಗಿದ್ದರೆ ನಾನೇ ಫೋನ್ ಮಾಡಿ ಸೆಟ್ಲ್ ಮಾಡ್ಕೋತಿದ್ದೆ. ಅಥವಾ ಇನ್ನೊಂದು ಸಿನಿಮಾ ಮಾಡಿ ನನ್ನನ್ನೇ ಹೀರೋ ಮಾಡಿ ಎನ್ನುತ್ತಿದ್ದೆ. ಭಾಷಾರ ಬಗ್ಗೆ ಈ ಥರದ ಪುಕಾರೆದ್ದಿದ್ದು ನನ್ನ ಕಿವಿಗೂ ಬಿದ್ದಿತ್ತು, ಬಹುಶಃ ನಾನು ಫೋನ್ ಮಾಡಿ ಈ ಬಗ್ಗೆ ವಿಚಾರಿಸದೇ ಹೋಗಿದ್ದೇ ನನ್ನ ಮೇಲಿನ ಅನುಮಾನಕ್ಕೆ ಕಾರಣವಿರಬೇಕು. ಏನೇ ಆದ್ರೂ ನನ್ನನ್ನು ಕೊಲ್ಲಿಸೋ ಮಟ್ಟಕ್ಕೆ ಅವರು ಇಳಿಯಬಾರದಿತ್ತು, ಇದು ಹೀರೋ ಯುವರಾಜ್‌ನ ಹೇಳಿಕೆಯಾದರೆ ರಾಜಾಜಿನಗರದ ಇನ್ಸ್‌ಪೆಕ್ಟರ್ ಕಾರಿಯಪ್ಪ ಆಸ್ಪತ್ರೆಗೇ ಬಂದು 'ರಾಜಿ ಮಾಡ್ಕಳಯ್ಯ' ಎಂದು ಯುವರಾಜ್‌ನನ್ನು ಪೀಡಿಸುತ್ತಿದ್ದಾನೆ. ತಾನು ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯನ್ನು ಪೊಲೀಸರೇ ತಿರುಚಿ ಬರೆದು ಹಂತಕರನ್ನು ಬಚಾವು ಮಾಡಲು ಯತ್ನಿಸುತ್ತಿದ್ದಾರೆಂದೂ, ಇಡೀ ಪ್ರಕರಣವನ್ನು ಮುಚ್ಚಿಹಾಕುವಲ್ಲಿ ಪೊಲೀಸರು ಭಾಷಾನ ರೊಕ್ಕಕ್ಕೆ ಬಲಿಯಾಗಿದ್ದಾರೆಂದೂ ಯುವರಾಜ್ ತನ್ನ ಪತ್ನಿಯ ಮೂಲಕ ಮೇಲಧಿಕಾರಿಗಳಿಗೆ ದೂರು ಕೊಡುತ್ತಿದ್ದಾನೆ.

ಸೆಕ್ಸ್ ಸೀಡಿ ತರಹದ ವಿಕೃತಿಗಳಿಲ್ಲದೇ ಹೋಗಿದ್ದರೆ ಏಕೆ ಅಕಬರ್ ಭಾಷಾ ಈ ಪಾಟ ತಲೆಕೆಡಿಸಿಕೊಳ್ಳುತ್ತಿದ್ದ? ಸಮಾಧಾನದ ಸಂಗತಿ ಎಂದರೆ ರಾಜಾಜಿನಗರ ಪೊಲೀಸರ ಇಂತಹ ದುರಾಚಾರವನ್ನು ಕಂಡೇ ಕಮೀಷನರ್ ಶಂಕರ ಬಿದರಿ ಇಡೀ ಪ್ರಕರಣದ ತನಿಖೆಯನ್ನು ಪಕ್ಕದ ಸುಬ್ರಮಣ್ಯನಗರ ಪೊಲೀಸ್ ಠಾಣೆಗೆ ವರ್ಗಾಯಿಸಿಕೊಟ್ಟಿದ್ದಾರೆ.

ಅನಂತೂಗೆ ವಿಭಟ್ಟರ ಟಾಂಗ್

'ಇಲ್ಲಿಗೆ ಯಾರೂ ಶಾಶ್ವತ ಮಿತ್ರರೂ ಅಲ್ಲ ಶತ್ರುಗಳೂ ಅಲ್ಲ' ಎಂಬ ಮಾತು ಕೇವಲ ರಾಜಕಾರಣ ಕ್ಷೇತ್ರಕ್ಕೆ ಅನ್ವಯಿಸುವ ಮಾತಾಗಿ ಇಂದು ಉಳಿದಿಲ್ಲ ಅನ್ನಿಸುತ್ತಿದೆ.

ಯಾಕೆಂದರೆ

'ಚಡ್ಡಿ' ದೋಸ್ತ್‌ಗಳಾಗಿದ್ದ ಬಿಜೆಪಿ ಸಂಸದ ಅನಂತ ಕುಮಾರ್ ಹಾಗೂ ಹಾಲಿ ವಿಜಯ ಕರ್ನಾಟಕದ ಸಂಪಾದಕ ವಿಶ್ವೇಶ್ವರ ಭಟ್ ಮುನಿಸಿಕೊಂಡಂತೆ ಕಾಣುತ್ತಿದೆ. ಎರಡು ದಶಕಗಳಿಗೂ ಹೆಚ್ಚು ಕಾಲ ಬಾಳಿಕೆ ಬಂದಿದ್ದ ಈ ದೋಸ್ತಿ ಈಗ ಕರಗಿರುವಂತೆ ಕಾಣುತ್ತಿದೆ. ಈ ನವೆಂಬರ್ ತಿಂಗಳೊಂದರಲ್ಲೇ ಅನಂತ ಕುಮಾರ್ ವಿರುದ್ಧ ವಿಜಯ ಕರ್ನಾಟಕದಲ್ಲಿ ಪ್ರಕಟವಾಗಿರುವ ವರದಿಗಳು, ವ್ಯಂಗ್ಯ ಚಿತ್ರಗಳು, ಟೀಕೆ, ತಿರುಗುಬಾಣಗಳನ್ನು ಒಟ್ಟು ರಾಶಿಯಾಗಿ ಇರಿಸಿಕೊಂಡು ನೋಡಿದರೆ ಈ ಅನುಮಾನ ಬಾರದಿರದು.

ಒಂದಂತೂ ನಿಜ, ಅನಂತೂ ಮೇಲೆ ಸಿಟ್ಟಿಗೆದ್ದಿರುವ ವಿಭಟ್ಟರು ತಾವು ಸಂಬಳಕ್ಕೆ ಕೆಲಸ ಮಾಡುತ್ತಿರುವ ವಿಜಯ ಕರ್ನಾಟಕ ಪತ್ರಿಕೆಯನ್ನೇ ಕತ್ತಿಯಂತೆ ಝಳಪಿಸುತ್ತಿದ್ದಾರೆ.


ಅನಂತು

ಅನಂತುಗೆ ಈಗ ಮೊದಲಿನಷ್ಟು ಶಕ್ತಿ ಸಾಮರ್ಥ್ಯಗಳಿಲ್ಲ. ಆತ ಸಂಸದನಾಗಿದ್ದರೂ ಕೇಂದ್ರದಲ್ಲಿ ಈಗ ಬಿಜೆಪಿ ಸರ್ಕಾರವಿಲ್ಲ. ಬಿಜೆಪಿ ಹೈಕಮಾಂಡಿನಲ್ಲೂ ಅನಂತುಗೆ ಹೇಳಿಕೊಳ್ಳುವಂತಹ ಪ್ರಭಾವವಿಲ್ಲ. ಇನ್ನು ಕರ್ನಾಟಕದಲ್ಲೂ ಅನಂತೂ ಯಡ್ಡಿ ಯಾ ರೆಡ್ಡಿ ಯಾವ ಕ್ಯಾಂಪಿನೊಳಗೂ ಪ್ರಭಾವ ಬೀರಲಾಗದೆ ಅಸಹಾಯಕ ಸ್ಥಿತಿ ತಲುಪಿದ್ದಾರೆ. ಮುಂದಿನ ಡಿಸೆಂಬರ್‌ನಲ್ಲಿ ರಾಜ್ಯ ಬಿಜೆಪಿ ಅಧ್ಯಕ್ಷರಾಗಬೇಕೆಂದು ಲಾಬಿ ಮಾಡುತ್ತಿದ್ದಾರಾದರೂ ಯಡ್ಡಿ ಅವಕಾಶ ಕೊಡುತ್ತಿಲ್ಲ. ಅದು ಹೋಗಲಿ, ರಾಜ್ಯ ಬಿಜೆಪಿ ಸರ್ಕಾರದ ಜುಟ್ಟು ಜನಿವಾರಗಳೆರಡನ್ನೂ ಕಂಟ್ರೋಲ್ ಮಾಡಲಿರುವ 'ಸಮನ್ವಯ ಸಮಿತಿ' ಅಧ್ಯಕ್ಷಗಿರಿ ಹೊಡೆದುಕೊಳ್ಳಲು ಅನಂತು ಮಾಡಿದ ಪ್ರಯತ್ನಗಳು ಕೈಗೂಡಲಿಲ್ಲ. ಹೀಗೆ ಎಲ್ಲೂ ಸಲ್ಲದೆ ತಬ್ಬಲಿಯಾಗಿ ನಿಂತಿರುವ, ಒಂದರ್ಥದಲ್ಲಿ ನಿರುಪದ್ರವಿ ಅನಂತ್ ವಿರುದ್ಧ ವಿಭಟ್ಟರು ಯುದ್ಧ ಘೋಷಿಸಲು ಕಾರಣವೇನಿರಬಹುದು?

ಈ ಜಗಳ ಪರ್ಸನಲ್ಲಾ, ಪ್ರೊಫೆಷನಲ್ಲಾ ಇಲ್ಲಾ ಏನಾದರೂ ಒಳ ವ್ಯವಹಾರಕ್ಕೆ ಸಂಬಂಧಿಸಿದ್ದಾ ಅಂತಾ ಪ್ರೆಸ್‌ಕ್ಲಬ್ಬಿನಲ್ಲಿ ಕಾಲ ಕಳೆಯುವ ಪತ್ರಕರ್ತರೂ ಮಾತಾಡುತ್ತಿದ್ದಾರೆ.

ಈ ಪರಿ ಟೀಕೆಯ ಸೊಬಗು.....

ಅನಂತು ವಿರುದ್ಧದ ವಿಭಟ್ಟರ ದಾಳಿಗಳು ನವೆಂಬರ್ ತಿಂಗಳಿನಿಂದ ಚಾಲೂ ಆಗಿವೆ ಎನ್ನುವುದು ಸ್ಪಷ್ಟವಾಗಿ ಕಾಣುತ್ತಿದೆ. ಅಂದರೆ ಯಡ್ಡಿ ವಿರುದ್ಧ ರೆಡ್ಡಿಗಳ ಬಂಡಾಯ ಜೋರಾಗಿ ನಡೆದಿದ್ದ ಸಮಯ ಅದು. ಈ ಬಿಕ್ಕಟ್ಟಿನ ಸಂದರ್ಭದಲ್ಲಿ ಅನಂತು ದೈಹಿಕವಾಗಿ ಯಡ್ಡಿ ಕ್ಯಾಂಪಿನಲ್ಲಿದ್ದರು. ಆದರೆ ಮಾನಸಿಕವಾಗಿ ಜಗದೀಶ್ ಶೆಟ್ಟರ್-ರೆಡ್ಡಿಗಳಿಗೆ ಚಿತಾವಣೆ ಕೊಟ್ಟಿದ್ದರೆನ್ನುವ ಊಹಾಪೋಹಗಳಿದ್ದವು. ಇದನ್ನೇ ನಿಜ ಎಂದುಕೊಂಡರೆ ಒಟ್ಟಾರೆಯಾಗಿ ಅನಂತು ಯಡ್ಡಿ ವಿರೋಧಿ ಬಣ ಎಂದಾಗುತ್ತದೆ ಅಲ್ಲವೆ. ಹೀಗಾದ ಮೇಲೆ ಈಗ ವಿಭಟ್ಟರು ಅನಂತು ವಿರುದ್ಧ ದಾಳಿ ಮಾಡುತ್ತಿದ್ದಾರೆಂದರೆ ಸ್ವತಃ ಭಟ್ಟರೆ ಯಡ್ಡಿಯ ಪರವಾಗಿ ಪ್ರಾಕ್ಸಿ ವಾರ್ ನಡೆಸುತ್ತಿದ್ದಾರೆಂದಾಯಿತು. ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ವಿಚಾರಗಳೇ ಇದಕ್ಕೆ ಸಾಕ್ಷಿ.

ಉದಾಹರಣೆಗೆ ನವೆಂಬರ್ 11ರ ವಿಕದ 9ನೇ ಪುಟದಲ್ಲಿ "ಕ್ಯಾಪ್ಟನ್‌ನನ್ನೇ ಔಟ್‌ಮಾಡಿದ ಟ್ವೆಲ್ತ್‌ಮ್ಯಾನ್ ಯಾರು?" ಎನ್ನುವ ಬರಹವನ್ನೇ ನೋಡಿ. RSS ಬಾಲಕ ಬೆತ್ತಲೆ ಜಗತ್ತಿನ ಕುಖ್ಯಾತಿಯ ಪ್ರತಾಪ್ ಸಿಮ್ಮ 'ತಂತ್ರ ಷಡ್ಯಂತ್ರ' ಎಂಬ ವಿಶೇಷ ಕಾಲಂನಲ್ಲಿ ಬರೆದ ಲೇಖನ ಅದು.

ಬಿಜೆಪಿ ಬಿಕ್ಕಟ್ಟು ತಹಬದಿಗೆ ಬರುತ್ತಿದ್ದಂತೆಯೇ ಕರ್ನಾಟಕ ವಿಜನ್ 2020 ಅಧ್ಯಕ್ಷರಾಗಿದ್ದ ಕ್ಯಾಪ್ಟನ್ ಗೋಪಿನಾಥ್‌ರನ್ನು ಆ ಹುದ್ದೆಯಿಂದ ಹೊರಹಾಕಲಾಗಿತ್ತು. ಇದಕ್ಕೆ ಅನಂತೂನೇ ಕಾರಣವೆಂತಲೂ, ಏರ್ ಡೆಕ್ಕನ್‌ನ ಗೋಪಿನಾಥ್ ಅನಂತೂ ವಿರುದ್ಧ ಲೋಕಸಭೆಗೆ ಸ್ಪರ್ಧಿಸಿದ್ದರಿಂದ ಬಿಕ್ಕಟ್ಟನ್ನು ಸೃಷ್ಟಿಸಿದ್ದರೆಂದು, ಆದಕ್ಕಾಗಿ ಈಗ ಅವರನ್ನು ಒದ್ದೋಡಿಸುವ ಮೂಲಕ ಅನಂತು ಸ್ವೀಟ್ ರಿವೇಂಜ್ ತಗೊಂಡಿದ್ದಾರೆಂತಲೂ, ಈ ಸಿಮ್ಮು ಆ ಲೇಖನದಲ್ಲಿ ಆರೋಪಿಸಿದ್ದ. ಅಷ್ಟೇ ಅಲ್ಲದೆ ಈ ಅನಂತು ಯಾರು, ಯಾವ ಸೀಮೆ ಲೀಡರ್ರು, ಇವರು ಕಡಿದು ಕಟ್ಟೆ ಹಾಕಿರುವುದಾದರೂ ಏನು ಎಂಬ ಗೇಲಿ ಮಾತುಗಳು ಬೇರೆ!


ಆರೆಸ್ಸೆಸ್‌ನ ಬಾಲಕ ಸಿಮ್ಮ

ಮಜಾ ಅಂದರೆ ವಿಕ ಇಲ್ಲೊಂದು ಯಡವಟ್ಟು ಮಾಡಿಕೊಂಡಿದೆ. ಅದೇನೆಂದರೆ ಗೋಪಿನಾಥರನ್ನು ಓಡಿಸಿ ಅನಂತು ತಪ್ಪು ಮಾಡಿದರು ಎಂದ ವಿಭಟ್ಟರು ಅದೇ ವಿಜಯ ಕರ್ನಾಟಕದಲ್ಲಿ ಶೋಭಾ



'ವಿಜಯ ಕರ್ನಾಟಕ'ದಲ್ಲಿ ಗೇಲಿ ಮಾತು....

ಕರಂದ್ಲಾಜೆಯನ್ನು ಓಡಿಸಿದ ಬಳ್ಳಾರಿ ರೆಡ್ಡಿಗಳನ್ನು 'ಹೀನಾಮಾನವಾಗಿ' ಹೊಗಳುವ ಲೇಖನ ಪ್ರಕಟಿಸಿಬಿಟ್ಟರು. ಅದನ್ನು ಬರೆದವನು ರೆಡ್ಡಿಗಳ ಸಾರ್ವಜನಿಕ ಸಂಪರ್ಕಾಧಿಯಂತಿರುವ ಒಬ್ಬ ಗುಮಾಸ್ತ ಪತ್ರಕರ್ತ. ಅವನಿಗೆ ಈ ಖದೀಮ ರೆಡ್ಡಿಗಳನ್ನು 'ದೇವತಾ ಮನುಷ್ಯ'ರೆಂಬಂತೆ ಬಿಂಬಿಸುವುದೇ ಕೆಲಸವಾಗಿದೆ. ಅದು ಬಿಡಿ, ಈ ವಿಭಟ್ಟರು ಅನಂತೂ ವಿರುದ್ಧ ನವೆಂಬರ್ 15 ರಂದು ಇನ್ನೊಂದು ಟಾಂಗ್ ಕೊಟ್ಟರು. ಅವತ್ತಿನ ವಿಕದ ಮುಖಪುಟದ ಮೂಲೆಯ ಅಂಕಣ ತಿರುಗುಬಾಣದಲ್ಲಿ 'ಪಕ್ಷದಲ್ಲಿ ಎಲ್ಲರೂ ಒಗ್ಗಟ್ಟಿನಿಂದ ಇರಬೇಕಿದೆ' ಎಂದಿದ್ದ ಅನಂತೂ ಹೇಳಿಕೆಯನ್ನು ಪ್ರಕಟಿಸಿ ಅದರಡಿಗೆ ವಿಭಟ್ಟರು ಏನಂತ ಕಾಮೆಂಟ್ ಮಾಡಿದ್ದರು ಗೊತ್ತೆ?

"ಅದ್ಸರಿ, ಅದಕ್ಕೆ ನೀವು ಅವಕಾಶ ಮಾಡಿಕೊಟ್ಟರೆ ತಾನೇ ಸ್ವಾಮಿ!" ಎಂದು.

ಅಂದರೆ ಬಿಜೆಪಿಯೊಳಗೆ ಒಗ್ಗಟ್ಟು ಹಾಳಾಗಲು ಅನಂತಕುಮಾರೇ ಕಾರಣ ಎನ್ನುವ ವ್ಯಂಗ್ಯದ ಮಾತದು.

ಇದು ಇಷ್ಟಕ್ಕೂ ನಿಲ್ಲದೆ ನವೆಂಬರ್ 17ರ ವಿಕ ಇನ್ನೊಮ್ಮೆ ಅನಂತ್ ಮೇಲೆ ದಾಳಿ ಮಾಡಿತು. ಅವತ್ತಿನ ತಿರುಗುಬಾಣದಲ್ಲಿ "ಈ ಸರ್ಕಾರ ಉಳಿಸಲು ನಾನು ಬಹಳ ಪ್ರಯತ್ನಿಸಿದೆ" ಎಂಬ ಅನಂತ್ ಹೇಳಿಕೆ ಪ್ರಕಟಿಸಿ ಅದರ ಕೆಳಗೆ ವಿಭಟ್ಟರು "ಉರುಳಿಸುವ ಕೆಲಸ ಮಾಡದಿದ್ದರೆ ಉಳಿಸಲು ಪ್ರಯತ್ನಿಸಬೇಕಿರಲಿಲ್ಲ" ಎಂದು ಬಾಣ ಬಿಟ್ಟಿದ್ದರು.

ಇದೆಲ್ಲದರ ಒಟ್ಟು ಅರ್ಥ ಇಷ್ಟೆ. ಕರ್ನಾಟಕ ಬಿಜೆಪಿ ಬಿಕ್ಕಟ್ಟಿಗೆ ಅನಂತೂ ಚಿತಾವಣೆಯೇ ಕಾರಣ ಎಂದು fix ಮಾಡುವ ಹುನ್ನಾರ ಇದು. ಮೊದಲಿಗೆ ಹೋಲಿಸಿದರೆ ಅನಂತಕುಮಾರ್ ಈಗ ದುರ್ಬಲರಾಗಿರುವುದು ಹೌದಾದರೂ ಈಗಿನ ಬಿಜೆಪಿಗಳ ಜಗಳಕ್ಕೆ ಹತ್ತಾರು ಮುಖಗಳಿವೆ. ಮುಂತ್ರಿಯಾಗಬೇಕೆಂಬ ಶೆಟ್ಟರ್ ಆಸೆ, ರೆಡ್ಡಿಗಳ ನೂರೆಂಟು ದುರಾಸೆ, ಶಾಸಕರ ಸ್ವಾರ್ಥ, ಯಡ್ಡಿಯ ಚಿಲ್ಲರೆ ಆಡಳಿತಗಳೆಲ್ಲಾ ಈ ಜಗಳದ ಹಿಂದಿದೆ. ಆದರೆ ಈಗೇನಾಗಿದೆ ನೋಡಿ, ಯಡ್ಡಿ ಟೆಂಪರರಿಯಾಗಿ ಸೇಫಾಗಿದ್ದಾರೆ, ಶೆಟ್ಟರ್ ಮಿನಿಸ್ಟರ್ ಆದರು. ರೆಡ್ಡಿಗಳ ಡಿಮ್ಯಾಂಡ್‌ಗಳೂ ಈಡೇರುತ್ತಿವೆ. ಆಗ ರೆಡ್ಡಿಗಳಿಂದ ಹಣ ತಿಂದ ಭಿನ್ನಮತೀಯ ಶಾಸಕರೇ ಈಗ ಯಡ್ಡಿಯೆದುರು ಕೈ ಚಾಚಿ ಅಲ್ಲೂ ತಿನ್ನುತ್ತಿದ್ದಾರೆ. ಆದರೆ ಏನೂ ಫಲ ಸಿಗದೆ ಅನಂತು ಆರೋಪ ಮಾತ್ರ ಹೊತ್ತುಕೊಳ್ಳಬೇಕಾಗಿ ಬಂದಿದೆ.


ವಿಭಟ್ಟರು

ಇಷ್ಟಾದ ಮೇಲೂ ವಿಭಟ್ಟರೇಕೆ ಹೀಗೆ ಅನಂತೂರನ್ನು ಶಿಲುಬೆಗೇರಿಸಿ ದಿನಕ್ಕೊಂದು ಮೊಳೆ ಹೊಡೆಯುತ್ತಿದ್ದಾರೆಂಬ ಪ್ರಶ್ನೆ ಉಳಿದೇ ಇರುತ್ತದೆ. ಬಹಳ ಹಿಂದೆ ಅನಂತು ಕೇಂದ್ರ ವಿಮಾನ ಖಾತೆ ಸಚಿವರಾಗಿದ್ದಾಗ ಅವರ ಆಪ್ತ ಸಹಾಯಕನಾಗಿದ್ದ ವಿಭಟ್ಟರು ನಂತರ ಒಂದೊಂದೇ ಮೆಟ್ಟಿಲು ಹತ್ತಿ ಈಗ ವಿಕ ಸಂಪಾದಕರಾಗಿದ್ದಾರೆ. ಈ ಪತ್ರಿಕೆಯ ಧಣಿಗಳಾದ ಮಾರ್ವಾಡಿಗಳಿಗೆ ದುಡ್ಡೊಂದು ಹರಿದು ಬಂದು ಬೀಳುತ್ತಿದ್ದರೆ ಸಾಕು. ಉಳಿದಂತೆ ಅದು ವಿಕ ಆಗಲಿ ಮತ್ತೊಂದು ಪತ್ರಿಕೆಯಾಗಲಿ, ಚಡ್ಡಿ ಸಿದ್ಧಾಂತ ಪ್ರತಿಪಾದಿಸಲಿ ಅಥವಾ ಚಡ್ಡಿ ಮಾತ್ರ ಹಾಕಿ ಬೀದಿಗೆ ಬಂದರೂ ಕೇರ್ ಮಾಡುವವರಲ್ಲ. ವಿಭಟ್ಟರು ಅಂತಾ ಅವಕಾಶವನ್ನು ಬಹಳ ಚೆನ್ನಾಗಿ ಬಳಸಿಕೊಳ್ಳುತ್ತಾ ತಮ್ಮ ಕೈಲಿರುವ ಪತ್ರಿಕೆಯನ್ನೇ ತಮಗಾಗದವರ ವಿರುದ್ಧ ಬಾಣದಂತೆ ಬಿಡುತ್ತಿರುತ್ತಾರೆ.

ಸಂಸದ ಅನಂತ್‌ಕುಮಾರ್ ಈಗ ವಿಭಟ್ಟರ ಲೇಟೆಸ್ ಬಲಿಪಶು.

ಅಂದಹಾಗೆ ಬೆಂಗಳೂರು ಸಿಟಿ ಪೊಲೀಸ್ ಕಮಿಷನರ್ ಶಂಕರ್ ಬಿದರಿ ವಿರುದ್ಧವೂ ವಿಭಟ್ಟರು ಇತ್ತೀಚೆಗೆ ಒಂದು ಲೇಖನ ಬರೆಸಿ ಪ್ರಕಟಿಸಿದ್ದಾರೆ.

ಅದರ ಹಿನ್ನೆಲೆಯಂತೂ ವಿಭಟ್ಟರ ಆತ್ಮರತಿ ಸೊಗಸಾದ ಸಾಕ್ಷಿಯಂತಿದೆ. ವಿವರಗಳಿಗೆ ಬಾಕ್ಸ್ ನೋಡಿ

● ಪಾರ್ವತೀ

ವಿಭಟ್ಟರ ಅಂಗರಕ್ಷಕರ ಪ್ರಸಂಗ!

ಸದ್ಯ ವಿಜಯ ಕರ್ನಾಟಕ ದಿನಪತ್ರಿಕೆಯ ಸಂಪಾದಕ ವಿಶ್ವೇಶ್ವರ ಭಟ್ಟರಿಗೆ ಕಳೆದ ಕೆಲ ತಿಂಗಳುಗಳಿಂದ ಹೊಸದೊಂದು ಗೀಳು ಶುರುವಾಗಿದೆ. ಅದೊಂಥರಾ ಶೋಕಿ ಎನ್ನಬಹುದು. ಅದೇನೆಂದರೆ ತಮ್ಮ ಪ್ರಾಣಕ್ಕೆ ಆಪತ್ತಿದೆಯೆಂದೂ, ಹಾಗಾಗಿ ಬೆಂಗಳೂರು ಪೊಲೀಸರು ತನಗೆ ಗನ್‌ಮ್ಯಾನ್‌ಗಳ ರಕ್ಷಣೆ ಕೊಡಬೇಕೆಂತಲೂ ವಿಭಟ್ಟರಿಗೆ ಒಮ್ಮೆ ಅನಿಸಿದೆ. ಹಾಗನ್ನಿಸಿದ್ದೇ ತಡ ವಿಭಟ್ಟ ಸಿಟಿ ಪೊಲೀಸ್ ಕಮಿಷನರ್ ಶಂಕರ್ ಬಿದರಿಯವರಿಗೆ ಅರ್ಜಿ ಕೊಟ್ಟು ಗನ್‌ಮ್ಯಾನ್ ಬೇಡಿಕೆ ಇಟ್ಟರು. ಅಷ್ಟೇ ಅಲ್ಲ, ಮುಖ್ಯಮಂತ್ರಿ ಯಡಿಯೂರಪ್ಪನನ್ನು ಕನಿಷ್ಠ ಮೂರು ಬಾರಿ ಭೇಟಿಯಾಗಿ ತಮಗೆ ಅಂಗರಕ್ಷಕನನ್ನೂ ನೀಡಬೇಕೆಂದು ದುಂಬಾಲು ಬಿದ್ದರು ಎಂಬ ಪುಕಾರೂ ಇದೆ.

ಪೊಲೀಸ್ ಇಲಾಖೆಯಲ್ಲಿ ಇದಕ್ಕೊಂದು ಪ್ರೊಸೀಜರ್ ಇದೆ. ಗನ್‌ಮ್ಯಾನ್ ರಕ್ಷಣೆ ಯಾರು ಕೇಳಿದರು, ಯಾಕೆ ಕೇಳುತ್ತಿದ್ದಾರೆ, ಅಂತಹವರ ಪ್ರಾಣಕ್ಕೆ ನಿಜಕ್ಕೂ ಆಪತ್ತಿದೆಯಾ ಎಂದೆಲ್ಲಾ ನುರಿತ ಪೊಲೀಸರು ಚೆಕ್ ಮಾಡಿ ವರದಿ ಕೊಡುತ್ತಾರೆ. ಅಂತಹ ಆಪತ್ತು ಇದೆ ಅಂತ ಖಾತ್ರಿಯಾದಾಗ ಮಾತ್ರ ಅಂತವರಿಗೆ ಪೊಲೀಸ್ ರಕ್ಷಣೆ ಕೊಡುವುದು ವಾಡಿಕೆ. ಆದರೆ ವಿಭಟ್ಟರ ವಿಚಾರದಲ್ಲಿ ಪೊಲೀಸರಿಗೆ ಅಂತಾ ಆಪತ್ತಿನ ವಿಚಾರವೇನೂ ಕಾಣಲಿಲ್ಲ. ಹಾಗೆಂದು ವರದಿ ರೆಡಿ ಮಾಡಿ ಬಿದರಿಗೂ ಕೊಟ್ಟುಬಿಟ್ಟರು.


ಆಗ ಕೆರಳಿತು ನೋಡಿ ವಿಭಟ್ಟರ ego!

ಪಾಪ ಮಹಾಕವಿ ರವೆಯ ತನ್ನಂಥ ಖ್ಯಾತ ಜರ್ನಲಿಸ್ಟ್‌ಗೆ ಗನ್‌ಮ್ಯಾನ್ ರಕ್ಷಣೆ ನೀಡಲು 'ನೋ' ಎಂದ ಬಿದರಿಗೆ ಪಾಠ ಕಲಿಸಲು ವಿಭಟ್ಟರು ತೀರ್ಮಾನಿಸಿದರು. ಅದಕ್ಕೆ ತಕ್ಕಂತೆ ಕಳೆದ ವಾರ ಎಂಬಿಎ ವಿದ್ಯಾರ್ಥಿನಿ ಹಾಗೂ ಆನಂದ್ ಎಂಬುವರ ಪ್ರೇಮ ಕಲಹ, ನಂದಿನಿ ಲೇಔಟ್ ಪೊಲೀಸರ ಬೇಜವಾಬ್ದಾರಿತನಗಳೆಲ್ಲಾ ಭಾರಿ ಸುದ್ದಿಯಾಗಿತ್ತಲ್ಲ, ಅದನ್ನೇ ನೆಪ ಮಾಡಿಕೊಂಡು 'ಕಾನೂನು ಎಷ್ಟಕ್ಕೆ ಬಿಕರಿಯಾಗಿತ್ತು ಹೇಳಿ ಬಿದರಿ ಅವರೆ?' ಎಂಬ ಲೇಖನ ಬರೆಸಿ ಪ್ರಿಂಟಿಸಿಬಿಟ್ಟರು ಭಟ್ಟರು. ಇದನ್ನು ಬರೆದ ರಾಘವೇಂದ್ರ ಭಟ್ಟ ವಿಭಟ್ಟರ ಖಾಸಾ ಶಿಷ್ಯ. ಗನ್‌ಮ್ಯಾನ್ ಸೌಲಭ್ಯ ಕೊಡಿಸಲು ಹೋರಾಡಿದ್ದ ವಿಭಟ್ಟರ ಸೇವಾದುರಂಧರ. ನಂತರ ಈ ವರದಿ ನೋಡಿ ಉರಿದು ಹೋದ ಬಿದರಿ ವಿಭಟ್ಟರಿಗೆ ಒಂದು ಪತ್ರ ಬರೆದರು. ಆ ಪತ್ರದಲ್ಲಿ ಪ್ರಿಯಾಂಕ ಪ್ರಕರಣದಲ್ಲಿ ತಾವು ತೆಗೆದುಕೊಂಡ ಕ್ರಮಗಳ ಬಗ್ಗೆ ಹೇಳಿರುವ ಬಿದರಿಯವರು ಮುಂದೆ ಹೀಗೆ ಬರೆದಿದ್ದಾರೆ:

"ಕಳೆದ ಕೆಲವು ತಿಂಗಳಿಂದ 'ವಿಜಯ ಕರ್ನಾಟಕ' ಪತ್ರಿಕೆಯಲ್ಲಿ ವೃತ್ತಿಯಲ್ಲಿ ನಾನು ಕೈಗೊಂಡಿರುವ ಕ್ರಮ ಮತ್ತು ಬೆಂಗಳೂರು ಪೊಲೀಸ್ ಇಲಾಖೆಯ ಕಾರ್ಯನಿರ್ವಹಣೆ ಕುರಿತು ಹಲವಾರು ಪ್ರತಿಕೂಲ ವರದಿಗಳು ಪ್ರಕಟವಾಗಿರುತ್ತವೆ. ಈ ಲೇಖನವೂ ಕೂಡಾ ಇದೇ ಸಾಲಿನಲ್ಲಿ ಇದೆ.

ನೀವು ದಿನಾಂಕ 30-06-2009 ರಂದು ತಮ್ಮ ಅಂಗರಕ್ಷಕರಾಗಿ ಪೊಲೀಸರನ್ನು ನಿಯುಕ್ತಗೊಳಿಸಲು ಅರ್ಜಿ ಸಲ್ಲಿಸಿರುವುದು ಸರಿಯಷ್ಟೆ. ಈ ಬಗ್ಗೆ ಸೂಕ್ತ ವಿಚಾರಣೆ ಮಾಡಿಸಿ; ವಿಚಾರಣಾ ವರದಿಯನ್ನು ಆಧರಿಸಿ ನಿಮಗೆ ಪೊಲೀಸ್ ಅಂಗರಕ್ಷಕರನ್ನು ನಿಯಮಿಸುವುದು ಸರಿಯಲ್ಲ ಎಂಬ ನಿರ್ಧಾರಕ್ಕೆ ನಾನು ಬಂದಿರುವ ವಿಷಯ ನಿಮಗೆ ಗೊತ್ತಿದೆ. ಈ ಬಗ್ಗೆ ತಮ್ಮ ವರದಿಗಾರರಾದ ರಾಘವೇಂದ್ರ ಭಟ್ಟರು ಮತ್ತು ಹಲವು ಉನ್ನತ ಮೂಲಗಳಿಂದ ಸಾಕಷ್ಟು ಒತ್ತಡ ಬಂದಿದ್ದರೂ, ನಾನು ನನ್ನ ನಿರ್ಧಾರಕ್ಕೆ ಬದ್ಧನಾಗಿದ್ದೇನೆ. ಈ ಕಾರಣದಿಂದಲೇ, ಕೆಲವು ತಿಂಗಳಿಂದ ನಾನು ಕೈಗೊಂಡ ವೃತ್ತಿಪರ ಕ್ರಮಗಳ ಬಗ್ಗೆ ಮತ್ತು ಬೆಂಗಳೂರು ಪೊಲೀಸ್ ಕಾರ್ಯನಿರ್ವಹಣೆಯ ಬಗ್ಗೆ ಹಲವಾರು ಪ್ರತಿಕೂಲ ವರದಿಗಳು ನಿಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿವೆ ಮತ್ತು ಈ ಲೇಖನವು ಸಹಿತ ಅದೇ ಕಾರಣದಿಂದ ಪ್ರಕಟವಾಗಿದೆ ಎಂದು ನಾನು ನಂಬಲು ಬಲವಾದ ಕಾರಣಗಳಿವೆ.. ..

ಹಲವಾರು ಕಾರಣಗಳಿಂದಾಗಿ 'ವಿಜಯ ಕರ್ನಾಟಕ' ದಿನಪತ್ರಿಕೆಯು ರಾಜ್ಯದ ಒಂದು ಪ್ರಮುಖ ದಿನಪತ್ರಿಕೆಯಾಗಿ ಹೊರ ಹೊಮ್ಮಿದೆ. ಈಗ ಅದು ಶತ-ಶತಮಾನಗಳಿಂದ ಪತ್ರಿಕಾ ಧರ್ಮವನ್ನು ಎತ್ತಿ ಹಿಡಿದಿರುವ 'ಟೈಮ್ಸ್ ಆಫ್ ಇಂಡಿಯಾ' ಸಮೂಹಕ್ಕೆ ಸೇರಿದೆ. ಪ್ರತಿಷ್ಠಿತ ಮತ್ತು ಗೌರವಾನ್ವಿತ ಪತ್ರಿಕಾ ಸಮೂಹವಾದ 'ಟೈಮ್ಸ್ ಆಫ್ ಇಂಡಿಯಾ' ಸಮೂಹಕ್ಕೆ ಸೇರಿರುವ 'ವಿಜಯ ಕರ್ನಾಟಕ' ಪತ್ರಿಕೆ ಪತ್ರಿಕಾ ಧರ್ಮಕ್ಕೆ ಅನುಗುಣವಾಗಿ ನಡೆಯಲಿ ಎಂದು ಆಶಿಸುತ್ತೇನೆ.''

ತಾನು ಗನ್‌ಮ್ಯಾನ್‌ಗಳಿಂದ ಸುತ್ತುವರಿದು ಟಾಪ್ ಟೂ ಟೋ ಅಂತ ಮೆರೆಯಬೇಕೆಂದು ಕನಸು ಕಂಡಿದ್ದ ಸಂಪಾದಕನೊಬ್ಬ ಆ ವಿಶೇಷ ಸವಲತ್ತು ಸಿಗದಿದ್ದಾಗ ತನ್ನ ಪತ್ರಿಕೆಯನ್ನೇ ಹೇಗೆ ಉಪಯೋಗಿಸಿಕೊಂಡು ಮುಖಭಂಗಕ್ಕೀಡಾದ ಎಂಬುದಕ್ಕೆ ಇದಕ್ಕಿಂತ ಉತ್ತಮ ಉದಾಹರಣೆ ಬೇಕಾ?

ಟೈಮ್ಸ್ ಆಫ್ ಇಂಡಿಯಾ ಸಮೂಹದಲ್ಲಿ ಇಂತಹ ತಮಾಷಿಗೇನು ಬರ!

ಛೇ!!

...ಪ್ಪ ಬಿಜೆಪಿಯಲ್ಲಿ ಯಡ್ಡಿ-ರೆಡ್ಡಿಗಳ ನಡುವೆ ತಲೆದೋರಿದ್ದ ...ನ್ನು ಬಗೆಹರಿಸುವುದಕ್ಕೆ ರಾಷ್ಟ್ರ ನಾಯಕರು 'ಸಮನ್ವಯ ...ಮಿತಿ ರಚಿಸಿದ್ದಾರೆ. ರಾಜ್ಯದ ಆಡಳಿತವನ್ನು ನೋಡಿಕೊಳ್ಳ ...ಯೇ ಜನ ಎಮ್ಮೆಲ್ಲೆಗಳನ್ನು ಆರಿಸಿ ಕಳಿಸಿರುವಾಗ, ... ಆಯ್ಕೆಗೊಂಡ ಸರ್ಕಾರ ಅಸ್ತಿತ್ವದಲ್ಲಿರುವಾಗ ಇಂಥ ...ಯ ಸಮಿತಿಯ ಅವಶ್ಯಕತೆಯೇನಿತ್ತು ಎಂಬುದನ್ನು ಹಿಂದಿನ ... ವಿವರವಾಗಿ ಬರೆದಿದ್ದೇವೆ. ಈ ಸಮಿತಿಯಲ್ಲಿ ಎಲ್ಲಾ ...ಗಳನ್ನು ಚರ್ಚೆ ಮಾಡಿ ಸರ್ವಸಮ್ಮತದಿಂದ ಒಪ್ಪಿಕೊಂಡ ...ವನ್ನಷ್ಟೇ ರಾಜ್ಯ ಕ್ಯಾಬಿನೆಟ್‌ನಲ್ಲಿ ಚರ್ಚಿಸಬೇಕೆಂಬ ತಾಕೀತು ...ದುದರಿಂದ ಜನರಿಂದ ಆಯ್ಕೆಗೊಂಡ ಸರ್ಕಾರಕ್ಕೆ ಏನೂ ...ಬೆಲೆಯಿಲ್ಲ. ಈ ಸಮಿತಿಯಲ್ಲಿ ಜನರಿಂದ ಆಯ್ಕೆಯಾಗದ ... ಸಂತೋಷ್ ಮತ್ತು ಸತೀಶ್‌ರಂಥವರೂ ಇರುವುದರಿಂದ ... ಆಯ್ಕೆಯಾಗದವರು ಮಾಡುವ ತೀರ್ಮಾನಗಳನ್ನು ... ಆಯ್ಕೆಯಾಗಿರುವ ಸರ್ಕಾರ ಪರಿಪಾಲಿಸಬೇಕಾದ ...ಪರಿಸ್ಥಿತಿ ನಿರ್ಮಾಣವಾಗುತ್ತದೆ. ಇದು ಜನಪ್ರತಿನಿಧಿಗಳೇ ...ನಡೆಸಬೇಕೆಂಬ ಪ್ರಜಾತಂತ್ರದ ಮೂಲ ಆಶಯಕ್ಕೇ ...ಪೆಟ್ಟು ಕೊಡುವ ಜನದ್ರೋಹಿ ಕೆಲಸ ಮಾತ್ರವಲ್ಲ, ...ದ ವಿರೋಧಿ ಕೂಡ. ಈ ಎಲ್ಲಾ ವಿಚಾರಗಳ ಬಗ್ಗೆ ...ರೆ ಬರೆಯಲಾಗಿತ್ತು.

ಈ ಸಮನ್ವಯ ಸಮಿತಿಯನ್ನು ರಚಿಸಿ ಅದರ ...ಯೂ ನಡೆದಿದೆ. ಸಂಸದ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ... ಗೌಡ, ಮುಖ್ಯಮಂತ್ರಿ ಯಡಿಯೂರಪ್ಪ, ಸಂಸದ ...ಮಾರ್, ವಿ.ಎಸ್.ಆಚಾರ್ಯ, ಜಗದೀಶ್ ಶೆಟ್ಟರ್, ...ರಪ್ಪ ಜಿ.ಕರುಣಾಕರ ರೆಡ್ಡಿ ಆರ್.ಅಶೋಕ್, ವಿಶ್ವೇಶ್ವರ ...ಗೇರಿ, ಸುರೇಶ್ ಕುಮಾರ್, ಕಟ್ಟಾ ಸುಬ್ರಹ್ಮಣ್ಯ ... ಬಸವರಾಜ ಬೊಮ್ಮಾಯಿ, ವಿ.ಸತೀಶ್ ಮತ್ತು ... ಅವರು ಅಧಿಕೃತವಾಗಿ ಸಮನ್ವಯ ಸಮಿತಿಯಲ್ಲಿದ್ದಾರೆ. ...ಸಮಿತಿಯಲ್ಲಿರುವವರ ಸಾಮಾಜಿಕ ಹಿನ್ನೆಲೆಯನ್ನು

ದಮನಿಸುತ್ತಾ ಬಂದಿರುವ ಬ್ರಾಹ್ಮಣಶಾಹಿ, ಮನುವಾದಿ ಸಿದ್ಧಾಂತವನ್ನು ತಲೆಯೊಳಗೆ ಇರಿಸಿಕೊಂಡಿರುವ ಆರೆಸ್ಸೆಸ್ ಈ ದಮನಿತ ಜಾತಿಗಳು ಮತ್ತು ಮಹಿಳೆಯರು ಸಮಿತಿಯಲ್ಲಿ ಸ್ಥಾನ ಪಡೆಯದಂತೆ ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿದ್ದರೂ ಆಶ್ಚರ್ಯವಿಲ್ಲ.

ಇನ್ನೊಂದು ವಿಚಾರವನ್ನಿಲ್ಲಿ ಗಮನಿಸಬೇಕು. ಯಡ್ಡಿಗೆ ಮೂಗುದಾರ ಹಾಕಿ ಪದೆಮುರಿ ಕಟ್ಟುವ ಉದ್ದೇಶದಿಂದಲೇ ರೆಡ್ಡಿ ಈ 'ಸಮನ್ವಯ ಸಮಿತಿ' ರಚಿಸಬೇಕೆಂಬ ಬೇಡಿಕೆಯಿಟ್ಟು ಗುದ್ದಾಡಿದ್ದರು. ಈ ಯಡ್ಡಿ ಎಂಥ ಚಾಣಾಕ್ಷ ಎಂದರೆ ಸಮನ್ವಯ ಸಮಿತಿ ರಚನೆಗೆ ಒಪ್ಪಿಕೊಂಡು ಬೀಸೋ ದೊಣ್ಣೆಯಿಂದ ತಪ್ಪಿಸಿಕೊಂಡದ್ದೂ ಅಲ್ಲದೇ ಆ ಸಮಿತಿಯಲ್ಲಿ ತನ್ನ ಬೆಂಬಲಿಗರೇ ಜಾಸ್ತಿಯಿರುವಂತೆ ನೋಡಿಕೊಳ್ಳುವ ಮೂಲಕ 'ಸಮನ್ವಯ ಸಮಿತಿ' ಎಂಬ ರೆಡ್ಡಿಗಳ ಬಾಣವನ್ನು ವಾಪಸ್ ರೆಡ್ಡಿಗಳೆಡೆಗೇ ಬಿಟ್ಟಿದ್ದಾರೆ. ಯಡ್ಡಿಯ ಕಟ್ಟಾ ಬೆಂಬಲಿಗನಾಗಿರುವ ಬಸವರಾಜ್ ಬೊಮ್ಮಾಯಿಯನ್ನು ಮಂತ್ರಿ ಮಂಡಳದಿಂದ ಕೈ ಬಿಡಬೇಕು ಎಂದು ರೆಡ್ಡಿಗಳು ಪಟ್ಟು ಹಿಡಿದಿದ್ದರೆ ಅದೇ ಬಸವರಾಜ್ ಬೊಮ್ಮಾಯಿಯನ್ನು ಮಂತ್ರಿಮಂಡಲದಿಂದ ಕೈಬಿಡುವ ಮಾತು ದೂರವಿರಲಿ, ಅವರನ್ನೇ ಮಂತ್ರಿ ಮಂಡಳಕ್ಕೂ ಮೇಲಿನ ಸಮಿತಿಯಂತೆ ಕಾರ್ಯನಿರ್ವಹಿಸುವ ಸಮನ್ವಯ ಸಮಿತಿಗೆ ಸೇರಿಸಿ ರೆಡ್ಡಿಗೆ ಸೆಡ್ಡು ಹೊಡೆಯುತ್ತಾರೆಂದರೆ? ಆದರೆ, ಈ ಸಮಿತಿಯಲ್ಲಿ ಯಡ್ಡಿ ಬೆಂಬಲಿಗರನ್ನು ಹೆಚ್ಚಾಗಿ ತುರುಕುವುದಕ್ಕೆ ಹೈ ಕಮಾಂಡ್ ಹೇಗೆ ಒಪ್ಪಿತು ಎಂಬ ಪ್ರಶ್ನೆ ಎದ್ದೇ ಏಳುತ್ತದೆ.

ಇಲ್ಲಿ ಗಮನಿಸಬೇಕಾದ ಒಂದು ವಿಚಾರ ಎಂದರೆ ಮೊದಲಿನಿಂದಲೂ ಹೈ ಕಮಾಂಡ್, ಅದರಲ್ಲೂ ವಿಶೇಷವಾಗಿ ಅರುಣ್ ಜೇಟ್ಲಿ ಮತ್ತು ಬಿಜೆಪಿಯ ರಾಷ್ಟ್ರಾಧ್ಯಕ್ಷ ರಾಜನಾಥ್ ಸಿಂಗ್ ಯಡ್ಡಿಯ ಪರವೇ ಇದ್ದರು. ಸುಷ್ಮಾ ಸ್ವರಾಜ್, ಅನಂತಕುಮಾರ್ ರೆಡ್ಡಿಗಳ ಪರವಿದ್ದರು. ಆದ್ದರಿಂದಲೇ ಕರ್ನಾಟಕದಲ್ಲಿ ನಾಯಕತ್ವ ಬದಲಾವಣೆಯಿಲ್ಲ ಎಂದು ರಾಜನಾಥ್ ಸಿಂಗ್ ಮತ್ತು ಜೇಟ್ಲಿ ಮೊದಲಿನಿಂದಲೂ ಹೇಳುತ್ತಲೇ ಬಂದಿದ್ದರು. ಇದನ್ನು ಚೆನ್ನಾಗಿ ಬಳಸಿಕೊಂಡ ಯಡ್ಡಿ ರಾಜನಾಥ್ ಸಿಂಗ್‌ರೊಂದಿಗೆ ಅದೇನು ಡೀಲ್ ಕುದುರಿಸಿಕೊಂಡರೋ ಗೊತ್ತಿಲ್ಲ.

ಸನಿವಾರಿ-ಶಿವದಾರಿಗಳ ಸಮನ್ವಯ ಸಮಿತಿ

...ದೆ ಇದೊಂದು ಮೇಲ್ಜಾತಿ ಜನರ ಹಿತಾಸಕ್ತಿಗಳನ್ನು ... ಸಮಿತಿಯಾಗಿದೆ ಎಂಬುದು ಸುಲಭವಾಗಿ ...ಯುತ್ತದೆ. ಹದಿನಾಲ್ಕು ಜನರ ಈ ಸಮಿತಿಯಲ್ಲಿ ಆರು ...ಹ್ಮಣರಿದ್ದಾರೆ (ಅನಂತಕುಮಾರ್, ವಿಶ್ವೇಶ್ವರ ಹೆಗಡೆ ...ಎಸ್.ಆಚಾರ್ಯ, ಸುರೇಶ್ ಕುಮಾರ್, ಸಂತೋಷ್ ...ಶ್), ಮೂವರು ಲಿಂಗಾಯತರಿದ್ದಾರೆ (ಯಡಿಯೂರಪ್ಪ ...ಶೆಟ್ಟರ್ ಮತ್ತು ಬಸವರಾಜ್ ಬೊಮ್ಮಾಯಿ), ಇಬ್ಬರು ...ದ್ದಾರೆ (ಆರ್.ಅಶೋಕ್ ಮತ್ತು ಸದಾನಂದಗೌಡ), ಒಬ್ಬರು ...ದ್ದಾರೆ (ಕೆ.ಎಸ್.ಈಶ್ವರಪ್ಪ), ಒಬ್ಬರು ಕಮ್ಮ ಜನಾಂಗಕ್ಕೆ ...ಕಟ್ಟಾ ಸುಬ್ರಹ್ಮಣ್ಯ ನಾಯ್ಡು), ಉಳಿದವರೊಬ್ಬರು ...ಗಕ್ಕೆ ಸೇರಿದ್ದಾರೆ (ಕರುಣಾಕರ ರೆಡ್ಡಿ).

...ರೆ ಸಮಿತಿಯಲ್ಲಿ ಅತೀ ಹೆಚ್ಚು ... ಇದ್ದು ನಂತರದ ಸ್ಥಾನಗಳಲ್ಲಿ ...ರು ಮತ್ತು ಒಕ್ಕಲಿಗರಿ...ರ್ಥ ಇಡೀ ಸಮಿತಿಯ ...ಣವನ್ನು ಜುಟ್ಟು ...ನ್ನು ಶಿವದಾರಿಗಳು ...ತ್ತಾರೆ ಎಂಬುದು ...ಕ್ಕೆ ಅರ್ಥವಾಗುತ್ತದೆ. ...ಕಮ್ಮಾ ಮತ್ತು ರೆಡ್ಡಿ ... ಹಿಂದುಳಿದ ವರ್ಗಕ್ಕೆ ...ಬಲ ಜಾತಿಗಳೇ ಆಗಿವೆ. ...ಡೀ ಸಮಿತಿಯು ಮೇಲ್ಜಾತಿ...ಯಾಗಿ ರೂಪುಗೊಂಡಿದೆ. ...ಕ್ಕು ನೀತಿನಿಯಮಗಳನ್ನು ... ಇಂಥ ಅತ್ಯುನ್ನತ ಸಮಿತಿಯಲ್ಲಿ ...ಬ್ಬ ದಲಿತ ಇಲ್ಲ, ಒಬ್ಬೇ ಒಬ್ಬ ...ಲ್ಲ, ಒಬ್ಬನೇ ಒಬ್ಬ ಅಲ್ಪಸಂಖ್ಯಾತನಿಲ್ಲ, ...ಲ್ಲ ಹಿಂದುಳಿದ ಜಾತಿಗಳ ಪ್ರತಿನಿಧಿಗಳಿಲ್ಲ, ...ಲ್ಲಿ ಮಹಿಳೆಯರಿಗೆ ಇಂಥ ಅತ್ಯುನ್ನತ ಸಮಿತಿಯಲ್ಲಿ ...ನಿಧಿಸುವುದಕ್ಕೆ ಯೋಗ್ಯತೆ ಇಲ್ಲ ಎಂದು ...ವೆ? ಅಥವ ಯೋಗ್ಯತೆಯಿದ್ದವರು ಬಿಜೆಪಿಯಲ್ಲೇ ...ಜಾತಿಗಳ ಅಧಿಪತ್ಯವನ್ನು ಕೆಳ ಜಾತಿಗಳ ಮೇಲೆ ...ಗಾಗಿಯೇ ಪ್ರಜ್ಞಾಪೂರ್ವಕವಾಗಿ ಅವರನ್ನು ...ವೆ? ಇವೆರಡರಲ್ಲಿ ಯಾವುದು ಸರಿ ಎಂದರೂ ...ಗಳ ಬ್ರಾಹ್ಮಣವಾದಿ ಹಾಗೂ ದಲಿತ-ಮಹಿಳಾ ...ನೀತಿಗೆ ಹಿಡಿದ ಕನ್ನಡಿಯಾಗಿದೆ.

[illegible]

ಸಮನ್ವಯ ಸಮಿತಿಗಾಗಿ ಈ ಹದಿನಾಲ್ಕು ಜನರ ಪಟ್ಟಿಯನ್ನು ಸೀದಾ ಅವರ ಬಳಿ ಹೋಗಿ ಮಾನ್ಯ ಮಾಡಿಸಿಕೊಂಡು ಬಂದಿದ್ದಾರೆ. ರಾಜನಾಥ್ ಸಿಂಗ್ ಕೂಡ ಇನ್ನೇನು ಕೆಲವೇ ಸಮಯದಲ್ಲಿ ರಾಷ್ಟ್ರಾಧ್ಯಕ್ಷ ಸ್ಥಾನದಿಂದ ಕೆಳಗಿಳಿಯಬೇಕಿರುವುದರಿಂದ ಸಿಕ್ಕಷ್ಟು ಸಿಗಲಿ ಎಂದು ಡೀಲ್‌ಗೆ ಒಪ್ಪಿರುವ ಸಾಧ್ಯತೆಯೂ ಇರುತ್ತದೆ. ಈಗ ಪಕ್ಷದ ರಾಷ್ಟ್ರಾಧ್ಯಕ್ಷರೇ ಒಪ್ಪಿಗೆ ಸೂಚಿಸಿದ ಮೇಲೆ ಉಳಿದವರು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.



ಅಂದಮಾತ್ರಕ್ಕೆ ರೆಡ್ಡಿಗಳು ಅದಕ್ಕೆ ಒಪ್ಪಿಕೊಂಡಿದ್ದಾರೆಂದೇನೂ ಅಲ್ಲ. ಮೊದಲು ಯಡಿಯೂರಪ್ಪ ಮುಖ್ಯಮಂತ್ರಿ ಸ್ಥಾನದಿಂದ ಕೆಳಗಿಳಿಯಲೇಬೇಕು ಎಂದು ಹಠ ಹಿಡಿದು ಸೋತರು. ನಂತರ ಸಮನ್ವಯ ಸಮಿತಿಯ ನೇತೃತ್ವವನ್ನು ತಮ್ಮ ಬೆನ್ನಿಗೆ ನಿಂತಿರುವ ಸುಷ್ಮಾ ಸ್ವರಾಜ್ ಅವರೇ ವಹಿಸಿಕೊಳ್ಳಬೇಕೆಂದು ಹಠ ಹಿಡಿದು ಅದರಲ್ಲೂ ಸೋತರು. ಈಗ ತಮ್ಮ ಬೆಂಬಲಿಗರೂ ಸಮಿತಿಯಲ್ಲಿ ಗಣನೀಯ ಪ್ರಮಾಣದಲ್ಲಿ ಇಲ್ಲದಂತ ಪರಿಸ್ಥಿತಿ ಸೃಷ್ಟಿಯಾಗಿದೆ. ಅಂದರೆ ಸಾರಾಂಶದಲ್ಲಿ ರೆಡ್ಡಿಗಳು ಗಾಯಗೊಂಡ ಹುಲಿಯಂತಾಗಿದ್ದಾರೆ. ಇದರರ್ಥ ಇಷ್ಟೇ. ಈ ಸಮನ್ವಯ ಸಮಿತಿ ಎಂಬ ತೇಪೆ ಹೆಚ್ಚೆಂದರೆ ಒಂದೆರಡು ತಿಂಗಳು ನಡೆಯಬಹುದು. ಅಷ್ಟರಲ್ಲಿ ಇದೇ ರೆಡ್ಡಿಗಳು ಮತ್ತೆ ಬಂಡೇಳಲಿದ್ದಾರೆ. ಹಾಗಾಗಿ ಯಡ್ಡಿ ನಿಜಾರ್ಥದಲ್ಲಿ ತಂತಿಯ ಮೇಲೆ ನಡೆಯುತ್ತಿದ್ದಾರೆ. ಯಾವಾಗ ಬೀಳುತ್ತಾರೋ ಗೊತ್ತಿಲ್ಲ.

ಸದ್ಯದಲ್ಲೇ ಎಮ್ಮೆಲ್ಸಿ ಎಲೆಕ್ಷನ್ ಕೂಡ ನಡೆಯಬೇಕಿದೆ. ಕಾಂಗ್ರೆಸ್‌ನಿಂದ ಹತ್ತೊಂಭತ್ತು ಸ್ಥಾನಗಳು, ಬಿಜೆಪಿಯಿಂದ ನಾಲ್ಕು ಸ್ಥಾನಗಳು ಹಾಗೂ ಜೆಡಿಎಸ್‌ನಿಂದ ಎರಡು ಸ್ಥಾನಗಳು ತೆರವಾಗಲಿದ್ದು ಅವುಗಳಿಗೆ ಮರುಚುನಾವಣೆ ನಡೆಯಬೇಕಿದೆ. ಇಂಥ ಮಹತ್ವಪೂರ್ಣ ಹೊತ್ತಿನಲ್ಲಿ ಬಿಜೆಪಿಯಲ್ಲಿ ಕಿತ್ತಾಟ ಪ್ರಾರಂಭವಾಗಿರುವುದು ಚುನಾವಣೆಯ ಮೇಲೆ ಖಂಡಿತ ಪರಿಣಾಮವುಂಟು ಮಾಡುತ್ತದೆ. ಈ ಹಿಂದೆ ವಿಧಾನಸಭಾ ಚುನಾವಣೆಯಲ್ಲಾದರೆ ತಾವು ಹೇಳಿದಂತೆ ಕೇಳುವ ಸರ್ಕಾರವನ್ನು ಅಧಿಕಾರಕ್ಕೆ ತರುವುದಕ್ಕಾಗಿ ಇದೇ ರೆಡ್ಡಿಗಳು ಗಣಿ ಕೊಳ್ಳೆ ಹೊಡೆದು ಗೆಬರಿಕೊಂಡ ದುಡ್ಡನ್ನು ನೀರಿನಂತೆ ಹರಿಸಿದ್ದರು. ಕಾಂಗ್ರೆಸ್ ಮತ್ತು ಜೆಡಿಎಸ್‌ಗಳ ರಾಜಕಾರಣಿಗಳನ್ನು ಮಾರುಕಟ್ಟೆಯಲ್ಲಿ ತರಕಾರಿ ಕೊಳ್ಳುವಂತೆ ಕೊಂಡುಕೊಂಡು ಬಂದಿದ್ದರು. ಅಷ್ಟೆಲ್ಲಾ ಮಾಡಿ ಈಗ 'ಹಾವನ್ನು ಹೊಡೆದು ಹದ್ದಿಗೆ ಹಾಕಿದಂತಾದ' ಪರಿಸ್ಥಿತಿಯಲ್ಲಿದ್ದಾರೆ. ಈ ಬಾರಿಯ ಎಮ್ಮೆಲ್ಸಿ ಚುನಾವಣೆಯಲ್ಲಿ ರೆಡ್ಡಿಗಳು ಅಷ್ಟೊಂದು ಮುತುವರ್ಜಿಯಿಂದ ಕೆಲಸ ಮಾಡುವ ಲಕ್ಷಣಗಳು ಕಾಣುತ್ತಿಲ್ಲ, ದುಡ್ಡು ಹರಿಸುವ ಇರಾದೆಯಂತೂ ಇದ್ದಂತಿಲ್ಲ, ಹಾಗಾಗಿ ಎಮ್ಮೆಲ್ಸಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್‌ಗಳೇ ಮೇಲುಗೈ ಸಾಧಿಸುವ ಸಾಧ್ಯತೆಯೇ ಜಾಸ್ತಿಯಿದೆ.


ಅದು ಕೂಡ ಯಡ್ಡಿಯ ನಿರ್ಗಮನಕ್ಕೆ ಕಾರಣವಾಗಲಿದೆ...

● ಕುಮಾರ್ ಬುರಡಿಕಟ್ಟಿ

ಯಡ್ಡಿಗೆ ಸಂಕಟ-ಮಗನಿಗೆ ಚಿನ್ನಾಟ


ಹರಿಪ್ರಿಯ ರಗಳೆ

'ಅಪ್ಪ ಯಡ್ಡಿಗೆ ಕುರ್ಚಿ ಚಿಂತೆಯಾದರೆ ಮಗ ವಿಜಯೇಂದ್ರನಿಗೆ ನಟಿ ಹರಿಪ್ರಿಯಳೇ ಬೇಕಂತೆ' ಎಂಬುದೀಗ ಲೇಟೆಸ್ಟ್ ಗಾದೆ ಮಾತು. ಈ ನವೆಂಬರ್ ತಿಂಗಳು ಪೂರ್ತಿ ಬಳ್ಳಾರಿ ರೆಡ್ಡಿಗಳಿಂದ ಹೊಡೆತ ತಿನ್ನುತ್ತಾ ಯಡ್ಡಿ ವಿಲವಿಲ ಒದ್ದಾಡುತ್ತಿದ್ದಾಗ ಅವರ ಎರಡನೇ ಮಗ ವಿಜಯೇಂದ್ರ ಎಲ್ಲೂ ಕಾಣಿಸಿಕೊಂಡಿರಲಿಲ್ಲ. ಮೊದಲನೇ ಮಗ ಶಿವಮೊಗ್ಗ ಸಂಸದ ರಾಘವೇಂದ್ರ ಮಾತ್ರ ಒಂದಷ್ಟು ಶಾಸಕರನ್ನು ಗುಡ್ಡೆ ಹಾಕಿಕೊಂಡು ಬೆಂಗಳೂರಿನ ಚಾನ್ಸರಿ ಹೋಟೆಲ್‌ನ ಆರನೇ ಮಹಡಿಯಲ್ಲಿ ಠಿಕಾಣಿ ಹಾಕಿದ್ದ. ಆದರೆ ಯಡ್ಡಿ ಫ್ಯಾಮಿಲಿಗೆ ಈಗ ಸಿಕ್ಕಿರುವ ಅಧಿಕಾರ, ಹಣ, ಪ್ರಭಾವಗಳೆಲ್ಲವೂ ಮುರಿದು ಬೀಳುವ ಬಿಕ್ಕಟ್ಟು ಉಂಟಾದಾಗ ಡೀಲ್ ಮಾಸ್ಟರ್ ವಿಜಯೇಂದ್ರ ಎಲ್ಲಿದ್ದ, ಏನು ಮಾಡುತ್ತಿದ್ದ ಎಂದು ಹುಡುಕಿದರೆ



ಅವನು ಕೇರಳದ ಕಜಾಯ್ ರೆಸಾರ್ಟ್‌ನಲ್ಲಿದ್ದನೆಂಬ ಮಾಹಿತಿ ಸಿಗುತ್ತದೆ. ಜೊತೆಗೆ ಕನ್ನಡದ ವಿಫಲ ನಟಿ ಹರಿಪ್ರಿಯಾ ಕೂಡ ಅದೇ ಸಮಯದಲ್ಲಿ ರೆಸಾರ್ಟ್‌ನಲ್ಲಿದ್ದ ಸುದ್ದಿ ಕೇಳಿ ರಾಜ್ಯ ಬಿಜೆಪಿಗಳು ಬೆರಗಾಗಿದ್ದಾರೆ. ಅಂತೂ ಇಂತೂ ಅಪ್ಪನ ಹೆಗಲೇರಿದ್ದ ಶನೀಶ್ವರಿ ಇಳಿದು ಹೋದರೂ ಈಗ ಮಗನ ಹೆಗಲ ಮೇಲೆ ಇನ್ನೊಬ್ಬಳು ಬಂದು ಕುಳಿತಳಲ್ಲ ಎಂಬ ಚಿಂತೆ ಅವರದ್ದು.

ವಿಕೃತರ ಗ್ಯಾಂಗ್‌ನಲ್ಲಿ ವಿಜಯೇಂದ್ರ



ಹಾಗೆ ಹೇಳಬೇಕೆಂದರೆ ವಿಜಯೇಂದ್ರನ ಹರಿಪ್ರಿಯಾ ರಗಳೆ ಹೊಸ ವಿಚಾರವೇನಲ್ಲ. ಇವನೊಮ್ಮೆ ಚೆನ್ನೈಗೆ ಹೋಗಿದ್ದಾಗ ಯಾವುದೋ ತಮಿಳು ಸಿನಿಮಾ ಶೂಟಿಂಗ್‌ಗೆಂದು ಅದೇ ಹೋಟೆಲ್‌ನಲ್ಲಿದ್ದ ಹರಿಪ್ರಿಯಾ ಪರಿಚಯವಾಗಿತ್ತು. ನಂತರ ಆ ಸ್ನೇಹ ಮುಂದುವರೆದು ಈಗ ಸಾಕ್ಷಾತ್ ಯಡ್ಡಿಯ ಕಂಟ್ರೋಲಿಗೂ ಸಿಗದಂತೆ ಬೆಂಗಳೂರು, ಚೆನ್ನೈ, ಹೈದರಾಬಾದ್, ಕೇರಳ, ಬಾಂಬೆ ತನಕ ಹರಿದಾಡುತ್ತಿದೆ. ಅದರ ಮುಂದುವರೆದ ಎಪಿಸೋಡೇ ಕೇರಳದಲ್ಲಿನ ಕಜಾಯ್ ರೆಸಾರ್ಟ್ ರಗಳೆ. ಈ ವಿಚಾರ ಕೇಳಿ ಯಡ್ಡಿ ಮನೆಯಲ್ಲಿ ಥಕತೈ ಎಂದು ಕುಣಿದು ಹಾರಾಡಿದ್ದಾರಾದರೂ ವಿಜಯೇಂದ್ರ ಮಾತ್ರ ಮುಗ್ಧ ಶಿಶುವಿನಂತೆ ಇದ್ದನಂತೆ. ಆದರೆ ಯಡ್ಡಿಗೂ ಗೊತ್ತಿರದ ಇನ್ನೂ ಅನೇಕ ರಗಳೆಗಳನ್ನು ಈ ಜೋಡಿ ಮಾಡಿಕೊಂಡಿದೆ. ತೀರಾ ಇತ್ತೀಚೆಗೆ ಚೆಮ್ಮನೂರ್ ಜ್ಯುವೆಲರ್ಸ್‌ನ ಶೋರೂಂನಲ್ಲಿ ಇದೇ ವಿಜಯೇಂದ್ರ-ಹರಿಪ್ರಿಯಾ ಒಟ್ಟಿಗೆ ಕಾಣಿಸಿಕೊಂಡಿದ್ದಾರೆ. ಅವತ್ತು ಹರಿಪ್ರಿಯಾಳ ಅಮ್ಮ ಲಲಿತಮ್ಮನೂ ಜೊತೆಗಿದ್ದರಂತೆ. ಅವತ್ತು ಇವರು ಖರೀದಿಸಿದ ಒಡವೆಗಳ ಮೊತ್ತವೇ ಎಂಟು ಲಕ್ಷ ರೂ. ಆಗಿದೆ. ಎಂದಿನಂತೆ ಮಿಸ್ಟರ್ 'ವಿ' ಹಣ ತೆತ್ತಿದ್ದಾನೆ. ಮಲ್ಲೇಶ್ವರದ ಮಿಡಲ್ ಕ್ಲಾಸ್ ಬ್ರಾಹ್ಮಣ ಕುಟುಂಬವಾದ ಚಂದ್ರಸೇನ-ಲಲಿತಮ್ಮ ದಂಪತಿಗಳ ಮುದ್ದಿನ ಕುವರಿ ಹರಿಪ್ರಿಯಾ ಸಿನಿಮಾ ಸೇರಿ ಕಡಿದು ಕಟ್ಟೆ ಹಾಕಿದ್ದು ಅಷ್ಟರಲ್ಲೇ ಇದೆ. ನಟಿಸಿರುವ ನಾಲ್ಕಾರು ಸಿನಿಮಾಗಳಿಂದ ದುಡಿದಿರುವ ಹಣ ಬಹುಶಃ ಅವಳ ಮೇಕಪ್, ಫರ್‌ಫ್ಯೂಂ ಖರ್ಚಿಗೇ ಕರಗಿ ಹೋಗಿರಲಿಕ್ಕೂ ಸಾಕು. ಹೀಗಿದ್ದಾಗಲೂ ಹರಿಪ್ರಿಯಾಗೆ ಈಗ ಡಾಲರ್ಸ್ ಕಾಲೋನಿಯಲ್ಲೊಂದು ಬಂಗಲೆ ಇದೆ. ಇದರ ಬೆಲೆ ಎರಡೂವರೆ ಕೋಟಿ ರೂಪಾಯಿ ಅಂತಲೂ ಅಂದಾಜಿದೆ. ಇದೂ ಸಹ ವಿಜಯೇಂದ್ರನ ಕೊಡುಗೆಯೆ.

ಇಲ್ಲಿಯತನಕ ಈ ಹರಿಪ್ರಿಯಾ ನಟಿಸಿರುವ 'ಮನಸುಗಳ ಮಾತು ಮಧುರ', 'ವಸಂತಕಾಲ' ಮತ್ತು 'ಈ ಸಂಭಾಷಣೆ' ಸಿನಿಮಾಗಳೆಲ್ಲ ತೋಪೆದ್ದಿವೆ. ಇನ್ನು 'ಮುಖ್ಯಮಂತ್ರಿ ಐ ಲವ್ ಯೂ' ತರಹದ ಸಿನಿಮಾಗಳು ಬಿಡುಗಡೆಯಾಗುವ ಲಕ್ಷಣಗಳೂ ಕಾಣಿಸುತ್ತಿಲ್ಲ. ಸದ್ಯ ಈಕೆ ನಟಿಸಿರುವ 'ಮುಂಡ', 'ಚೆಲುವೆ ನಿನ್ನ ನೋಡಲು', 'ಕಳ್ಳರ ಸಂತೆ' ಮತ್ತು ತಮಿಳಿನ 'ಕನಗವೇಲ್ ಕಾಕ್ಕ' ಚಿತ್ರಗಳ ಚಿತ್ರೀಕರಣ ಮುಗಿದಿದೆಯಷ್ಟೇ.. ಯೋಗರಾಜ್ ಭಟ್ ನಿರ್ದೇಶನದಲ್ಲಿ ದಿಗಂತನೊಂದಿಗೆ ನಟಿಸಬೇಕಿರುವ ಸಿನಿಮಾ ಇನ್ನೂ ಆರಂಭವಾಗಿಲ್ಲ. ಹೀಗಿದ್ದರೂ ಹರಿಪ್ರಿಯಾಗೆ ಯಾರಾದರೂ ಸಿನಿಮಾದವರು ಫೋನು ಮಾಡಿದರೆ "ನಾನು ತುಂಬಾ ಬಿಜಿ. ಈಗಲೇ ಡೇಟ್ಸ್ ಕೊಡಲು ಆಗೊಲ್ಲ" ಎನ್ನುತ್ತಾಳೆ. ಇದರರ್ಥ ಇಷ್ಟೇ: ಈಕೆ ಸಿನಿಮಾ, ಶೂಟಿಂಗ್ ಇಲ್ಲದಿದ್ದರೂ ಕ್ರೆಸೆಂಟ್ 37 ಹೋಟೆಲ್ಲಿನ ರೂಮೊಂದರಲ್ಲಿ ಇರುತ್ತಾಳೆ.

ಬೆಂಗಳೂರಿನ ಮನೆಯಲ್ಲದೆ, ಹರಿಪ್ರಿಯಾಳಿಗಾಗಿ ಮಡಿಕೇರಿಯಲ್ಲೊಂದು ಫಾರ್ಮ್ ಹೌಸ್ ಕಂ ಬಂಗಲೆಯ ಇನಾಮು ಕೊಟ್ಟಿದ್ದಾನಂತೆ ವಿಜಿ. ಹರಿಪ್ರಿಯಾ ಓಡಾಡುವ ದುಬಾರಿ ಕಾರು ಸಹ ವಿಜಯೇಂದ್ರನ ಪ್ರಸಾದ ಎಂಬ ಗಾಳಿಸುದ್ದಿಯೂ ಕೇಳಿಬರುತ್ತಿದೆ.

ಈ ವಿಜಯೇಂದ್ರನಿಗೆ ಅನೇಕ ಆಗರ್ಭ ಸಿರಿವಂತ ಹುಡುಗರೊಂದಿಗೆ ದೋಸ್ತಿ ಇದೆ. ಕಟ್ಟಾ ಜಗದೀಶ್ ಅವರಲ್ಲೊಬ್ಬ. ಸಚಿವ ಕಟ್ಟಾ ನಾಯ್ಡುನ ಪುತ್ರರತ್ನ ಕಟ್ಟಾ ಜಗದೀಶ್‌ನೊಂದಿಗೆ ಈ ವಿಜಯೇಂದ್ರ ಆಗಾಗ್ಗೆ ಥಾಯ್‌ಲ್ಯಾಂಡ್, ಬರ್ಮಾ ಎಂದು ಹೋಗಿ ಬರುತ್ತಿರುತ್ತಾನೆ. ಇದಲ್ಲದೆ ಬಿಜೆಪಿ ಶಾಸಕರಾದ ನಂದೀಶ್ ರೆಡ್ಡಿ, ಸತೀಶ್ ರೆಡ್ಡಿಗಳ ನಂಟೂ ಈತನಿಗಿದೆ. ಬೆಂಗಳೂರಿನ ಕೋರ್ಸ್ ಸಮೀಪದ 'ಕ್ರೆಸೆಂಟ್ 37' ಹೋಟೆಲ್‌ನಲ್ಲಿ ಖಾಯಮ್ಮಾಗಿ ಎರಡು ರೂಂಗಳನ್ನು ತನ್ನ ಪರ್ಸನಲ್ಲಾದ ಘನಕಾರ್ಯಗಳಿಗಾಗಿಯೇ ವಿಜಯೇಂದ್ರ ಮೈಂಟೇನ್ ಮಾಡುತ್ತಿದ್ದಾನೆ. ಈ ಕ್ರೆಸೆಂಟ್ 37 ಗೆ ಹರಿಪ್ರಿಯಾಳ ಸ್ಕೋಡಾ ಕಾರು ಆಗಾಗ್ಗೆ ಬಂದುಹೋಗುವ ಸಂಗತಿ ಅನೇಕರಿಗೆ ಗೊತ್ತಿದೆ. ಇಷ್ಟಲ್ಲದೆ ಶಿವಾನಂದ ಸರ್ಕಲ್ ಹತ್ತಿರದ ಒಂದೀಡಿ ಬಿಲ್ಡಿಂಗ್ ಖರೀದಿಸಿರುವ ವಿಜಯೇಂದ್ರ, ಅಲ್ಲಿ ಕೂತು ವರ್ಗಾ, ಡೀಲ್‌ಗಳು, ಕಂಟ್ರಾಕ್ಟರ್‌ಗಳ ಪೇಮೆಂಟ್ ಡೀಲ್‌ಗಳನ್ನು ಕುದುರಿಸುತ್ತಿರುತ್ತಾನೆ. ಹೀಗೆ ನೂರೆಂಟು ಡೀಲ್‌ಗಳಲ್ಲಿ ಕಮಾಯಿಸುವ ದುಡ್ಡಿನ ಒಂದು ಭಾಗ ಸಿನಿಮಾ ನಟಿಯರ, ಮುಂಬೈ ಮಾಡಲ್‌ಗಳ ಶೋಕಿಗೆ ಖರ್ಚಾಗುತ್ತಿದೆ.

ರಾಜ್ಯ ಬಿಜೆಪಿಗಳ ಭಿನ್ನಮತೀಯರ ಜಗಳದಲ್ಲಿ ಶೋಭಾ ಕರಂದ್ಲಾಜೆ ವಿಚಾರ ಪ್ರಮುಖವಾಗಿತ್ತು, ಕೊನೆಗೆ ಯಡ್ಡಿ ಪಬ್ಲಿಕ್ಕಾಗಿ ಕಣ್ಣೀರು ಸುರಿಸುತ್ತಾ ಶೋಭಾರನ್ನು ಸಂಪುಟದಿಂದ ಹೊರಹಾಕಿದ್ದರು. ಆದರೆ ಹೋದೆಯಾ ಪಿಚಾಚಿ ಅಂದರೆ ಬಂದೇ ನಾ ಗವಾಕ್ಷೀಲಿ' ಅನ್ನುವಂತೆ ಹರಿಪ್ರಿಯಾ ವಿಜಯೇಂದ್ರನ ಹೆಗಲೇರಿದ್ದಾಳೆ. ಯಡ್ಡಿಗೆ ಈಗ ಉಳಿದಿರುವ ಚೂರುಪಾರು ಮರ್ಯಾದೆ ಹರಾಜಾಕಲು ಮಗ ವಿಜಯೇಂದ್ರ ಒಬ್ಬನೇ ಸಾಕು ಅನಿಸುತ್ತಿದೆ. ಇದು ಹೀಗೆ ಮುಂದುವರೆದರೆ ಯಡ್ಡಿಯನ್ನು ಹರಿಹರ ಬ್ರಹ್ಮಾದಿಗಳೇ ಬಂದರೂ ರಕ್ಷಿಸಲಾರರು ಬಿಡಿ.

● ಅರುಣ್‌ಕುಮಾರ್ ಜಿ.



ಮೂಡಿಗೆರೆ: ಬಿಜೆಪಿ ಕಾರ್ಯಕರ್ತರಿಂದಲೇ ದಿನಕ್ಕೊಂದು ಹಗರಣ ಬಯಲು



ಬಿಜೆಪಿ ಶಾಸಕ ಕುಮಾರಸ್ವಾಮಿ ಮೂಡಿಗೆರೆಯ ಅಷ್ಟೂ ಸರ್ಕಾರಿ ಇಲಾಖೆಗಳ ಅಧಿಕಾರಿಗಳಿಂದ ಮಂತ್ಲಿಯನ್ನು ಫಿಕ್ಸ್ ಮಾಡಿ ತನಗೆ ಇಂತಿಷ್ಟು ಕಪ್ಪ ಸಂದಾಯವಾಗಲೇ ಬೇಕು ಅಂತ ಹಠ ಹಿಡಿದು ಕುಳಿತಿರುವುದು ಸರಿಯಾ?

ಈ ಪ್ರಶ್ನೆಗೆ ಮೂಡಿಗೆರೆಯ ಜನ ಉತ್ತರ ಕಂಡುಕೊಳ್ಳಬೇಕಿದೆ. ಯಾಕೆಂದರೆ ತಾಲ್ಲೂಕು ಕಚೇರಿ, ತಾಲ್ಲೂಕು ಪಂಚಾಯತಿ, ಜಿ.ಪಂ ಉಪ ಕಚೇರಿ, ಪಶುಸಂಗೋಪನಾ ಇಲಾಖೆ, ಟಿ.ಎ.ಪಿ.ಸಿ.ಎಂ.ಎಸ್, ಲೋಕೋಪಯೋಗಿ ವಿಭಾಗ, ಆರೋಗ್ಯ ಸಮಾಜ ಕಲ್ಯಾಣ, ಸಿ.ಡಿ.ಪಿ.ಓ., ಜಲಾನಯನ, ಲ್ಯಾಂಪ್ಸ್, ಮೆಸ್ಕಾಂ, ಶಿಕ್ಷಣ ಇಲಾಖೆ ಹೀಗೆ ಸಾರಾಸಗಟು ಎಲ್ಲಾ ಇಲಾಖೆಗಳಿಂದಲೂ ಕುಮಾರಸ್ವಾಮಿ ರಾಜಾರೋಷವಾಗಿ ಹಣ ದುರುಪಯೋಗಪಡಿಸಿಕೊಂಡಿದ್ದಾರೆಂದು ಆರೋಪಗಳು ಕೇಳಿ ಬರುತ್ತಿವೆ.

ಮೂಡಿಗೆರೆಯಲ್ಲಿನ ಪರಿಸ್ಥಿತಿ ಯಾವ ಮಟ್ಟ ತಲುಪಿದೆ ಎಂದರೆ ಈಗ ಅತ್ಯಂತ ಭ್ರಷ್ಟ ಅಧಿಕಾರಿಗಳು ರೆಡ್ ಹ್ಯಾಂಡಾಗಿ ಸಿಕ್ಕಿ ಬಿದ್ದರೂ ಅವರನ್ನು ಕೆಲಸದಿಂದ ಸಸ್ಪೆಂಡ್ ಮಾಡುವದಿರಲಿ, ಅವರನ್ನು ಆಯಕಟ್ಟಿನ ಜಾಗದಿಂದ ವರ್ಗಾವಣೆ ಕೂಡ ಮಾಡುತ್ತಿಲ್ಲ. ಈ ಕಾರಣದಿಂದ ಅವರೆಲ್ಲ ಕುಳಿತಲ್ಲೇ ಆರಾಮವಾಗಿ ಸ್ವಾಹಾ ಮಾಡುವುದನ್ನು ಮತ್ತಷ್ಟು ಹೆಚ್ಚಿಸಿಕೊಂಡಿದ್ದಾರೆ.


ಕುಮಾರಸ್ವಾಮಿ ಶಾಸಕನಾಗುವ ಮುನ್ನ ಆತನಾಗಲಿ, ಇಲ್ಲಿನ ಅಧಿಕಾರಿಗಳ ಭ್ರಷ್ಟಾಚಾರವಾಗಲಿ ಹೀಗಿರಲಿಲ್ಲ. ದಲಿತ ಕುಟುಂಬದವನಾದ ಕುಮಾರಸ್ವಾಮಿಗೆ ಮೇಕನಗದ್ದೆಯಲ್ಲಿ ಒಂದೂವರೆ ಎಕರೆ ಬಂಜರು ಭೂಮಿ ಸಹಿತ ಒಂದು ಪುಟ್ಟ ಮನೆ ಇತ್ತು ಅಷ್ಟೆ. ಆದರೆ ಈಗ ಈತನ ಹೊಟ್ಟೆಯ ಜೊತೆಗೆ ಆಸ್ತಿಯೂ ಬೆಳೆಯುತ್ತಿದೆ. ಮಾತ್ರವಲ್ಲ, ಆತನ ಸುತ್ತಮುತ್ತಲಿರುವ ಆಪ್ತೇಷ್ಟರೂ ದಿನೇ ದಿನೇ ಶ್ರೀಮಂತರಾಗುತ್ತಿದ್ದಾರೆ. ಇದರ ಹಿಂದಿನ ಮರ್ಮವೇನು ಅಂತ ಹುಡುಕತೊಡಗಿದರೆ ಅಧಿಕಾರಿಗಳ ಬ್ರಹ್ಮಾಂಡ ಭ್ರಷ್ಟಾಚಾರ ಬಿಡಿಸಿಕೊಳ್ಳತೊಡಗುತ್ತದೆ.

ಇದು ನಂಬಿದರೆ ನಂಬಿ ಬಿಟ್ಟರೆ ಬಿಡಿ ಅನ್ನುವಂತ ಸುದ್ದಿಯಲ್ಲ. ತೀರಾ ಇತ್ತೀಚೆಗಷ್ಟೆ ಮೂಡಿಗೆರೆಯ ಶಿಕ್ಷಣಾಧಿಕಾರಿ ಶರಶ್ಚಂದ್ರ ಇಲಾಖೆಯಲ್ಲಿ ಭಾರಿ ಪ್ರಮಾಣದ ಭ್ರಷ್ಟಾಚಾರ ನಡೆಸಿರುವುದನ್ನು ಶಿಕ್ಷಕರ ಸಂಘದ ಪದಾಧಿಕಾರಿಗಳು ಬಯಲುಗೊಳಿಸಿದ್ದರು. ಅಕ್ಷರ ದಾಸೋಹ, ಪರಿಕರ ಖರೀದಿ ಸೇರಿದಂತೆ ಬಡ ಮಕ್ಕಳಿಗೆ ನೀಡುವ ಉಚಿತ ಪುಸ್ತಕಗಳವರೆಗೆ ಎಲ್ಲದರಲ್ಲೂ ಶರಶ್ಚಂದ್ರ ಹಣ ದುರುಪಯೋಗಪಡಿಸಿಕೊಂಡಿರುವುದನ್ನು ದಾಖಲೆಗಳ ಸಹಿತ ಶಿಕ್ಷಕರೇ ಬಹಿರಂಗಪಡಿಸಿದ್ದರು. ವಿಪರ್ಯಾಸವೆಂದರೆ ಶರಶ್ಚಂದ್ರನ ವಿರುದ್ಧ ಕ್ರಮ ತೆಗೆದುಕೊಳ್ಳುವ ಬದಲಾಗಿ ಈ ಹಗರಣವನ್ನು ಬಯಲುಗೊಳಿಸಿದ ಭುವನೇಶ್, ತೇಜಸ್, ಬಸವರಾಜು ಎಂಬುವವರೇ ಸಸ್ಪೆಂಡಾದರು. ಇವರೆಲ್ಲ ಮನೆ ಸೇರಿದ್ದರೆ ಶರಶ್ಚಂದ್ರ ಮಾತ್ರ ಯಥಾ ಸ್ಥಾನದಲ್ಲಿ ಕುಳಿತಿದ್ದಾನೆ. ಆತ ಗಡದ್ದಾಗಿ ತಿಂದುಣ್ಣುವ ಪರಿಯನ್ನು ಕಟಾಚಾರಕ್ಕೆಂದೂ ತನಿಖೆ ಮಾಡುವ ಗೋಜಿಗೆ ಯಾರು ಹೋಗಿಲ್ಲ.




ಕಳಪೆ ಕಾಮಗಾರಿಗೊಂದು ಸ್ಯಾಂಪಲ್....

ಅದಿರಲಿ, ಮೊನ್ನೆ ತಾನೇ ಸರಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಹಗರಣವೊಂದು ಬಹಿರಂಗವಾಯಿತು. ಹೈಸ್ಕೂಲು ಮತ್ತು ಕಾಲೇಜು ಎರಡನ್ನೂ ಏಕಕಾಲದಲ್ಲಿ ನಿಯಂತ್ರಿಸುತ್ತಿರುವ ಪ್ರಾಂಶುಪಾಲ ಶ್ರೀನಿವಾಸನ ಕರ್ಮಕಾಂಡವನ್ನು ಕಾಲೇಜು ಅಭಿವೃದ್ಧಿ ಸಮಿತಿಯ ಖಜಾಂಚಿ ಹರೀಶ್ ಎಂಬವರು ಬಯಲುಗೊಳಿಸಿದ್ದರು. ಆರು ತಿಂಗಳ ಹಿಂದೆ ಬ್ಯಾಂಕ್ ಖಾತೆಗೆ ಜಮಾ ಮಾಡಲು ಕೊಟ್ಟಿದ್ದ ಇಪ್ಪತ್ತೈದು ಸಾವಿರ ಹಣವನ್ನು ಶ್ರೀನಿವಾಸ್ ಸ್ವಂತಕ್ಕೆ ಬಳಸಿಕೊಂಡಿದ್ದ. ಆ ಹಣವನ್ನು ಖಾತೆಗೆ ಹಾಕಲು ಪದೇ ಪದೇ ಪೀಡಿಸತೊಡಗಿದ್ದ ಹರೀಶನನ್ನು ಕರೆದು ತನ್ನೊಂದಿಗೆ ಶಾಮೀಲಾದರೆ ಲಕ್ಷಾಂತರ ಹಣವನ್ನು ಕೊಡುತ್ತೇನೆ ಎಂದು ಆಮಿಷ ಒಡ್ಡಿದ್ದ ಶ್ರೀನಿವಾಸ್. ಅಂದು ಈ ಭ್ರಷ್ಟ ಶ್ರೀನಿವಾಸ್ "ನಮ್ಮಲ್ಲಿ 800 ವಿದ್ಯಾರ್ಥಿಗಳಿದ್ದಾರೆ. ಪ್ರತಿ ವರ್ಷ ಇವರಿಂದ ಪ್ರವೇಶ ಪಡೆಯುವಾಗ ಕಾಲೇಜು ಅಭಿವೃದ್ಧಿ ರೂಪದಲ್ಲಿ ಪ್ರವೇಶ ಶುಲ್ಕ ಐನೂರರಂತೆ ಪಡೆದುಕೊಂಡರೆ ಏನಿಲ್ಲವೆಂದರೂ ನಾಲ್ಕು ಲಕ್ಷ ರೂ.ಗಳು ಬರುತ್ತದೆ. ಅವುಗಳನ್ನು ಮುಳುಗಿಸೋಣ. ನನ್ನ ಮಾತು ಕೇಳು, ನಂಗೆ ಸಿದ್ಧರಾಮಯ್ಯ ಗೊತ್ತು. ವಿಶ್ವೇಶ್ವರ ಹೆಗ್ಡೆ ಕಾಗೇರಿ ಪರಿಚಯವಿದೆ. ಎಂ.ಎಲ್.ಎ. ಕುಮಾರಸ್ವಾಮಿ ಕೂಡ ನನ್ನ ವಿರುದ್ಧ ಮಾತನಾಡಲ್ಲ" ಅಂತೆಲ್ಲಾ ಮಾತನಾಡಿದ್ದನ್ನು ಹರೀಶ್ ಹೂಂಗುಟ್ಟುತ್ತಲೇ ಮೊಬೈಲ್ ಕ್ಯಾಮರಾ ಬಳಸಿ ಚಿತ್ರೀಕರಣ ಮಾಡಿಕೊಂಡಿದ್ದರು. ಬಳಿಕ ಮಾಧ್ಯಮಗಳ ಮುಂದೆ ಅದನ್ನು ಸಿ.ಡಿ. ರೂಪದಲ್ಲಿ ಬಿಡುಗಡೆಗೊಳಿಸಿ ಸುದ್ದಿ ಮಾಡಿದ್ದರು. ಆದರೆ ಅದರಿಂದ ಆದ ಪ್ರಯೋಜನ ಮಾತ್ರ ಶೂನ್ಯ. ಬಹುಶಃ ತನಿಖೆ ನಡೆದಿದ್ದರೆ ಶ್ರೀನಿವಾಸ್ ಕತೆ ಏನಾಗಿರುತ್ತಿತ್ತೋ ಗೊತ್ತಿಲ್ಲ. ಕಡೇ ಪಕ್ಷ ಪನಿಷ್‌ಮೆಂಟ್ ಟ್ರಾನ್ಸ್‌ಫರ್ ಕೂಡ ನಡೆಯಲಿ



ದುರಸ್ತಿಯಾದ ನಾಲ್ಕೇ ದಿನಕ್ಕೇ ಕಿತ್ತುಹೋದ ರಸ್ತೆ....

ಇನ್ನು ಕಳಪೆ ಕಾಮಗಾರಿ ಮಾಡಿ ಹಣ ಎತ್ತುವುದು, ನಕಲಿ ಬಿಲ್ ಸೃಷ್ಟಿಸಿ ಲೂಟಿ ಮಾಡುವುದು, ಕೇಂ ಸರ್ಕಾರದ ಪ್ಯಾಕೇಜಿನಲ್ಲೂ ಫಲಾನುಭವಿಗಳಿಂದ ಕಮಿಷ ಪಡೆಯುವುದು, ರಾಷ್ಟ್ರೀಯ ಉದ್ಯೋಗ ಖಾ ಯೋಜನೆಯ ಹಣವನ್ನು ದುರುಪಯೋಗಪ ಕೊಂಡಿರುವುದು.. ಇವೆಲ್ಲವೂ ಮೂಡಿಗೆರೆಯ ನಿರಂತರವಾಗಿ ನಡೆಯುತ್ತಿದೆ.



ಕುಮಾರಸ್ವಾಮಿ


ಇಂತಹ ವ್ಯಾಪಕ ಭ್ರಷ್ಟಾಚಾರದ ಒಂದು ಸ್ಯಾಂಪಲ್ ಅನ್ನು ಇಲ್ಲಿ ನೀಡಿದ್ದೇವೆ. ಬಿದರಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಲೋಕವಳ್ಳಿ ಎಂಬಲ್ಲಿ ಉದ್ಯೋಗ ಖಾತ್ರಿ ಯೋಜನೆಯ ಹಣವನ್ನು ಬಳಸಿ ಟೀಚರ್ ಕ್ವಾರ್ಟರ ನಿರ್ಮಿಸಲು ಸಂಗಮಾಪುರದ ಸಚಿನ ಎಂಬಾತನಿಗೆ ಅಕ್ರಮವಾಗಿ ಗುತ್ತಿಗೆ ನೀಡಲಾಗಿತ್ತು. ಇದಕ್ಕೆ ಬೇಕಾದ ಪೂರ್ತಿ ಹಣ 2.98 ಲಕ್ಷವನ್ನು ಕೆ ಪ್ರಾರಂಭವಾಗುವುದಕ್ಕೆ ಮುನ್ನವೇ ಬಿದರಹಳ್ಳಿ ಗ್ರಾಮ ಪಂಚಾಯತಿಯ ಆತನಿಗೆ ಕೊಟ್ಟಿತ್ತು. ಆದರೆ ಸಚಿನ್ ಕಟ್ಟಡ ಕಾಮಗಾರಿ ಕೆಲಸವನ್ನು ಅರ್ಧಕ್ಕೆ ನಿಲ್ಲಿಸಿ ಕೈ ಎತ್ತಿದ್ದಾನೆ. ಈತ ಕರ್ನಾಟಕ ರಕ್ಷಣಾ ವೇದಿಕೆಯ ಕಾರ್ಯಕರ್ತನಲ್ಲದೆ ಶಾಸಕ ಕುಮಾರಸ್ವಾಮಿಯ ಭಂಟನೂ ಆಗಿದ್ದಾನೆ. ಈಗ ತನ್ನ ತಪ್ಪಿನ ಅರಿವಾಗಿ ಗ್ರಾ.ಪಂ.ನ ಸದಸ್ಯರು ಲಬೋಲಬೋ ಬಾಯಿ ಬಡಿದುಕೊಳ್ಳುತ್ತಿದ್ದಾರೆ. ಮೊನ್ನೆ ಬಿದರಹಳ್ಳಿ ಗ್ರಾಮ ಪಂಚಾಯಿತಿಯು ಸಚಿನ್‌ನನ್ನು ಕಪ್ಪು ಪಟ್ಟಿಗೆ ಸೇರಿಸುವ ನಿರ್ಣಯ ಕೈಗೊಂಡಿದೆ.

ನಿಮಗೆ ನೆನಪಿರಲಿ, ಕೇಂದ್ರ ಸರಕಾರದ ಉದ್ಯೋಗ ಖಾತ್ರಿ ಯೋಜನೆಯಡಿ ಬರುವ ಅನುದಾನದಲ್ಲಿ ಗುತ್ತಿಗೆದಾರರ ಮೂಲಕ ಕಾಮಗಾ ಕೈಗೊಳ್ಳುವಂತಿಲ್ಲ. ಆದರೆ ತಾಲ್ಲೂಕಿನ ಎಲ್ಲಾ ಗ್ರಾ ಪಂಚಾಯತಿ ವ್ಯಾಪ್ತಿಯಲ್ಲೂ ಈ ಯೋಜನೆಯನ್ನು ಗುತ್ತಿಗೆದಾರರಿಂದಲೇ ಅನುಷ್ಠಾನಗೊಳಿಸಲಾಗುತ್ತಿದೆ. ಇದರ ಕುರಿತು ತನಿಖೆ ನಡೆದರೆ ಎಲ್ಲಾ ಅಧಿಕಾರಿ ಮನೆ ಸೇರುವುದರಲ್ಲಿ ಸಂಶಯವಿಲ್ಲ. ಆದರೆ ಅದು ನಡೆಯಬೇಕಲ್ಲ?

ಇನ್ನೊಂದು ಭ್ರಷ್ಟಾಚಾರದ ಹಗರಣ ಹೀ ಲೋಕೋಪಯೋಗಿ ಇಲಾಖೆಯಲ್ಲಿ 2005/06 ಈವರೆಗೆ ನಡೆದಿರುವ ಬಹುತೇಕ ಕಾಮಗಾರಿಗಳು ಗುಣಮಟ್ಟದಿಂದ ಕೂಡಿವೆ. ಅಲ್ಲದೆ ನಕಲಿ ಬಿಲ್‌ಗ ಲೆಕ್ಕಕ್ಕೆ ಸಿಗದಷ್ಟು ಪ್ರಮಾಣದಲ್ಲಿ ಸೃಷಿಸಲಾಗಿದೆ. ಹಲ

ಧಾರವಾಡ-ಗದಗ: ಮಂತ್ರಿಗಿರಿ ಓಟದಲ್ಲಿ ಮುನೇನಕೊಪ್ಪ, ಬಂಡಿ, ಸೀಮಾ ಮಸೂತಿ

ಅಂತೂಇಂತೂ ಜಗದೀಶ್ ಶೆಟ್ಟರ್ ಸಚಿವರಾದರು. ಸ್ಪೀಕರ್ ಸ್ಥಾನಕ್ಕೆ ಕಳಂಕ ಹಚ್ಚಿ ಹೋದ ಇವರಿಗೆ ಸಿಕ್ಕಿದ್ದು 'ಹರಕೆಯ ಕುರಿ' ಶೋಭಾ ಕರಂದ್ಲಾಜೆಯಿಂದ ಕಿತ್ತುಕೊಂಡ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ. ಶೆಟ್ಟರ್ ಸಚಿವರಾಗಬೇಕೆಂಬ ರೆಡ್ಡಿ ಬಣದ ಷರತ್ತೇನೋ ಈಡೇರಿದೆ. ಆದರೆ ತಮ್ಮ ಬಣದ ಇಂತಿಂತಹವರನ್ನು ಸಚಿವರನ್ನಾಗಿ ಮಾಡಬೇಕೆಂಬ ಷರತ್ತು ಬಾಕಿ ಇದೆ. ಈ ಷರತ್ತು ಜಾರಿಗೆ ಬರಲು ಹಲವರ ತಲೆದಂಡವಾಗಲೇಬೇಕಿದೆ. ಯಾರ್‍ಯಾರನ್ನು ಬಲಿ ಕೊಡಬೇಕೆಂದು ರೆಡ್ಡಿ ಬಣ ಆಗಲೇ ನಿರ್ಧರಿಸಿಯಾಗಿದೆ. ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿ, ಜಲಸಂಪನ್ಮೂಲ ಸಚಿವ ಬಸವರಾಜ ಬೊಮ್ಮಾಯಿ, ಸಹಕಾರ ಸಚಿವ ಲಕ್ಷ್ಮಣ ಸವದಿಗಳ ರಾಜೀನಾಮೆಗೆ ವೇದಿಕೆ ಸಿದ್ಧವಾಗಿದೆ.



ಶಂಕರ್ ಪಾಟೀಲ್

ಅವರ ಸ್ಥಾನ ತುಂಬುವವರ್‍ಯಾರು? ರೆಡ್ಡಿ ಬಣದ ಪ್ರಕಾರ, ಹೊನ್ನಾಳಿ ಶಾಸಕ ರೇಣುಕಾಚಾರ್ಯ, ಸಾಗರ ಶಾಸಕ ಗೋಪಾಲಕೃಷ್ಣ ಬೇಳೂರು ಮತ್ತು ಮೈಸೂರು ಶಾಸಕ ರಾಮದಾಸ್‌ಗೆ ಸಚಿವಗಿರಿ ಸಿಗಬೇಕು. ನಿರಾಣಿ, ಬೊಮ್ಮಾಯಿ, ಸವದಿ ಎಲ್ಲ ಉತ್ತರ ಕರ್ನಾಟಕದವರು. ಇವರ ಸ್ಥಾನಕ್ಕೆ ಮಧ್ಯ ಕರ್ನಾಟಕ, ಮೈಸೂರು ಕರ್ನಾಟಕದವರ ತಂದರೆ ಉತ್ತರ ಕರ್ನಾಟಕದ ಲಿಂಗಾಯತರಲ್ಲಿ ಅಸಹನೆ ಉಂಟಾಗುವುದು ಖಚಿತ ಎಂದು ಅರಿತಿರುವ ಮುಖ್ಯಮಂತ್ರಿ ಯಡಿಯೂರಪ್ಪ ಅದಕ್ಕಾಗಿ ಹೊಸ ಸ್ಕೆಚ್ಅನ್ನೇ ರೂಪಿಸುತ್ತಿದ್ದಾರೆ.

ರೇಣುಕ, ಬೇಳೂರು, ರಾಮದಾಸ್‌ರಂತಹ ಪರಮ ರೆಡ್ಡಿ ನಿಷ್ಠರನ್ನು ಸಚಿವರನ್ನಾಗಿ ಮಾಡದೇ, ಶೆಟ್ಟರ್‌ಗೆ ಸಾಥ್ ನೀಡಿದ ಲಿಂಗಾಯತರನ್ನು ಸಚಿವರನ್ನಾಗಿ ಮಾಡುವ ಪ್ಲಾನು ಹಾಕಿದ್ದಾರೆ ಯಡಿಯೂರಪ್ಪ.



ಕಳಕಪ್ಪ ಬಂಡಿ

ಇದರಿಂದ ನವಲಗುಂದ ಶಾಸಕ ಶಂಕರ ಪಾಟೀಲ್ ಮುನೇನಕೊಪ್ಪ ಮತ್ತು ರೋಣ ಶಾಸಕ ಕಳಕಪ್ಪ ಬಂಡಿಗಳಲ್ಲಿ ಪೈಪೋಟಿ ಶುರುವಾಗಿದೆ. ಮುನೇನಕೊಪ್ಪ ಮೂಲತಃ ಬೊಮ್ಮಾಯಿ ಬೆಳೆಸಿದ ಹುಡುಗ. ಶೆಟ್ಟರ್ ಪರ ನಿಂತು ರೆಡ್ಡಿಗಳ ರೆಸಾರ್ಟ್ ಪಾಲಾಗಿದ್ದ ಮುನೇನಕೊಪ್ಪ ಕೊನೆಗಳಿಗೆಯಲ್ಲಿ ಯಡ್ಡಿ-ರೆಡ್ಡಿ ಸಂಧಾನದಲ್ಲಿ ಬೊಮ್ಮಾಯಿ ಸಲಹೆಯಂತೆ ಓಡಾಡಿದ್ದೂ ಇದೆ. ಈಗ ಬೊಮ್ಮಾಯಿಯನ್ನು ತೆಗೆಯುವ ಸಂದರ್ಭ ಬಂದರೆ, ಬೊಮ್ಮಾಯಿಯ ಮಾಜಿ ಶಿಷ್ಯ ಮುನೇನಕೊಪ್ಪನನ್ನು ಸಚಿವನನ್ನಾಗಿ ಮಾಡಲು ಯಡ್ಡಿ ಯೋಚಿಸುತ್ತಿದ್ದಾರೆ. ಇದರಿಂದ ಶೆಟ್ಟರ್, ಬೊಮ್ಮಾಯಿ ಇಬ್ಬರೂ ಮುನಿಸಿಕೊಳ್ಳಲಾರರು. ಎಲ್ಲಕ್ಕಿಂತ ಮುಖ್ಯವಾಗಿ ಉತ್ತರ ಕರ್ನಾಟಕದ ಲಿಂಗಾಯತರಲ್ಲಿ ಬಹುಸಂಖ್ಯಾತರಾದ ಪಂಚಮಸಾಲಿ ಉಪಜಾತಿಗೆ ಮುನೇನಕೊಪ್ಪ ಸೇರಿರುವುದು ಯಡ್ಡಿಗೆ ರಾಜಕೀಯವಾಗಿ ಒಂಚೂರು ಲಾಭವೇ. ಉತ್ತರ ಕರ್ನಾಟಕದಿಂದ 17 ಪಂಚಮಸಾಲಿ ಶಾಸಕರಿದ್ದು, ಎಲ್ಲರೂ ಬಿಜೆಪಿಗಳೇ. ಈಗ ಪಂಚಮಸಾಲಿ ಪಂಗಡದ ನಿರಾಣಿಯನ್ನು ತೆಗೆಯಲೇಬೇಕಾದರೆ, ಆ ಸ್ಥಾನಕ್ಕೆ ಅದೇ ಪಂಚಮಸಾಲಿ ಬಣದ ಮುನೇನಕೊಪ್ಪನ ತರುವುದರ ಮೂಲಕ ರೆಡ್ಡಿಗಳಿಗೆ ಎದಿರೇಟು ಕೊಟ್ಟ ಹಾಗೂ ಆಗುತ್ತದೆ, ಇತ್ತ ಬಹುಸಂಖ್ಯಾತ ಪಂಚಮಸಾಲಿಗಳ ಬೆಂಬಲ ಉಳಿಸಿಕೊಂಡ ಹಾಗೂ ಆಗುತ್ತದೆ ಎಂಬುದು ಯಡ್ಡಿ ಲೆಕ್ಕಾಚಾ ಇಲ್ಲಿ ಮುನೇನಕೊಪ್ಪನಿಗೆ ಸ್ಪರ್ಧಿಯಾಗಿ ರೋಣದ ಶಾಸಕ ಕಳಕಪ್ಪ ಬಂಡಿ ಸಚಿವನಾಗಲು ಹಾತೊರೆಯುತ್ತಿದ್ದಾನೆ. ಶೆಟ್ಟರ್ ಮುನೇನಕೊಪ್ಪ ಇಬ್ಬರೂ ಧಾರವಾಡ ಜಿಲ್ಲೆಗೆ ಸೇರಿದವ ಕಳಕಪ್ಪ ಬಂಡಿ ಗದಗ ಜಿಲ್ಲೆಗೆ ಸೇರಿದ್ದು, ಇಲ್ಲಿ ಎಲ್ಲ ಬಿಜೆಪಿ ಶಾಸಕರಿದ್ದರೂ ಈ ಜಿಲ್ಲೆಗೆ ಸಚಿವಗಿರಿ ಸಿಕ್ಕಿಲ್ಲ. ಇದು ಬಂಡಿಗೆ ಪ್ಲಸ್ ಪಾಯಿಂಟ್ ಆಗಬಹುದು.



ಸೀಮಾ ಮಸೂತಿ

...ಅಭಿವೃದ್ಧಿಪಡಿಸದೇ ಬಿಲ್ ಎತ್ತಲಾಗಿದೆ. ...ಕೆಲವೆಡೆ ಒಂದೇ ರಸ್ತೆಗೆ ಎರಡು ಮೂರು ...ಯಲ್ಲಿ ಗರಿಷ್ಠ ಏಳು ಬಾರಿ ನಕಲಿ ಬಿಲ್ ಸೃಷ್ಟಿಸಿ ...ಎತ್ತಲಾಗಿದೆ. ಆದರೆ ರಸ್ತೆ ಮಾತ್ರ ಹಾಗೆಯೇ ...

...ಕೆಂಜಿಗೆ ರಸ್ತೆ ಅಭಿವೃದ್ಧಿಗೆ ಕೇವಲ 17 ಸಾವಿರ ...ಲಿದ್ದರೂ ಅದಾಮತ್ತು ಒಂದೂವರೆ ಲಕ್ಷ ರೂ.ಗಳ ... ವಸೂಲಿ ಮಾಡಲಾಗಿದೆ. ಕೆಲವು ರಸ್ತೆಗಳ ...ಬರೀಕರಣಕ್ಕೆಂದು ಲಕ್ಷಾಂತರ ರೂಪಾಯಿಗಳನ್ನು ...ಲಾಗಿದೆ. ಮತ್ತೊಮ್ಮೆ 5 ಲಕ್ಷಕ್ಕೂ ಅಧಿಕ ಮೊತ್ತವನ್ನು ...ದುರೆಮುಖದ ಡಿ.ಎಸ್. ರಾಜು ಎಂಬ ...ಗೆದಾರನಿಗೆ ಕೊಟ್ಟು ನಾಮ ಹಾಕಿಸಿಕೊಳ್ಳಲಾಗಿದೆ. ...06/07 ರಲ್ಲಿ ಕುಂದಾಪುರದ ರಾಜೇಶ್ ಕಾರಂತ್ ...ಬಾತನಿಗೆ ಕಾಮಗಾರಿಗೆಂದು ನಾಲ್ಕು ಲಕ್ಷ ರೂ.ಗಳನ್ನು ಆತನಿಂದ ಉಂಡೇನಾಮವನ್ನು ಇಕ್ಕಿಸಿಕೊಳ್ಳಲಾಗಿದೆ.

...ಇಲ್ಲಿನ ಗುತ್ತಿಗೆದಾರರಂತೂ ಇವತ್ತು ಹಣದ ...ಯಲ್ಲಿ ತೇಲಾಡುತ್ತಿದ್ದಾರೆ. ಸಿ.ಟಿ.ರವಿಯ ಆಪ್ತ ...ಥನ್ ಕುಂದೂರು ಎಂಬಾತ ಒಂದು ಕಾಲದಲ್ಲಿ ... ಇಲ್ಲದವನಾಗಿದ್ದ. ಆದರೆ ಇವತ್ತು ಆತ ...ಾಧಿಪತಿಯಾಗಿದ್ದಾನೆ. ಹಾಗೆಯೇ ಜಾವೀದ್ ...ಫ್, ಕಾರ್ಕಳದ ಉದಯ ಶೆಟ್ಟಿ, ಓಂಕಾರಪ್ಪ ...ದ ಪ್ರಕಾಶ್ ಮುಂತಾದ ಗುತ್ತಿಗೆದಾರರು ಒಂದೇ ... ಡಾಂಬರು, ಮರು ಡಾಂಬರು ಎಂದು ಸಾಕಷ್ಟು ...ವನ್ನು ಪೀಕಿದ್ದಾರೆ. ಚರಂಡಿ, ಮೋರಿ, ಸೇತುವೆ ...ವೃದ್ಧಿ ನೆಪದಲ್ಲೂ ನಕಲಿ ಬಿಲ್ ಸೃಷ್ಟಿಸಿ ಇಲ್ಲಿನ ...ದಾರರು ಕೋಟ್ಯಾಂತರ ಹಣವನ್ನು ಸ್ವಾಹಾ ...ದ್ದಾರೆ.

...ಲೋಕೋಪಯೋಗಿ ಇಲಾಖೆಯಡಿ ನಡೆದ ಈ ...ಘನಂದಾರಿ ಕಾಮಗಾರಿಗಳ ಜವಾಬ್ದಾರಿ ...ಹಿದ್ದವರು ಸಹಾಯಕ ಕಾರ್ಯಪಾಲಕ ...ನಿಯರ್ ಗಂಗಾಧರ್ ಮತ್ತು ಕಿರಿಯ ...ಮರ್ ಬಸವರಾಜು. ಇವರಿಬ್ಬರು ಸೇರಿಕೊಂಡು ...ಇಲಾಖೆಯನ್ನೇ ಮಕಾಡೆ ಮಲಗಿಸಿದ್ದಾರೆ. ...ರ ವಿರುದ್ಧ ಸೂಕ್ತ ತನಿಖೆ ನಡೆಸಿ ಕಾನೂನು ...ಗೊಳ್ಳಬೇಕಾದ ಅವಶ್ಯಕತೆಯಿದೆ.

...ರದಹಾಗೆ ಈ ಎಲ್ಲ ಹಗರಣಗಳನ್ನು ಬಿಜೆಪಿಯ ...ಂಡರೇ ಬಯಲುಗೊಳಿಸಿದ್ದಾರೆ ಎಂದರೆ ಇಲ್ಲಿನ ...ಹೇಗಿರಬಹುದು ಎಂಬುದನ್ನು ನೀವೇ ಊಹಿಸಿ. ...ಸ್ ಮತ್ತು ಜೆಡಿಎಸ್ ಗೊರಕೆ ನಿದ್ರೆಯಲ್ಲಿ ...ದಾಗಿರುವ ಈ ಕಾಲದಲ್ಲಿ ಮೂಡಿಗೆರೆ ಮಟ್ಟಿಗೆ ...ಮ ಭ್ರಷ್ಟ ಆಡಳಿತದ ವಿರುದ್ಧ ಬಿಜೆಪಿಯ ...ಡರೇ ನಾಯಕತ್ವ ವಹಿಸಿದ್ದಾರೆ!

...ಷ್ಟೆಲ್ಲ ನಡೆಯುತ್ತಿದ್ದರೂ ತನಗೇನು ...ತ್ತಿಲ್ಲವೆಂಬಂತೆ ವರ್ತಿಸುತ್ತಿರುವ ಶಾಸಕ ...ಸ್ವಾಮಿ ಬಗ್ಗೆಯೇ ಜನಸಾಮಾನ್ಯರಲ್ಲಿ ಗುಮಾನಿ ...ದಾಗಿದೆ. ಇದು ಹೀಗೇ ಮುಂದುವರೆದರೆ, ...ದ ಚುನಾವಣೆಯಲ್ಲಿ ಕುಮಾರಸ್ವಾಮಿ ಮನೆಗೆ ...ಹೋದು ಖಚಿತ! ●

...ಶೋಭಾ ಸ್ಥಾನಕ್ಕೆ ಸೀಮಾ?

...ಸ್ ಪರ ಎಂದು ಹೈದರಾಬಾದ್ ರೆಸಾರ್ಟ್... ...ಧಾರವಾಡ ಶಾಸಕಿ ಸೀಮಾ ಮಸೂತಿಯೀಗ ... ಕೋಟಾದಲ್ಲಿ ಸಚಿವೆಯಾಗುವ ಕನಸು ...ದ್ದಾರೆ. ಶೋಭಾರಿಂದ ತೆರವಾದ ಸ್ಥಾನಕ್ಕೆ ... ಮಲ್ಲಿಕಾರನ್ನು ತಂದರೆ ಶೋಭಾಗೆ ಸ್ಥಾನೆ ...ಸುತ್ತದೆ. ತನ್ನೂರವರು ತನ್ನ ದಾಟ ಹೋಗಬಾರ ...ಸ್ವಿ ವಿಮಲಗೌಡ ನೇರ ಜನಬೆಂಬಲವಿಲ್ಲದ ... ಮಾತ್ರ. ಈ ಪಾಯಿಂಟುಗಳೇ ಸೀಮಾಳಲ್ಲಿ ...ಹುಟ್ಟಿಸಿವೆ. ಈಗ ಯಡ್ಡಿಯೇ ನಮ್ಮ ನಾಯಕ ...ಸೀಮಾ ಮೊನ್ನೆ ಯಡ್ಡಿ ಹುಬ್ಬಳ್ಳಿಗೆ ಬಂದಾಗ ...ರ್ಗಸ್ಕೋ ಶಿರಸಾಷ್ಟಾಂಗ ನಮಸ್ಕಾರ ಹಾಕಿ ...ಎಂದು ಯಡ್ಡಿಯ ಗುಣಗಾನ ಮಾಡುತ್ತ ...ದರು. ಧಾರವಾಡ ಜಿಲ್ಲೆಯ ಸೀಮಾ ಮಸೂ... ...ಸಿದರೆ ಅದೇ ಜಿಲ್ಲೆಯ ಮುನೇನಕೊಪ್ಪನಿಗೆ ... ಕಟಕಷ್ಟ ಬಂದಿಗೆ ಅನುಕೂಲವಾಗಬಹುದು


...ಂದು ಈಕ್ವೆಷನ್‌ಗಳು? ಏನೊಂದು ...ಗಳು? ಜೊತೆಗೆ ರೆಡ್ಡಿಗಳ ಪರಮಾಪ್ತರಾದ ...ರ್, ರಾಮದಾಸ್, ಬೇಳೂರುಗಳ ಫುಲ್ ...ರಾಟ, ಹೋರಾಟ... ಇಂತಹ ಟೈಮ್ನಲ್ಲಿ ...ಯಾರಿಗೆ ಸಚಿವಗಿರಿ ಕೊಡುತ್ತಾರೋ ಎಂಬುದು ...ಗೂ ಪತ್ತ ಗೊತ್ತಿಲ್ಲ, ರೆಡ್ಡಿಗಳಿಗೂ ಗೊತ್ತಿಲ್ಲ....

● ಹುಬ್ಬಳ್ಳಿಯಾಂವ

ಉತ್ತರ ಕನ್ನಡ: ಪವರ್‌ಗಾಗಿ ಅಸ್ನೋಟಿಕರ್-ಕಾಗೇರಿ ಕಾದಾಟ!

ಉತ್ತರ ಕನ್ನಡ ಬಿಜೆಪಿಯಲ್ಲಿ ಯಡ್ಡಿ-ರೆಡ್ಡಿ ಬಣದ ಬುರ್ನಾಸ್ ಬಡಿದಾಟದ ಅಡ್ಡ ಪರಿಣಾಮಗಳ ವಕ್ರೀಭವನ ಆಗತೊಡಗಿದೆ. ಬೀದಿ ಕಾಳಗ, ಬ್ರಾಹ್ಮಣ-ಶೂದ್ರ ಜಗಳಕ್ಕೆ ಫೇಮಸ್ ಆಗಿರುವ ಜಿಲ್ಲಾ ಬಿಜೆಪಿಯಲ್ಲೀಗ ಅಡ್ಡ ಕಸುಬಿ ಮಂತ್ರಿಗಳಿಬ್ಬರ ಗ್ಯಾಂಗ್‌ವಾರ್ ಶುರುವಾಗಿದೆ. ರೆಡ್ಡಿಗಾರುಗಳ ನಿಷ್ಠಾವಂತ ಬಂಟ ಆನಂದ್ ಅಸ್ನೋಟಿಕರ್ ಮತ್ತು ಅಲ್ಲೂಸಲ್ಲದ-ಇಲ್ಲೂ ಇಲ್ಲದ ಹೇತ್ಲಾಂಡಿ ಕಾಗೇರಿ ಮಾಣಿ ಜಿಲ್ಲಾ ಉಸ್ತುವಾರಿ ಮಂತ್ರಿಗಿರಿಗಾಗಿ ಕೊರಳ ಪಟ್ಟಿ ಹಿಡಿದುಕೊಂಡು ಕುಸ್ತಿಗಿಳಿದಿದ್ದಾರೆ.

ಕಾಂಗ್ರೆಸ್ ಎಮ್ಮೆಲ್ಲೆ ಆಗಿದ್ದ ಅವಿವೇಕಿ ಅಸ್ನೋಟಿಕರ್ ರೆಡ್ಡಿಗಳಿಂದ ಬ್ರೈನ್ ಸರ್ಜರಿ ಮಾಡಿಸಿಕೊಂಡು ಮಿನಿಸ್ಟರ್ ಆಗುತಿದ್ದಂತೆಯೇ ಒರಿಜಿನಲ್ ಚೆಡ್ಡಿ ವಿಶ್ವೇಶ್ವರ್ ಹೆಗಡೆ ಕಾಗೇರಿ ಸರ್ವಸ್ವವನ್ನೂ ಕಳೆದುಕೊಂಡಂತೆ ಚಡಪಡಿಸ ತೊಡಗಿದರು. ಅಸ್ನೋಟಿಕರ್‌ನ ಅದಿರು ದುಡ್ಡಿನ ಅಹಂಕಾರ, ತೋಳ್ಬಲ, ಅಧಿಕಪ್ರಸಂಗವೆಲ್ಲ ಗೊತ್ತಿದ್ದ ಕಾಗೇರಿಗೆ ತಾನಿನ್ನು ನಾಮಕಾವಸ್ತೆ ಎಂದರ್ಥವಾಗಿ ಹೋಗಿತ್ತು. ಪ್ರಮಾಣವಚನ ಮುಗಿಸಿ ಅಸ್ನೋಟಿಕರ್ ಜಿಲ್ಲೆಗೆ ಬಂದವನೇ ಉಸ್ತುವಾರಿ ಸಚಿವ ಕಾಗೇರಿಗೆ ಕೇರ್ ಮಾಡದೆ ಓವರ್‌ಟೇಕ್ ಮಾಡಲಾರಂಭಿಸಿಬಿಟ್ಟ.



ಕಾಗೇರಿ

ಸೀನಿಯರ್ ಸಂಘ ಪರಿವಾರಿ ಕಾಗೇರಿಯಂಥ ಕಾಗೇರಿಯನ್ನೇ ಪಳಗಿಸಲು ಮರಿ ಮಂತ್ರಿ ಅಸ್ನೋಟಿಕರ್ ಎಂಬ ವಲಸೆಗಾರ ಸ್ಕೆಚ್ ಹಾಕುವುದೆಂದರೇನು? ಅಕಟಕಟಾ! ಇದಷ್ಟೇ ಸಾಕಾಯ್ತು ಕಾಗೇರಿಯ ಹೈಗರ ಬಳಗಕ್ಕೆ ಬೆಂಕಿ ಬೀಳಲು. ಅಧಿಕಾರಿಗಳ ಸಭೆ ಕರೆದು ಕರಾವಳಿಯ ಐದು ತಾಲ್ಲೂಕು ಮತ್ತು ಘಟ್ಟದ ಮೇಲಿನ ಜೋಯಿಡಾ ತಾಲ್ಲೂಕಿನತ್ತ ಕಾಗೇರಿ ತಲೆಹಾಕದಂತೆ ಮಾಡಿಬಿಟ್ಟ ಅಸ್ನೋಟಿಕರ್. ಇದರಿಂದ ಕಂಗಾಲಾದ ಕಾಗೇರಿ ಜಿಲ್ಲಾ ಕೇಂದ್ರ ಕಾರಾವಾರಕ್ಕೆ ಕಾಲಿಡುವುದನ್ನೇ ಕಡಿಮೆ ಮಾಡಿಬಿಟ್ಟರು. ಜಿಲ್ಲಾ ಕೇಂದ್ರ ಅಸ್ನೋಟಿಕರ್‌ನ ಕೈವಶವಾಗಿ ಹೋಯ್ತು. ಡಿಸಿ, ಎಸ್ಪಿ, ಜಿಪಂ ಸಿಇಓಗಳೆಲ್ಲ ಕಾಗೇರಿಗಿಂತ ಈ ಪುಂಡ ಪೋರನಿಗೇ ಲಾಯಲ್ ಆಗಿ ಹೋದರು; ಡೊಗ್ಗು ಸಲಾಮು ಆನಂದ್‌ಗೆ ಬೀಳಹತ್ತಿತು.

ಆಗ ಶುರುವಾಯ್ತು ನೋಡಿ ಮಾಣಿ-ಪೋರನ ಮಧ್ಯೆ ಪ್ರಚ್ಛನ್ನ ಶೀತಲ ಸಮರ. ಕಾಗೇರಿ ಉಸ್ತುವಾರಿ ಪವರ್‌ನಿಂದ ಅಸ್ನೋಟಿಕರ್‌ನ ಬಾಲ ಕತ್ತರಿಸಲು ಹವಣಿಸ ಹತ್ತಿದರು. ಆದರೆ ಸರ್ಕಾರ ನಿಯಂತ್ರಕರಾದ ರೆಡ್ಡಿಗಳ ಕೃಪಾಕಟಾಕ್ಷದಿಂದ ಅಸ್ನೋಟಿಕರ್ ಕಾಗೇರಿಗೆ ಟಾಂಗ್ ಕೊಡತೊಡಗಿದರು. ಈ ಸಂಘರ್ಷ ಎಲ್ಲಿಗೆ ಹೋಯ್ತೆಂದರೆ, ಕಾಗೇರಿಯ ಮಂತ್ರಿಗಿರಿ ಆತನ ತವರು ಕ್ಷೇತ್ರ ಸಿರ್ಸಿ-ಸಿದ್ದಾಪುರಕ್ಕಷ್ಟೇ ಸೀಮಿತ ಆಗಿಹೋಯ್ತು. "ಸಿರ್ಸಿ ಸಚಿವ"ನೆಂದೇ ಅಡ್ಡಬಿರುದು ಧರಿಸಿದ ಕಾಗೇರಿ ತನ್ನ ಖಾಸಾ ತಮ್ಮನನ್ನೇ ಏಜೆಂಟನಾಗಿಸಿಕೊಂಡು ವರ್ಗಾವರ್ಗಿ ದಂಧೆಯ ಅಂಗಡಿ ತೆರೆದುಕೊಂಡು ಕೂತುಬಿಟ್ಟರು.


ಇತ್ತ ಕರಾವಳಿಯಲ್ಲಿ ಆನಂದ್ ಅಸ್ನೋಟಿಕರ್‌ನದೇ ದರ್ಬಾರಾಯ್ತು. ಭಾಸ್ಕರ್ ನಾರ್ವೇಕರ್ ಎಂಬ ಸ್ವಜಾತಿ ಭಂಡನನ್ನು ದಲ್ಲಾಳಿಯಾಗಿಸಿಕೊಂಡು ಅಸ್ನೋಟಿಕರ್ ಬೇಕಾಬಿಟ್ಟಿ ವರ್ಗಾವರ್ಗಿ, ಅದಿರು ಅವ್ಯವಹಾರ, ಲೇವಾದೇವಿ ಶುರು ಹಚ್ಚಿಕೊಂಡ. ದಿನಕ್ಕೊಂದು 'ರಂಗೀಲಾ' ಕತೆಗಳು ಅಸ್ನೋಟಿಕರ್ ಸುತ್ತ ಹಬ್ಬಿತು. ಆತ ಸಿಆರ್‌ಝಡ್ ಕಾನೂನು ಕಡೆಗಣಿಸಿ ಸಮುದ್ರ ತೀರದಲ್ಲಿ ಸ್ಟಾರ್ ಹೋಟೆಲ್ ಕಟ್ಟಲಿ, ಕಾಳಿ ಉಸುಕು ಕದ್ದು ವಿದೇಶಕ್ಕೆ ಕಳಿಸಲಿ, ಕಾರವಾರ-ಬೇಲೀಕೇರಿ ಬಂದರಿನಲ್ಲಿ ಗೋಲ್‌ಮಾಲ್ ಮಾಡಲಿ ಕೇಳುವರೇ ಇಲ್ಲದಾಯ್ತು.

ಅಸ್ನೋಟಿಕರ್ ಈ ಪರಿ ಲೂಟಿ ಮಾಡುತ್ತಿದ್ದಾಗ ಜಿಲ್ಲಾ ಉಸ್ತುವಾರಿಗ್ಯಾಕೋ ತಡೆಯಲಾಗಲಿಲ್ಲ ಆಸ್ತಿ-ಕಾಸಿನ ವ್ಯಾಮೋಹ! ಸುಬಗ-ಪ್ರಾಮಾಣಿಕ ಎಂದೆಲ್ಲ "ಆರೋಪ" ಹೊತ್ತಿದ್ದ ಕಾಗೇರಿಯೂ ವರ್ಗಾವರ್ಗಿ ಬಿಜಿನೆಸ್‌ನಿಂದ ಕೊಪ್ಪರಿಗೆ ಕಾಸು ಕಮಾಯಿಸಿದರು. ಕೋಟಿಗಟ್ಟಲೆ ದುಡ್ಡು ಕೊಟ್ಟು ಜಲಪಾತಗಳಿರುವ ಎಕರೆಗಟ್ಟಲೆ [illegible] ಬರೂರು ಎಂಬಲ್ಲಿ ಖರೀದಿಸಿದರು. ಇಲ್ಲೊಂದು ಐಷಾರಾಮಿ ರೆಸಾರ್ಟ್ ಕಟ್ಟುವ ಕನಸು ಕಾಣತೊಡಗಿದರು.

ಘಟ್ಟದ ಮೇಲಂತೂ ಭ್ರಷ್ಟಾತಿಭ್ರಷ್ಟ ಅಧಿಕಾರಿಗಳದೇ ಆಧಿಪತ್ಯವಾಗಿಹೋಯ್ತು.

ದುರಂತವೆಂದರೆ ಈ ಜನದ್ರೋಹಿ ಮಂತ್ರಿದ್ವಯರ ಒಣಪ್ರತಿಷ್ಠೆ ಮತ್ತು ಲೂಟಿ ಪೈಪೋಟಿಯಿಂದ ಉತ್ತರ ಕನ್ನಡದ ಅಭಿವೃದ್ಧಿಯೆಂಬುದು ಹಳಿತಪ್ಪೇ ಹೋಯ್ತು. ಮೊದಲೇ ಉತ್ತರ ಕಾಣದ ಜಿಲ್ಲೆಯಂತಾಗಿರುವ ಉತ್ತರ ಕನ್ನಡ ಜನಪರ ನೀತಿ-ನಿಲುವುಗಳಿಲ್ಲದ ಅಧಿಕಾರ-ಅಂತಸ್ತಿನ ದುರಾಸೆಯ ಪುಡಾರಿಗಳ ಕೈಯಲ್ಲಿ ಸಿಲುಕಿ ತತ್ತರಿಸಿ ಹೋಯ್ತು! ಮುನ್ಸಿಪಾಲ್ಟಿ, ಗ್ರಾಮ ಪಂಚಾಯತ್ ನಿರ್ಮಿಸುವ ಕಕ್ಕಸು ಗಟಾರ ಉದ್ಘಾಟನೆಗೂ ಸಂಭ್ರಮದಿಂದ ಓಡುವ ಕಾಗೇರಿಗಾದರೆ ಕಾರವಾರ-ಅಂಕೋಲಾ-ಜೋಯಿಡಾಕ್ಕೆ ತಾನು ಪ್ರಶ್ನಾತೀತ ಮಾಂಡಲೀಕನೆಂಬ ದುರಹಂಕಾರ ಅಸ್ನೋಟಿಕರ್‌ಗೆ.

ಅಕಸ್ಮಾತ್ "ಉಸ್ತುವಾರಿ" ಜಿಲ್ಲಾ ಕೇಂದ್ರ (ಕಾರವಾರ)ಕ್ಕೆ ಬರ್ತಾರಂದ್ರೆ ಅಂದು ಅವಶ್ಯವಾಗೇ "ಸ್ಥಳೀಯ" ಮಂತ್ರಿ ಅಸ್ನೋಟಿಕರ್ ಜಾಗ ಖಾಲಿ ಮಾಡುತ್ತಿದ್ದರು. ಕಾಗೇರಿಗೆ ನೀನು ನಂಗೇನೂ ಅಲ್ಲ ಎಂದು ಛಾಲೆಂಜ್ ಮಾಡುವ ಭಂಡಾಟ ಅಸ್ನೋಟಿಕರ್ ಮಂತ್ರಿಯಾದ ಗಳಿಗೆಯಿಂದಲೇ ಚಾಲೂ ಮಾಡಿದ್ದರು. ಕಾಗೇರಿಯ ಶಿಕ್ಷಣ ಇಲಾಖೆಯ ಕಾರ್ಯಕ್ರಮ ಕಾರವಾರ-ಅಂಕೋಲೆಯಲ್ಲಿ ನಡೆದರೂ ಅದರಲ್ಲಿ ಅಸ್ನೋಟಿಕರ್ ಮಾತ್ರ ಮಿಂಚುತ್ತಿದ್ದು, ಕನಿಷ್ಠ ಕರೆಯೋಲೆಯಲ್ಲೂ ಶಿಕ್ಷಣ ಮಂತ್ರಿಯ ಹೆಸರು ಇರುತ್ತಿರಲಿಲ್ಲ. ಪ್ರೋಟೋಕಾಲ್ ಪಾಲಿಸುವ ಅಧಿಕಾರಿಗಳಿಗೆ ಅಸ್ನೋಟಿಕರ್ ಹೆಡೆಮುರಿ ಕಟ್ಟಿ ಅರಬ್ಬೀ ಸಮುದ್ರಕ್ಕೆ ಎಸೆಯುತ್ತಿದ್ದರು.



ಅಸ್ನೋಟಿಕರ್

ಕಾಗೇರಿ ಸಂಘಪರಿವಾರದ ಬಲದಿಂದ ಡಿಸಿ-ಎಸ್ಪಿಯನ್ನು ಒಂಚೂರು ಪಳಗಿಸಿಕೊಂಡಿದ್ದರು. ತನ್ಮೂಲಕ ಅಸ್ನೋಟಿಕರ್‌ಗೆ ಒಳಗೊಳಗೇ ಗುದ್ದು ಕೊಡುತ್ತಿದ್ದರು. ಇದರಿಂದ ಕೆರಳಿದ ಅಸ್ನೋಟಿಕರ್ ಕಾಗೇರಿಯ ಶಿಕ್ಷಣ ಇಲಾಖೆ ನಿರ್ಮಿಸುತ್ತಿದ್ದ ಕಟ್ಟಡ ಒಂದನ್ನು ನಗರಾಭಿವೃದ್ಧಿ ಪ್ರಾಧಿಕಾರದಿಂದ "ಅಕ್ರಮ" ಎಂದ್ಹೇಳಿಸಿ ಬುಲ್ಡೋಜರ್ ಹಾಯಿಸಿ ಕೆಡವಿಸಿದ್ದರು. ಕೆಡಿಎ ಅಧ್ಯಕ್ಷ ಅಮಲೇಶ್ವರ ಅಸ್ನೋಟಿಕರ್‌ನ ಖಾಸಾ ಚೇಲ; ಯಾವಾಗ ಶಿಕ್ಷಣ ಇಲಾಖೆಯ ಕಟ್ಟಡ ನೆಲಕ್ಕುರುಳಿತೋ, ಆಗ ಕಾಗೇರಿ ತನ್ನ ವೈರಿ ಅಸ್ನೋಟಿಕರ್‌ನ ಅಸಲಿಗೇ ಕೈಹಾಕಿದರು!

ಕೋಟ್ಯಂತರ ರೂಪಾಯಿ ವ್ಯವಹಾರದ ಕಾಳಿ ನದಿ ಉಸುಕು ಗಣಿಗಾರಿಕೆಯನ್ನು ಜಿಲ್ಲಾಡಳಿತದಿಂದ ಬಂದ್ ಮಾಡಿಸಿದರು ಉಸ್ತುವಾರಿ ಮಂತ್ರೀಜಿ! ಈ ಉಸುಕು ಎತ್ತಿ ಗೋವಾ, ಮಾಲ್ಡೀವ್ ಮುಂತಾದೆಡೆ ಕಳಿಸಿ ಕೊಳ್ಳೆ ಹೊಡೆವ ಗ್ಯಾಂಗೊಂದು ಕಾರವಾರದಲ್ಲಿದೆ. ಈ ಪಡೆಗೆ ಆನಂದ್ ಅಸ್ನೋಟಿಕರ್‌ನೇ ಗಾಡ್‌ಫಾದರ್. ಸದ್ರಿ ದಂಧೆಯಲ್ಲಿ ಮರಿ ಮಂತ್ರಿಯ ಬೇನಾಮಿ ಪಾಲುದಾರಿಕೆಯೂ ಇದೆ. ಆಗ ಅಸ್ನೋಟಿಕರ್ ಕುದ್ದು ಹೋದ. ಆದರೆ ಸಿಎಂ ಯಡ್ಡಿ ಜತೆ ಕಾಗೇರಿಗಿದ್ದ ಸಖ್ಯದಿಂದಾಗಿ ಅಸ್ನೋಟಿಕರ್ ಆಟ ನಡೆಯಲೇ ಇಲ್ಲ.

ಒಳಗೊಳಗೇ ಬುಸುಗುಡುತ್ತಿದ್ದ ಅಸ್ನೋಟಿಕರ್ ಗಾಯದ ಮೇಲೆ ಕಾಗೇರಿ ಯಡ್ಡಿ-ರೆಡ್ಡಿ ಕಾಳಗಕ್ಕೆ ಸ್ವಲ್ಪ ಮುಂಚೆ ಬರೆ ಹಾಕಿದ್ದರು. ಅರಣ್ಯ ಕಾಯ್ದೆ ನೆಪದಿಂದ ಬಿಳಿ ಕಲ್ಲು-ಕೆಂಪು ಕಲ್ಲು ಕ್ವಾರಿಗೂ ಕಡಿವಾಣ ಹಾಕಿದ್ದರು. ಈ ಕ್ವಾರಿ ಕಿಂಗ್‌ಗಳಲ್ಲಿ ಹೆಚ್ಚಿನವರು ಅಸ್ನೋಟಿಕರ್ ಶಿಷ್ಯ ಕೋಟಿಯವರೇ. ಸಿಎಂ-ಉಸ್ತುವಾರಿಗಳ ಮೇಲೆ ಸಿಟ್ಟಿಗೆದ್ದ ಅಸ್ನೋಟಿಕರ್, ಯಾವಾಗ ರೆಡ್ಡಿಗಳು ಯಡ್ಡಿ ಮೇಲೆ ಮುರುಕೊಂಡು ಬಿದ್ದರೋ ಆವಾಗ ಸಕ್ರಿಯವಾಗೇ ಭಿನ್ನಮತ ನಾಟಕದಲ್ಲಿ ಪಾತ್ರ ವಹಿಸಿದ್ದರು. ಒಂದಿಷ್ಟು ರೆಬೆಲ್ ಶಾಸಕರನ್ನು ಗೋವಾದ ರೆಸಾರ್ಟ್‌ನಲ್ಲಿ ಅಸ್ನೋಟಿಕರ್ ಇಟ್ಟುಕೊಂಡು ತನ್ನ ತಾಕತ್ತನ್ನು ಕಾಗೇರಿಗೆ ತೋರಿಸಿದರು.

ಯಡ್ಡಿ-ರೆಡ್ಡಿ ರಂಪಕ್ಕೆ ಅಲ್ಪ ವಿರಾಮ ಬೀಳುತ್ತಿದ್ದಂತೆಯೇ ಕ್ಷೇತ್ರಕ್ಕೆ ವಕ್ಕರಿಸಿದ ಅಸ್ನೋಟಿಕರ್ ಬರುಬರುತ್ತಲೇ ಉಸ್ತುವಾರಿ ಕಾಗೇರಿ ವಿರುದ್ಧ ಬಹಿರಂಗವಾಗಿಯೇ ತಿರುಗಿ ಬಿದ್ದುಬಿಟ್ಟ! "ನನ್ನ ಕ್ಷೇತ್ರದಲ್ಲಿ ಉಸ್ತುವಾರಿ-ಪಿಸ್ತುವಾರಿ ಅವಶ್ಯ ವಿಲ್ಲ... ನನ್ನ ಕ್ಷೇತ್ರದಲ್ಲಿ ಉಸ್ತುವಾರಿ ಮೂಗು ತೂರಿಸಿದರೆ ಬೆಂಬಲಿಗರ ಜತೆ ಬೀದಿಗಿಳಿಯಬೇಕಾಗ್ತದೆ... ಅಭಿವೃದ್ಧಿಗೆ ಅನಿವಾರ್ಯವಾದ ಉಸುಕು-ಕಲ್ಲು ಕ್ವಾರಿ ಯಾಕೆ ಬಂದ್ ಮಾಡಿದ್ದಾರೆ...." ಎಂದೆಲ್ಲ ಒಂದೇಸಮನೆ ಅಸ್ನೋಟಿಕರ್ ಬಹಿರಂಗವಾಗೇ ಕಾಗೇರಿಯನ್ನು ಮೂದಲಿಸಿದ್ದಾನೆ. ಅಷ್ಟೇ ಅಲ್ಲ, ಹಿಂಬಾಲಕರೆದುರೆ ಕಾಗೇರಿಗೆ ಫೋನಾಯಿಸಿ ಬಾಯಿಗೆ ಬಂದಂತೆ ದಬಾಯಿಸಿದ್ದಾನೆ. ಇದು ಕಾರವಾರ ಅಂಕೋಲೆಯ ಗೂಡಂಗಡಿ ಸರ್ಕಾರಿ ಕಚೇರಿಯಲ್ಲೂ ಮಾರ್ದನಿಸುವಂತೆಯೂ 'ಗಿಮಿಕ್' ಮಾಡಿದ್ದಾನೆ. ಅಲ್ಲಿಗೆ ಯಡ್ಡಿ ಬಣದ ಮೇಲೆ ತನ್ನ ಬಾಸ್ ರೆಡ್ಡಿಗಾರುಗಳು ದಿಗ್ವಿಜಯ ಸಾಧಿಸಿದ್ದಾರೆ.... ಇನ್ನು ಜಿಲ್ಲೆಗೆ ನಾನೇ ಕಿಂಗ್ ಎಂಬ ಸಂದೇಶವೂ ಕಾಗೇರಿಯ ಹೈಗರ ಚೆಡ್ಡಿ ಡೇರೆಗೆ ಅಸ್ನೋಟಿಕರ್ ರವಾನಿಸಿದಂತಾಗಿದೆ....

ಒಟ್ಟಿನಲ್ಲಿ ಹೊಡೆದಾಟ, ಎಳೆದಾಟ, ದೊಂಬಿ, ದಾದಾಗಿರಿ ಪಕ್ಷ ಎಂದೇ ಗುರುತಿಸಿಕೊಂಡಿರುವ ಉತ್ತರ ಕನ್ನಡ ಬಿಜೆಪಿಯ "ಜಗಳಕಾರಣ" ಈಗ ಮತ್ತೊಂದು ಮಗ್ಗುಲಿಗೆ ಹೊರಳಿದೆ. ಬಿಜೆಪಿಯ ಮಂತ್ರಿ ಮಾನ್ಯರೇ ಕಚ್ಚೆ ಕಟ್ಟಿಕೊಂಡು ಸಾರ್ವಜನಿಕರೆದುರೆ ತೊಡೆತಟ್ಟುತ್ತ ಗುರಾಯಿಸುತ್ತಿದ್ದಾರೆ. ಈ ವರದಿ ಸಿದ್ಧವಾಗುತ್ತಿದ್ದ ವೇಳೆಗೆ, ಗುಡ್ಡ ಕುಸಿದು ಅಪಾರ ಸಾವು ನೋವಾಗಿದ್ದ ಕಾರವಾರದ 'ಜರಿವಾಡ' ಗ್ರಾಮ ಸ್ಥಳಾಂತರ ಕಾಮಗಾರಿಗೆ ಉಸ್ತುವಾರಿ ಮಂತ್ರಿ ಕಾಗೇರಿ ಚಾಲನೆ ನೀಡುವಾಗ ಸ್ಥಳೀಯ ಶಾಸಕ-ಕಂ ಮಂತ್ರಿ ಅಸ್ನೋಟಿಕರ್ ಬೇಕೆಂತಲೇ ಬೆಂಗಳೂರು ಸೇರಿಕೊಂಡಿದ್ದ. ಮಂತ್ರಿಗಳ ಈ ಜಿದ್ದು ಮೆಗಾ ಧಾರಾವಾಹಿ ಆಗುವ ಸಂಕೇತ ರವಾನಿಸಿದೆ.

ಈ ಸೀರಿಯಲ್‌ನ ಕುತೂಹಲವೆಂದರೆ, ಗೆಲ್ಲುವುದು ಸಂಘಪರಿವಾರದ ಕಾಗೇರಿಯೋ? ರೆಡ್ಡಿ ಬಳಗದ ಅಸ್ನೋಟಕರನೋ? ಉತ್ತರ ಕನ್ನಡಕ್ಕಿದು ದೊಡ್ಡ ಸೋಲೆಂದು ಬಿಜೆಪಿ ಗೆಲ್ಲಿಸಿದ ಮತದಾರ ಬಾಯಿ-ಬಾಯಿ ಬಡಿದುಕೊಳ್ಳುತ್ತಿದ್ದಾನೆ!

● ವಿವೇಕಾನಂದ ತಾಂಡೇಲ

ಗಣಿಗಾರಿಕೆಯೇ ನಿರ್ಣಾಯಕ!

ಕಾರವಾರ ಮತ್ತು ಅಂಕೋಲಾ ತಾಲ್ಲೂಕುಗಳ ಕಾಳಿ ನದಿ ಉಸುಕು, ಅರಣ್ಯ ವಲಯದಲ್ಲಿರುವ ಕೆಂಪು-ಬಿಳಿ ಕಲ್ಲು ಗಣಿಗಳ ವ್ಯವಹಾರದ ಟರ್ನ್‌ಓವರ್ ಕೋಟಿ-ಕೋಟಿ ರೂಪಾಯಿಗಳು. ಈ ದೋನಂಬರ್ ದಂಧೆವಾರರೆಲ್ಲಾ ಮಂತ್ರಿ ಅಸ್ನೋಟಿಕರ್‌ನ ಬಾಲಕ-ಮುಂಬಾಲಕರು. ಈ ಉದ್ಯಮದಿಂದ ಅಸ್ನೋಟಿಕರ್ ಆಸ್ಥಾನಕ್ಕೆ ಲಕ್ಷಾಂತರ ಅಕ್ರಮ ಆಮದಾನಿ ನಿಯಮಿತವಾಗಿ ಹೋಗುತ್ತಿತ್ತು.

ಆದರೆ ಕೆಲ ತಿಂಗಳ ಹಿಂದೆ ಈ ಉಸುಕು, ಕಲ್ಲು ಗಣಿಗಳನ್ನು ಉಸ್ತುವಾರಿ ಮಂತ್ರಿ ಕಾಗೇರಿ ಬಂದ್ ಮಾಡಿಸಿದ್ದರು. ಅಸ್ನೋಟಿಕರ್ ಈ ಗಣಿಗಾರಿಕೆ ಪುನರಾರಂಭಿಸಲು ಮಾಡದ ಕಸರತ್ತೇ ಇಲ್ಲ. ಆದರೆ ಏನೂ ಆಗಲೇ ಇಲ್ಲ, ಕಾರಣ ಸಿಎಂ ಯಡ್ಡಿ ಕಾಗೇರಿ ಬೆನ್ನಿಗೆ ನಿಂತಿದ್ದರು. ಈಗ ಯಡ್ಡಿ ವೀಕಾಗಿ ಅಸ್ನೋಟಿಕರ್ ಗುರುಗಳಾದ ರೆಡ್ಡಿಗಳು ಆಡಳಿತದಲ್ಲಿ ಸ್ಟ್ರಾಂಗ್ ಆಗಿದ್ದಾರಲ್ಲ! ಹೀಗಾಗಿ ಅಸ್ನೋಟಿಕರ್ "ತಕ್ಷಣ ಕಾಗೇರಿ ಕ್ವಾರಿ-ಗಣಿ ಶುರು ಮಾಡಿಸದಿದ್ದ, ಬೀದಿಗಿಳಿದು ಪ್ರತಿಭಟಿಸ್ತೇನೆ.." ಎಂದು ಧಮಕಿ ಹಾಕಿದ್ದಾನೆ.

ಜಿಲ್ಲೆಯ ಉಸುಕು-ಕಲ್ಲು ಗಣಿಗಳು ಕಾಗೇರಿ ಬಲಿಪಶುವಾಯೋ? [illegible] ನಿರ್ಧರಿಸಲಿವೆ. ಎಂಥ ನಾಟಗೇಡು ಅಲ್ಲವೆ? ●



ಇಂದಿರಾ ಗಾಂಧಿಯವರ ಕೊಲೆಯಾದ ನಂತರದ ಮೂರು ದಿನಗಳ ಕಾಲ ದೆಹಲಿಯಲ್ಲಿ ನಡೆದ ಘರ್ಷಣೆಯಲ್ಲಿ ಕಾಂಗ್ರೆಸ್‌ನ ಗೂಂಡಾಗಳು ಸುಮಾರು ನಾಲ್ಕು ಸಾವಿರ ಸಿಖ್ಖರನ್ನು ಕೊಂದುಹಾಕಿದರು ಅಥವಾ ಸಜೀವವಾಗಿ ಸುಟ್ಟು ಹಾಕಿದರು. ಆ ಹತ್ಯಾಕಾಂಡ ನಡೆದು 25 ವರ್ಷಗಳಾಗಿದ್ದರೂ ಇವತ್ತಿನ ತನ[...] ಕೇವಲ 20 ಜನರಿಗೆ ಮಾತ್ರ ಶಿ[...] ನೀಡಲಾಗಿದೆ. ಇಂತಹ ಅನ್ಯಾಯ[...] ಬಗ್ಗೆ ಗುರುಪ್ರೀತ್ ಸಿಂಗ್ ಎಂಬುವವರು ಬರೆದಿರುವ ಕತೆಯನ್ನು ಇಲ್ಲಿ ನೀಡಿದ್ದೇವೆ.

ನ್ಯಾಯ

ಕತೆ

ಇಂಗ್ಲಿಷ್ ಮೂಲ: ಗುರುಪ್ರೀತ್ ಸಿಂಗ್

ಕನ್ನಡಕ್ಕೆ: ಗೌರಿ ಲಂಕೇಶ್

"ಯಾರಾದರೂ ಇದ್ದೀರಾ ಅಲ್ಲಿ? ನನ್ನ ಕತೆ ಕೇಳಲು ಯಾರಾದರೂ ಇದ್ದೀರಾ ಅಲ್ಲಿ? ನನಗೆ ನ್ಯಾಯ ಕೊಡಿಸಲು ಯಾರಾದರೂ ಇದ್ದೀರಾ ಅಲ್ಲಿ? ನನ್ನ ಹೆಸರು ಗುರುಸೇವಕ್ ಸಿಂಗ್. ನಾನು ಖ್ಯಾತ ಸ್ವಾತಂತ್ರ್ಯ ಹೋರಾಟಗಾರನ ಮೊಮ್ಮಗ. ಈ ದೇಶವನ್ನು ಆಕ್ರಮಿಸಿಕೊಂಡಿದ್ದ ಬ್ರಿಟಿಷರ ವಿರುದ್ಧ ಹೋರಾಡಿದ್ದಕ್ಕೆ ನನ್ನ ತಾತನಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಲಾಗಿತ್ತು."

"ಕಳೆದ ಇಪ್ಪತ್ತೈದು ವರ್ಷಗಳಿಂದ ನಾನು ಈ ಗಾಲಿ ಕುರ್ಚಿಯಲ್ಲಿದ್ದೇನೆ."

"ಸಂತೋಷ ತುಂಬಿದ್ದ ಸಂಸಾರ ನಮ್ಮದಾಗಿತ್ತು. ನಮ್ಮೆಲ್ಲರ ಹೊಟ್ಟೆಗೆ ಊಟ ಸಿಗಲೆಂದೇ ಶ್ರಮಜೀವಿ ಆಗಿದ್ದ ನನ್ನಪ್ಪ ಟ್ಯಾಕ್ಸಿ ಓಡಿಸುತ್ತಿದ್ದ. ನನ್ನಮ್ಮ ನಮ್ಮೆಲ್ಲರನ್ನು ಪ್ರೀತಿಯಿಂದ ನೋಡಿಕೊಳ್ಳುತ್ತಿದ್ದರು. ನನ್ನ ಅಣ್ಣ ಆಗತಾನೇ ಸೈನ್ಯ ಸೇರಿಕೊಂಡಿದ್ದ. ಆತನ ಆಶೆ ಈ ದೇಶಕ್ಕೆ ಸೇವೆ ಸಲ್ಲಿಸುವುದಾಗಿತ್ತು. ಮದುವೆ ವಯಸ್ಸಿಗೆ ಬಂದಿದ್ದ ಅಕ್ಕ ಕೂಡ ನನಗಿದ್ದಳು. ಆದರೆ ಈಗ ಅವರ್‍ಯಾರೂ ಇಲ್ಲ. ನನ್ನ ಸಂಸಾರ, ನನ್ನ ಮನೆ, ನನ್ನ ಕಾಲುಗಳು, ಎಲ್ಲವನ್ನೂ ಕಳೆದುಕೊಂಡಿದ್ದೇನೆ."

"ನಾನು ಹೇಳುತ್ತಿರುವುದನ್ನು ಯಾರಾದರೂ ಕೇಳಿಸಿಕೊಳ್ಳುತ್ತಿದ್ದೀರಾ? ನನಗೆ ನ್ಯಾಯ ಬೇಕು."

"ಅದ್ಯಾಕೆ ನೀನು ಹಾಗೆ ಚೀರುತ್ತಿದ್ದೀಯಾ? ನಿನಗೇನು ಬೇಕು?"

"ನೀವ್ಯಾರು?"

"ನಾನು ಯಾರು ಅಂತ ನಿನಗೆ ಗೊತ್ತಿಲ್ಲವಾ? ನಾನು ಈ ದೇಶದ ನಾಯಕ. ನಿನಗೇನು ಬೇಕು ಹೇಳು."

"ಓ, ಹಾಗಾದರೆ ನೀನೇ ಆಡಳಿತಾರೂಢ ಪಕ್ಷದ ನಾಯಕ? ಆದರೆ ನಿನ್ನಿಂದ ನನಗೆ ನ್ಯಾಯ ಸಿಗುವುದಿಲ್ಲ ಬಿಡು."

"ನನ್ನ ಕೈಯಲ್ಲಿ ಅಧಿಕಾರ ಇದೆ. ಹೇಳು, ಏನು ನಿನ್ನ ಸಮಸ್ಯೆ?"

"25 ವರ್ಷಗಳ ಹಿಂದೆ ನನ್ನ ಇಡೀ ಸಂಸಾರವನ್ನು ಕೊಲ್ಲಲಾಯಿತು. ನನ್ನ ಅಪ್ಪ ಟ್ಯಾಕ್ಸಿ ಓಡಿಸುತ್ತಿದ್ದ. ನನ್ನ ಅಮ್ಮ ಸಾಮಾನ್ಯ ಗೃಹಿಣಿ ಆಗಿದ್ದಳು. ಈ ದೇಶಕ್ಕೆ ಸೇವೆ ಸಲ್ಲಿಸುವ ಉದ್ದೇಶದಿಂದ ನನ್ನ ಅಣ್ಣ ಸೈನ್ಯವನ್ನು ಸೇರಿದ್ದ. ನನ್ನ ಅಕ್ಕನಿಗೆ ಮದುವೆ ಆಗಲಿತ್ತು. ಆದರೆ ಅವರೆಲ್ಲರನ್ನು ಒಬ್ಬೊಬ್ಬರಾಗಿ ಕೊಂದು ಹಾಕಲಾಯಿತು."

"ಅವರನ್ನು ಯಾಕೆ ಕೊಂದರು?"

"ಯಾಕೆ ಅಂದರೆ ಅವರ ಗುರುತು ಸಿಕ್ಕಿದ್ದರಿಂದ."

"ನನಗೆ ಅರ್ಥವಾಗಲಿಲ್ಲ."

"ನನ್ನ ಅಪ್ಪ ಮತ್ತು ಅಣ್ಣ ರುಮಾಲು ಧರಿಸುತ್ತಿದ್ದರು. ಆದ್ದರಿಂದ ಅವರನ್ನು ಸುಲಭವಾಗಿ ಗುರುತಿಸಿದರು."

"ಆದರೆ ಅವರು ರುಮಾಲು ಧರಿಸಿದ್ದರು ಎಂಬ ಮಾತ್ರಕ್ಕೆ ಅವರನ್ನು ಯಾಕೆ ಕೊಲ್ಲಲಾಯಿತು?"

"ಸರ್, ಅದೇ ಅವರ ಸಾವಿಗೆ ಕಾರಣವಾಯಿತು. ಯಾಕೆಂದರೆ ಕೊಲೆಗಡುಕರು ರುಮಾಲು ಧರಿಸಿದ್ದವರನ್ನೇ ಗುರಿಯಾಗಿಸಿಕೊಂಡಿದ್ದರು."

"ಯಾಕೆ?"

"ಯಾಕೆಂದರೆ ರುಮಾಲು ಧರಿಸಿದ್ದ ಇಬ್ಬರು ಪ್ರಧಾನಿಯನ್ನು ಕೊಂದಿದ್ದರು. ಆಕೆಯ ಹಿಂಬಾಲಕರು 'ನಮ್ಮ ತಾಯಿಯನ್ನೇ ಕೊಂದಿದ್ದೀರಾ' ಎಂದು ಕೂಗಾಡುತ್ತಾ ಬಂದರು. ನನ್ನ ಅಪ್ಪನನ್ನು ಮನೆಯಿಂದ ಹೊರಗೆಳೆದು ಆತನನ್ನು ಸಜೀವವಾಗಿ ಸುಟ್ಟು ಹಾಕಿದರು. ನನ್ನ ಅಪ್ಪ ತನ್ನ ಜೀವಕ್ಕಾಗಿ ಬೇಡಿಕೊಳ್ಳುತ್ತಿದ್ದ. ಇತರರು ತಮ್ಮ ಧರ್ಮಗಳನ್ನು ಪಾಲಿಸಲು ನೆರವಾಗಲೆಂದೇ ಹೇಗೆ ನಮ್ಮ ಧರ್ಮದ ಗುರುಗಳು ತಮ್ಮ ಪ್ರಾಣವನ್ನೇ ತ್ಯಜಿಸಿದ್ದರು ಎಂದು ನನ್ನ ಅಪ್ಪ ಅವರಿಗೆ ಮನವರಿಕೆ ಮಾಡಲು ಯತ್ನಿಸಿದ. ಬ್ರಿಟಿಷರ ವಿರುದ್ಧ ಹೋರಾಡಿದ್ದಕ್ಕಾಗಿ ತನ್ನ ತಂದೆಗೆ ಜೈಲು ಶಿಕ್ಷೆ ನೀಡಲಾಗಿದೆ ಎಂದು ವಿವರಿಸಲು ನೋಡಿದ. ಆದರೆ ಅದೆಲ್ಲದರ ಬಗ್ಗೆ ಅವರ್‍ಯಾರೂ ಕೇರ್ ಮಾಡಲಿಲ್ಲ. ನನ್ನ ಅಮ್ಮ ಮತ್ತು ಅಕ್ಕನನ್ನು ಬೆತ್ತಲುಗೊಳಿಸಿ ಅವರನ್ನೂ ಸುಟ್ಟು ಹಾಕಿದರು. ನನ್ನ ಅಣ್ಣ ತನಗೆ ಸೈನ್ಯ ನೀಡಿದ್ದ ಗುರುತಿನ ಚೀಟಿಯನ್ನು ತೋರಿಸಿದ. ಆದರೆ ಆತನ ಮಾತನ್ನು ಅವರು ಕೇಳಿಸಿಕೊಳ್ಳಲಿಲ್ಲ. ಆಗ ನನ್ನ ಅಣ್ಣ ತನ್ನ ಕಿರ್ಪಾಣ್ ಅನ್ನು ಕೈಗೆತ್ತಿಕೊಂಡ. ಆದರೆ ಹೆಚ್ಚಿನ ಸಂಖ್ಯೆಯಲ್ಲಿದ್ದ ಗೂಂಡಾಗಳು ಆತನನ್ನು ಕೊಂದು ಹಾಕಿದರು. ನಮ್ಮ ರಕ್ಷಣೆಗೆ ಪೊಲೀಸರೂ ಬರಲಿಲ್ಲ."

"ಹೌದಾ, ನಮ್ಮ ನಾಯಕಿಯನ್ನು ಕೊಂದ ಆ ಅಂಗರಕ್ಷಕ ದ್ರೋಹಿಗಳ ಬಗ್ಗೆ ನೀನು ಹೇಳುತ್ತಿದ್ದೀಯಾ... ಯಾರನ್ನು ಅವರು ರಕ್ಷಿಸಬೇಕಿತ್ತೊ, ಅವರನ್ನೇ ತಾವು ಕೊಂದು ಹಾಕಿದರೆ ಇಂತಹದ್ದೆಲ್ಲ ನಡೆಯುತ್ತದೆ...."

"ನೋಡಿ! ಇದಕ್ಕೇ ನಾನು ಅಂದದ್ದು ನಿಮ್ಮಿಂದ ನನಗೆ ನ್ಯಾಯ ಸಿಗುವುದಿಲ್ಲ ಎಂದು. ನೀನೊಬ್ಬ ಪಕ್ಷಪಾತಿ!"

"ಏನಂದೇ? ನಿನ್ನ ನಾಯಕರೇ ಪಕ್ಷಪಾತಿಗಳು."

"ಯಾರು? ನನ್ನ ನಾಯಕರು ಅಂದರೆ ಯಾರು?"

"ನಮ್ಮ ನಾಯಕಿ ಸತ್ತಾಗ ಸಂಭ್ರಮಿಸಿದರಲ್ಲ, ಸಿಹಿ ತಿನಿಸುಗಳನ್ನು ಹಂಚಿದರಲ್ಲ, ಅವರು. ಅವರು ಹಾಗೆ ಮಾಡಿದ್ದು ನಮ್ಮ ಪಕ್ಷದ ಬೆಂಬಲಿಗರನ್ನು ಕೆರಳಿಸಿತು."

"ಆದರೆ ಅದು ನಾನು ಎಸಗಿದ ತಪ್ಪಲ್ಲ, ನನ್ನ ಸಂಸಾರ ಎಸಗಿದ ತಪ್ಪಲ್ಲ. ನಾವೇಕೆ ಬೆಲೆ ತೆತ್ತಬೇಕಾಯಿತು?"

"ಅದು ಪರೋಕ್ಷವಾಗಿ ಆದ ಹಾನಿ. ನಿನಗೆ ನನ್ನ ಅನುಕಂಪ ಇದೆ."

"ಇಲ್ಲ, ನಿಮ್ಮ ಅನುಕಂಪ ನನಗೆ ಬೇಡ. ಯಾರ ಕರುಣೆಯೂ ನನಗೆ ಬೇಡ. ನನಗೆ ನ್ಯಾಯ ಬೇಕು."

"ಇದೊಂದು ಹಳೇ ವಿಚಾರ. ನಮ್ಮ ಪ್ರಧಾನಿ ಸತ್ತರು. ಆಕೆಯನ್ನು ಕೊಂದವರನ್ನು ಗಲ್ಲಿಗೇರಿಸಿದ್ದೂ ಆಯಿತು. ಹಿಂದೆ ಆಗಿದ್ದನ್ನೆಲ್ಲ ಜನ ಮರೆತುಬಿಟ್ಟಿದ್ದಾರೆ."

"ಸಾರಿ. ನಾನು ಮರೆತಿಲ್ಲ. ಎಲ್ಲವನ್ನೂ ಕಳೆದುಕೊಂಡ ನಾನು ಅದನ್ನು ಮರೆಯುವುದಾದರೂ ಹೇಗೆ?"

"ಅದು ಇತಿಹಾಸ."

"ಆದರೆ ನೀವು ಈಗಲೂ ನಿಮ್ಮ ದಿವಂಗತ ನಾಯಕಿಯನ್ನು ಸ್ಮರಿಸುತ್ತೀರಲ್ಲಾ? ಪ್ರತಿ ವರ್ಷ ಆಕೆಯ ನೆನಪಿನಾರ್ಥ ಕಾರ್ಯಕ್ರಮಗಳಿಗೆ ಸಾರ್ವಜನಿಕರ ಹಣವನ್ನು ಖರ್ಚು ಮಾಡುತ್ತೀರಲ್ಲಾ?"

"ನೋಡು, ನ್ಯಾಯಸಮ್ಮತವಾಗಿ ಮಾತನಾಡು. ಆಕೆ ಈ ದೇಶದ ಪ್ರಧಾನಿ ಆಗಿದ್ದವರು."

"ಆಕೆಯನ್ನು ಕೊಂದವರನ್ನೇನೋ ಗಲ್ಲಿಗೇರಿಸಿದಿರಿ. ಆದರೆ ನನ್ನ ಸಂಸಾರವನ್ನು ಕೊಂದವರು ಇವತ್ತಿಗೂ ಸ್ವತಂತ್ರವಾಗಿ ಓಡಾಡುತ್ತಿದ್ದಾರೆ. ಅದು ನ್ಯಾಯಸಮ್ಮತವೇ?"

"ಮುನಿಸಿಕೊಳ್ಳುವುದನ್ನು ನಿಲ್ಲಿಸು. ನಮ್ಮ ಪಕ್ಷ ಈಗ ರುಮಾಲು ಧರಿಸುವವರನ್ನೇ ಪ್ರಧಾನಿ ಮಾಡಿದೆಯಲ್ಲಾ, ಅದಕ್ಕಿಂತ ಇನ್ನೇನು ಬೇಕು ನಿನಗೆ?"

"ನನ್ನ ಸಮುದಾಯವನ್ನು ಗುರಿ ಮಾಡಿಕೊಂಡಿದ್ದಾಗಲೂ ಓರ್ವ ರುಮಾಲು ವ್ಯಕ್ತಿಯೇ ದೇಶದ ರಾಷ್ಟ್ರಪತಿಯಾಗಿದ್ದ. ಆದರಿಂದ ನಮಗಾದ ಉಪಯೋಗವೇನು? ನಿಮ್ಮ ಪಕ್ಷ ನಮ್ಮನ್ನು ರಕ್ಷಿಸದೇ ಹೋಯಿತು."

"ನೋಡು, ನಮ್ಮ ಪಕ್ಷವನ್ನು ದೂಷಿಸಬೇಡ. ನಾವು ಜಾತ್ಯತೀತತೆಯಲ್ಲಿ ನಂಬಿರುವವರು. ಆದರೆ ರಸ್ತೆಯಲ್ಲಿದ್ದ ಜನರ ಸಹಜ ಪ್ರತಿಕ್ರಿಯೆ ಅದಾಗಿತ್ತು ಅಷ್ಟೇ."

"ಇಲ್ಲ, ಅದು ಸಾರ್ವಜನಿಕರಿಂದ ಆದದ್ದಲ್ಲ. ನಿಮ್ಮ ಪಕ್ಷ ಅಧಿಕಾರದಲ್ಲಿದ್ದ ಪ್ರದೇಶಗಳಲ್ಲೇ ಈ ಹತ್ಯಾಕಾಂಡ ಯಾಕೆ ನಡೆಯಿತು? ಅಧಿಕಾರದಲ್ಲಿದ್ದವರ ಕೈವಾಡ ಇದರಲ್ಲಿತ್ತು ಎಂಬುದಕ್ಕೆ ಇದಕ್ಕಿಂತ ಇನ್ನೇನು ಪುರಾವೆ ಬೇಕು?"

"ನಿಮ್ಮ ಜನ ಯಾಕೆ ನಮ್ಮ ನಾಯಕಿಯನ್ನು ಕೊಂದರು?"

"ಅವರು ನನ್ನ ಜನ ಆಗಿರಲಿಲ್ಲ. ನನ್ನ ಸಂಸಾರಕ್ಕೂ ಅವರ ಸಿದ್ಧಾಂತಕ್ಕೂ ಯಾವುದೇ ಸಂಬಂಧವಿರಲಿಲ್ಲ. ನಮ್ಮ ಪುಣ್ಯ ಕ್ಷೇತ್ರದ ಮೇಲೆ ಸೈನಿಕ ದಾಳಿ ನಡೆಸಿದ್ದು ನಿಮ್ಮ ನಾಯಕಿ. ಅದರಿಂದ ಕೆರಳಿದ ಆಕೆಯ ಅಂಗರಕ್ಷಕರು ಪ್ರತೀಕಾರವನ್ನು ತೀರಿಸಿಕೊಂಡರು. ಆಕೆಯ ಸಾವಿಗೆ ಆಕೆಯೇ ಕಾರಣಳಾಗಿದ್ದಳು."

"ನಿಮ್ಮ ಜನರೇ ಅದೇ ಪುಣ್ಯಕ್ಷೇತ್ರದಿಂದಲೇ ಭಯೋತ್ಪಾದನೆಯನ್ನು ಹಬ್ಬಿಸುತ್ತಿದ್ದರು. ಅಮಾಯಕರನ್ನು ಕೊಂದು ಹಾಕುತ್ತಿದ್ದರು. ಆಕೆಗೆ ಬೇರೆ ಆಯ್ಕೆ ಯಾವುದಿತ್ತು?"

"ಅವರೆಲ್ಲ ನನ್ನ ಜನ ಅಂತ ಯಾಕೆ ಹೇಳುತ್ತಿದ್ದೀಯಾ? ನಮ್ಮ ಸಂಸಾರಕ್ಕೂ, ಭಯೋತ್ಪಾದನೆಗೂ ಸಂಬಂಧವಿಲ್ಲ. ನನ್ನ ತಾತ ನಿಜವಾದ ದೇಶಭಕ್ತನಾಗಿದ್ದ. ನನ್ನ ಅಪ್ಪ ಯಾವಾಗಲೂ ನಿಮ್ಮ ಪಕ್ಷಕ್ಕೆ ಮತ ಹಾಕುತ್ತಿದ್ದ. ನನ್ನ ಅಣ್ಣ ಸೈನ್ಯವನ್ನು ಸೇರಿದ್ದ. ಆದರೆ ಅವರು ಯಾವ ತಪ್ಪು ಮಾಡಿರದಿದ್ದರೂ ನಿಮ್ಮ ಜನ ಅವರಿಬ್ಬರನ್ನು ಕೊಂದು ಹಾಕಿದರು."

"ಅಲ್ಲ ನೀನು ಅದು ಹೇಗೆ ಬದುಕುಳಿದೆ?"

"ನಮ್ಮ ಸಂಸಾರದಲ್ಲಿ ನಾನೇ ಚಿಕ್ಕವ. ನನ್ನ ಅಮ್ಮ ನನ್ನನ್ನು ಕೊಠಡಿಯೊಂದರಲ್ಲಿ ಕೂಡಿಹಾಕಿದ್ದಳು. ಆದರೆ ಅಲ್ಲಿಂದಲೇ ಅಸಹಾಯಕವಾಗಿ ಅವರೆಲ್ಲರನ್ನೂ ಸಜೀವವಾಗಿ ಸುಟ್ಟು ಹಾಕಿದ್ದನ್ನು ನಾನು ಕಂಡೆ. ನಾನೂ ಅವತ್ತೇ ಸತ್ತು ಹೋಗಬೇಕಿತ್ತು ಅನ್ನಿಸುತ್ತದೆ. ಅವರನ್ನೆಲ್ಲಾ ಕೊಂದ ನಂತರ ನಮ್ಮ ಮನೆಗೆ ಬೆಂಕಿ ಹಚ್ಚಿದರು. ನನ್ನ ಕಾಲುಗಳು ಆ ಬೆಂಕಿಯಲ್ಲಿ ಸುಟ್ಟು ಹೋದವು. ಪಕ್ಕದ ಮನೆಯವರು ನನ್ನನ್ನು ರಕ್ಷಿಸಿ ನಿರಾಶ್ರಿತರ ಶಿಬಿರಕ್ಕೆ ಕಳುಹಿಸಿದರು. ಅಂದಿನಿಂದ ಕಾಲುಗಳನ್ನು ಕಳೆದುಕೊಂಡ ಅಂಗವಿಕಲನಾಗಿದ್ದೇನೆ."

"ನೋಡು, ಇದಕ್ಕೊಂದು ಅಂತ್ಯ ಕಾಣಿಸೋಣ[...] ನಿನಗೇನು ಬೇಕು? ಹಣ? ಒಂದು ಕೆಲಸ?"

"ನನಗೆ ನ್ಯಾಯ ಬೇಕು."

"ಅದನ್ನು ಕೊಡುವುದಕ್ಕೇ ನಾನು ಪ್ರಯತ್ನಿಸ[...]ತ್ತಿರುವುದು."

"ನನ್ನ ಸಂಸಾರವನ್ನು ವಾಪಸ್ಸು ತರುತ್ತೀಯಾ?"

"ಅದು ಅಸಾಧ್ಯ."

"ನನ್ನ ಸಂಸಾರವನ್ನು ಕೊಂದವರನ್ನು ಗಲ್ಲಿಗೇರಿಸ[...]ತ್ತೀಯಾ?"

"ಅದಕ್ಕೆ ಸಾಕ್ಷಿ?"

"ಆ ಗೂಂಡಾಗಳನ್ನು ಪ್ರಚೋದಿಸಿದ ನಿವ[...] ಪಕ್ಷದವರಿಗೆ ಶಿಕ್ಷೆ ನೀಡುತ್ತೀಯಾ?"

"ಅವರು ಪ್ರಚೋದಿಸಿದರು ಅಂತ ಹೇ[...] ಹೇಳುತ್ತೀಯಾ?"

"ನನಗೊಂದು ಗನ್ ಕೊಡುತ್ತೀಯಾ?"

"ಯಾಕೆ?"

"ನನ್ನ ಸಂಸಾರವನ್ನು ಕೊಂದವರನ್ನು ನಾನ[...] ಸಾಯಿಸುತ್ತೇನೆ."

"ನಾನು ಶಾಂತಿ ಬಗ್ಗೆ ಮಾತನಾಡುತ್ತಿದ್ದರೆ ನೀನ[...] ಭಯೋತ್ಪಾದಕನಂತೆ ಮಾತನಾಡುತ್ತಿದ್ದೀಯಾ."

"ನಾನು ಭಯೋತ್ಪಾದಕ ಆಗದಂತೆ ನೀನ[...] ನೋಡಿಕೊಳ್ಳಬೇಕು. ನೀನು ನನಗೆ ನ್ಯಾಯ ಕೊಡಿಸದಿದ್ದ[...] ನಾನೇ ಪ್ರತೀಕಾರ ತೆಗೆದುಕೊಳ್ಳುತ್ತೇನೆ. ಹಾಗೆ ಮಾಡಿ[...] ನಂತರ ನಿಮ್ಮ ಸರ್ಕಾರ ನನ್ನನ್ನ ಭಯೋತ್ಪಾದಕ, ಕೊಲೆಗಡು[...] ಕ್ರಿಮಿನಲ್ ಏನೆಂದು ಬೇಕಾದರೂ ಕರೆಯಲಿ."

"ನಿನ್ನೊಂದಿಗೆ ಮಾತನಾಡಿ ಏನೂ ಪ್ರಯೋಜನವಿ[...] ನಾನು ಹೊರಡುತ್ತೇನೆ."

"ಹೌದು ಅದೇ ವಾಸಿ. ನೀನು ಈಗಲೇ ಹೊರಡು[...] ನನಗೆ ನ್ಯಾಯ ಬೇಕು. ನಾನು ಹೇಳುತ್ತಿರುವುದನ್ನು ಯಾರಾದರೂ ಕೇಳಿಸಿಕೊಳ್ಳುತ್ತಿದ್ದೀರಾ?"

"ನೀನು ಯಾಕೆ ನಿನ್ನ ತಲೆಯನ್ನು ಗೋಡೆ[...] ಚಚ್ಚಿಕೊಳ್ಳುತ್ತಿದ್ದೀಯಾ?"

"ಯಾರು ನೀವು?"

"ನಾನು ನಿನ್ನ ಸಮುದಾಯದ ನಾಯಕ. ನಿನ[...] ನೆರವು ನೀಡಲು ಬಂದಿದ್ದೇನೆ. ನೀನು ತುಂ[...] ಧೈರ್ಯಶಾಲಿ. ನಿನಗೆ ಪ್ರತೀಕಾರ ಬೇಕಲ್ಲವೇ? ನನ[...]

...ಂ ಬೇಕೊ ಅದನ್ನು ನಾವು ಕೊಡುತ್ತೇವೆ."

"...ಹೇಗೆ?"

"ನಿನಗೆ **AK-47** ಬೇಕಾ? ಅಥವಾ ನೀನು ಓರ್ವ ...ಸೈಡ್ ಬಾಂಬರ್ ಆಗುತ್ತೀಯಾ? ನಿನ್ನವರನ್ನು ...ದವರಲ್ಲೇ ನ್ಯಾಯಕ್ಕಾಗಿ ಬೇಡುವುದರಿಂದ ಏನೂ ...ಯೋಜನವಿಲ್ಲ."

"ನೀನು ಪ್ರತ್ಯೇಕವಾದಿಯೇ?"

"ನನ್ನನ್ನು ನೀನು ಹಾಗೆ ಕರೆದದ್ದನ್ನು ಕೇಳಿ ಅಚ್ಚರಿ ...ತ್ತಿದೆ. ನಿನ್ನ ತಾತನಂತೆ ನಾನೂ ಸ್ವಾತಂತ್ರ್ಯ ...ರಾಟಗಾರ. ನಮ್ಮ ಸಮುದಾಯಕ್ಕೆ ಒಂದು ದೇಶ ...ದೆ. ಈ ಜಗತ್ತಿನಲ್ಲಿ ಯಾವ ಬಹುಸಂಖ್ಯಾತರಿಗೂ ...ಕಡೆ. ಗೌರವದಿಂದ ರುಮಾಲುಧಾರಿಗಳು ...ಬಹುದಾದಂತಹ ದೇಶ ಬೇಕಾಗಿದೆ."

"ಇಲ್ಲ, ನೀನು ನನ್ನ ತಾತನಂತಹವನಲ್ಲ, ನಿನಗೆ ...ಮವುದು ದೇವಪ್ರಭುತ್ವ ದೇಶ. ನನ್ನ ತಾತ ...ಹೋರಾಡಿದ್ದು ಒಂದು ಜಾತ್ಯತೀತ ದೇಶಕ್ಕಾಗಿ. ಆತನ ...ನೆಗೆ ಬೇಕಿದ್ದು, ಎಲ್ಲ ಜನ ತಮ್ಮ ಧಾರ್ಮಿಕ ...ಗಳನ್ನು ಬದಿಗಿಟ್ಟು ವಿದೇಶಿಯರ ಆಡಳಿತವನ್ನು ...ಧಿಸುವುದು."

"...ಹಾ! ತಮ್ಮ ಧಾರ್ಮಿಕ ಗುರುತಿನಿಂದಾಗಿಯೇ ...ವನ್ನು ಕೊಂದ ಈ ದೇಶ ಎಷ್ಟು ಜಾತ್ಯತೀತ! ...!!"

"ನನ್ನ ದೇಶಕ್ಕೆ ಇವತ್ತು ನಾಯಿಪಾಡು ಬಂದಿದ್ದರೆ ... ನನ್ನ ತಾತ ಕಾರಣನಲ್ಲ, ಬದಲಾಗಿ ಈ ದೇಶದ ...ಕರ ತಪ್ಪು ನಿರ್ಧಾರಗಳು."

"ನೀನೆಷ್ಟು ಮುಗ್ಧ! ಸರ್ಕಾರದ ಯಂತ್ರಾಂಗಕ್ಕೆ ನಿನ್ನವರೆಲ್ಲ ...ಕೂಗಿದ್ದರೂ ಇದನ್ನು ಈಗಲೂ ನಿನ್ನ ದೇಶ ...ದ್ದೀಯಲ್ಲಾ?"

"ನಾನು ಪೆದ್ದನಲ್ಲ, ನನಗೆ 'ನ್ಯಾಯ ಬೇಕು, ಅಷ್ಟೆ."

"ಯಾರಿಂದ ನ್ಯಾಯ? ನಿನ್ನ ಅಪ್ಪ, ಅಮ್ಮ, ಅಣ್ಣ...ನ್ನು ಕೊಂದ ಬಹುಸಂಖ್ಯಾತ ಸಮುದಾಯದಿಂದ ...ಎಂದೂ ನ್ಯಾಯ ಸಿಗುವುದಿಲ್ಲ, ಎಚ್ಚೆತ್ತುಕೊ."

"ನಾನು ಎಚ್ಚರವಾಗಿಯೇ ಇದ್ದೇನೆ. ಈ ಕೃತ್ಯಕ್ಕೆ ಒಂದು ... ಸಮುದಾಯವನ್ನೇ ದೂಷಿಸುವುದು ಸರಿಯಲ್ಲ. ... ನೆರವು ನೀಡಿದವರು ಪಕ್ಕದ ಮನೆಯವರು. ...ಸಂಖ್ಯಾತ ಸಮುದಾಯದ ನೆರವಿಲ್ಲದಿದ್ದರೆ ನಾನಿವತ್ತು ...ತ್ತಿರಲಿಲ್ಲ."

"...ನೊಬ್ಬ ಮೂರ್ಖ. ನಿನ್ನನ್ನು ನಿರಾಶ್ರಿತರ ಶಿಬಿರಕ್ಕೆ ...ದವರು ನಿನಗೆ ಕಾಣಿಸುತ್ತಿದ್ದಾರೆಯೇ ಹೊರತು



...ನ್ನು ಕೊಂದವರ್ಯಾರು ಎಂಬುದನ್ನು ...ತ್ತಿದ್ದೀಯಾ."

"...ಮರೆತಿಲ್ಲ, ಇದೇ ಪಕ್ಷ ಅಧಿಕಾರದಲ್ಲಿಲ್ಲದಿದ್ದ ...ಲ್ಲಿ ಈ ಹಿಂಸಾಕೃತ್ಯ ಯಾಕೆ ನಡೆಯಲಿಲ್ಲ? ...ಗ್ಗೆ ನಿನಗಿಂತಲೂ ನಾನು ಸ್ಪಷ್ಟವಾಗಿದ್ದೇನೆ. ನಿನಗೆ ...ಮತ್ತು ನಾವು ಎಂಬ ಹಗೆ ಬೇಕಾಗಿದೆಯೇ ... ಇದು ಪ್ರಭುತ್ವ ಪ್ರಾಯೋಜಿಸಿದ ಹತ್ಯಾಕಾಂಡ ...ಂ ಬೇಕಿಲ್ಲ."

"...ಕೆ ಈ ಪ್ರಭುತ್ವವನ್ನು ನಿಯಂತ್ರಿಸುತ್ತಿರುವವರೇ ...ರು. ನಿನಗೆ ನ್ಯಾಯ ಬೇಕಿದ್ದರೆ ನೀನು ...ಂದ ಬಾಳಬಹುದಾದ ಪ್ರತ್ಯೇಕ ದೇಶಕ್ಕಾಗಿ ...ಹೋರಾಡಬೇಕು."

"...ನು ಇದನ್ನು ಏಕೆ ಹೇಳುತ್ತಿದ್ದೀಯ ಗೊತ್ತಾ? ...ಕೆ ಎಲ್ಲವನ್ನೂ ಕಳೆದುಕೊಂಡಿಲ್ಲ, ನೀನು ನಿನ್ನ ...ನ್ನ ಈಡೇರಿಸಿಕೊಳ್ಳಲು ಈ ವಿಚಾರವನ್ನು ...ಉಪಯೋಗಪಡಿಸಿಕೊಳ್ಳುತ್ತಿದ್ದೀಯಾ."

"...ತ್ರ ಪ್ರತ್ಯೇಕ ದೇಶಕ್ಕಾಗಿ ಹೋರಾಡುವಂತೆ ನಮ್ಮನ್ನು ಪ್ರಚೋದಿಸಿದ್ದು ಯಾರು? 1947 ರಲ್ಲಿ ಸ್ವಾತಂತ್ರ್ಯ ಬಂದಾಗಿನಿಂದಲೂ ನಮ್ಮನ್ನು ಬಲಿಕೊಡಲಾಗುತ್ತಿದೆ. ನಿನ್ನ ತಾತನಂತೆ ಬಹಳಷ್ಟು ಸ್ವಾತಂತ್ರ್ಯ ಹೋರಾಟಗಾರರು ನಮ್ಮ ಸಮುದಾಯದವರೇ ಆಗಿದ್ದರೂ ನಮ್ಮನ್ನು ಎರಡನೆ ದರ್ಜೆಯ ಪ್ರಜೆಗಳಂತೆ ನೋಡಿಕೊಳ್ಳಲಾಗುತ್ತಿದೆ."

"ಹೀಗೆ ಮಾತನಾಡುವ ಮುನ್ನ ಸತ್ಯಾಂಶಗಳ ಬಗ್ಗೆ ನೀನು ಅರಿತುಕೊಳ್ಳಬೇಕಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಬೇರೆ ಸಮುದಾಯಗಳೂ ಭಾಗವಹಿಸಿದ್ದವು. 25 ವರ್ಷಗಳ ಹಿಂದೆ ಆಗಿದ್ದನ್ನು ಹೊರತುಪಡಿಸಿದರೆ, ಈ ದೇಶದಲ್ಲಿ ನಾವೆಂದೂ ಎರಡನೆ ದರ್ಜೆಯ ಪ್ರಜೆಗಳಾಗಿಲ್ಲ. ನಮ್ಮಲ್ಲಿ ಹಲವಾರು ಯಶಸ್ವಿಗಾಥೆಗಳು ಇವೆ. ನಮ್ಮ ಸಮುದಾಯದ ಜನಸಂಖ್ಯೆ ಕಡಿಮೆ ಇದ್ದರೂ, ಬಹುಸಂಖ್ಯಾತರ ಬಡವರಿಗಿಂತಲೂ ನಾವು ಹೆಚ್ಚಿನ ಸ್ಥಾನವನ್ನು ಪಡೆದಿದ್ದೇವೆ."

"ನೀನು ವ್ಯವಸ್ಥೆಯ ಪರ ಮಾತನಾಡುತ್ತಿದ್ದೀಯಾ. ಸ್ವಾತಂತ್ರ್ಯ ಬಂದ ಸಂದರ್ಭದಲ್ಲಿ ನಮಗೂ ಯಾಕೆ ಪ್ರತ್ಯೇಕ ದೇಶವನ್ನು ಕೊಡಲಿಲ್ಲ. ಹಿಂದೂಗಳಿಗೆ ಭಾರತ ಸಿಕ್ಕಿತು, ಮುಸಲ್ಮಾನರಿಗೆ ಪಾಕಿಸ್ತಾನ ಸಿಕ್ಕಿತು. ಆದರೆ ನಮಗೇನು ಸಿಕ್ಕಿತು?"

"ಈಗ ಪಾಕಿಸ್ತಾನದಲ್ಲಿ ಏನಾಗುತ್ತಿದೆ ಅಂತ ನೀನೇ ನೋಡು. ಅಲ್ಲಿನ ಮುಸಲ್ಮಾನರು ತಮ್ಮ ನಡುವೆಯೇ ಕಿತ್ತಾಡಿಕೊಳ್ಳುತ್ತಿದ್ದಾರೆ. ಹೌದು, ಹಿಂದೂ ಉಗ್ರರು ಭಾರತವನ್ನು ಹಿಂದೂ ರಾಷ್ಟ್ರವಾಗಿ ಪರಿವರ್ತಿಸಲು ಪ್ರಯತ್ನಿಸುತ್ತಿದ್ದಾರೆ ಎಂಬುದನ್ನು ನಾನು ಒಪ್ಪುತ್ತೇನೆ. ಆದರೆ ಆ ಪ್ರಕ್ರಿಯೆಯಲ್ಲಿ ಹಿಂದೂ ಉಗ್ರರು ಭಾಷೆ ಮತ್ತು ಜಾತಿ ಹೆಸರಿನಲ್ಲಿ ತಮ್ಮದೇ ಹಿಂದೂ ಸಹೋದರರನ್ನೂ ಗುರಿ ಮಾಡಿಕೊಂಡಿದ್ದಾರಲ್ಲಾ?"

"ಆದರೆ ಪೊಲೀಸರು ಎಂದೂ ಹಿಂದೂಗಳನ್ನು ಬಂಧಿಸುವುದಿಲ್ಲ. ಬದಲಾಗಿ ಪ್ರತಿ ಭಯೋತ್ಪಾದಕ ಪ್ರಕರಣದಲ್ಲಿ ಅಲ್ಪಸಂಖ್ಯಾತರನ್ನೇ ಗುರಿ ಮಾಡಿಕೊಳ್ಳುತ್ತಾರೆ. ನಮ್ಮ ಪುಣ್ಯಕ್ಷೇತ್ರದ ಮೇಲೆಯೇ ದಾಳಿ ಮಾಡಿದರಲ್ಲ, ಯಾಕೆ?"

"ಹೌದು ಹಲವೊಮ್ಮೆ ಪ್ರಭುತ್ವ ಪಕ್ಷಪಾತಿಯಂತೆ ವರ್ತಿಸುತ್ತೆ. ಆದರೆ ನೀವು ಯಾಕೆ ಆ ಪುಣ್ಯಕ್ಷೇತ್ರವನ್ನು ಯುದ್ಧಕೋಟೆಯನ್ನಾಗಿ ಪರಿವರ್ತಿಸಿದಿರಿ? ಯಾಕೆ ಅಮಾಯಕ ಹಿಂದೂಗಳನ್ನು ಕೊಂದಿರಿ? ಅಂತ ಕೊಲೆಗಳಿಂದಾಗಿ ದೇಶದ ಇತರೆಡೆ ನಮ್ಮ ಜನ ಭಯದಿಂದ ವಾಸಿಸುವಂತಾಯಿತು."

"ನೋಡು, ನಾವೆಂದೂ ಅಮಾಯಕರನ್ನು ಕೊಲ್ಲಲಿಲ್ಲ, ನಮ್ಮ ಸಂಘಟನೆಗೆ ಕೆಟ್ಟ ಹೆಸರು ತರಲು ಭಾರತದ ಏಜೆಂಟರೆ ಆ ಕೆಲಸಗಳನ್ನು ಮಾಡಿದ್ದು. ಪುಣ್ಯಕ್ಷೇತ್ರವನ್ನು ಯುದ್ಧಕೋಟೆಯಾಗಿ ಪರಿವರ್ತಿಸಿದ್ದು ಯಾಕೆಂದರೆ, ನ್ಯಾಯಕ್ಕಾಗಿ ಇತರೆ ಮಾರ್ಗಗಳು ವಿಫಲವಾದಾಗ ಖಡ್ಗವನ್ನು ಉಪಯೋಗಿಸಿ ಎಂದು ನಮ್ಮ ಗುರುಗಳೇ ಹೇಳಿದ್ದಾರೆ. ಗುರುವಿನ ಅನುಯಾಯಿಯಾಗಿ ನಿನ್ನ ಕರ್ತವ್ಯದ ಬಗ್ಗೆ ನಾನು ನಿನಗೆ ನೆನಪು ಮಾಡಿಕೊಡುತ್ತಿದ್ದೇನೆ."

"ನಮ್ಮ ಗುರು ತನ್ನ ಪುತ್ರರನ್ನೇ ಯುದ್ಧಭೂಮಿಗೆ ಕಳುಹಿಸಿದ್ದರು. ಆದರೆ ನೀವು ನಿಮ್ಮ ಮಕ್ಕಳನ್ನು ವಿದೇಶಕ್ಕೆ ಕಳುಹಿಸಿದ್ದೀರ. ಬೇರೆಯವರು ತಮ್ಮ ಪ್ರಾಣವನ್ನೇ ಪಣಕ್ಕಿಡಬೇಕು ಎಂದು ಹೇಳುವ ನೀವು ನಿಮ್ಮ ರಾಜಕೀಯ ವೈರಿಗಳನ್ನು ಕೊಲ್ಲಲು ನಿಮ್ಮ ಮಕ್ಕಳನ್ನೇ ಯಾಕೆ ಕಳುಹಿಸುವುದಿಲ್ಲ?"

"ನಿನ್ನೊಂದಿಗೆ ವಾದ ಮಾಡಿ ಏನೂ ಪ್ರಯೋಜನವಿಲ್ಲ. ನೀನು ಗುಲಾಮನಾಗಿ ಬದುಕುವುದನ್ನೇ ಆಯ್ಕೆ ಮಾಡಿಕೊಂಡಿರುವೆ. ನಾನು ಹೊರಡುತ್ತೇನೆ."

"ದಯವಿಟ್ಟು ನೀವು ಇಲ್ಲಿಂದ ಹೊರಟುಹೋಗಿ. ನಾನು ನನ್ನ ಹೋರಾಟವನ್ನು ಮುಂದುವರೆಸುತ್ತೇನೆ.

"ನಾನು ಪ್ರತ್ಯೇಕತಾವಾದಿ ಅಲ್ಲ, ಹಾಗಾಗುವುದೂ ನನಗೆ ಬೇಕಿಲ್ಲ, ಆದರೆ ನನಗೆ ನ್ಯಾಯಬೇಕಿದೆ. ನನ್ನ ಈ ಅಹವಾಲನ್ನು ಪ್ರಭುತ್ವ ಆಲಿಸುತ್ತಿಲ್ಲ, ಸ್ವತಂತ್ರ ದೇಶದ ಹೆಸರಲ್ಲಿ ನ್ಯಾಯ ಕೊಡಿಸುತ್ತೇನೆ ಎನ್ನುತ್ತಿರುವವರು ಜನರ ಐಕ್ಯತೆಯ ವಿರೋಧಿಗಳು. ಒಂದೆಡೆ ಭಯೋತ್ಪಾದಕನಾಗುವ ಆಶೆ ನನ್ನದಲ್ಲ, ಆದರೆ ಇನ್ನೊಂದೆಡೆ ಈ ನಿರಂತರ ಅವಮಾನವನ್ನು ನನ್ನಿಂದ ಸಹಿಸಲಾಗುತ್ತಿಲ್ಲ, ಸಾಂಕೇತಿಕ ವರ್ತನೆಗಳಿಗಿಂತ, ಭಕ್ತಿಗಿಂತ ಈ ಇಡೀ ವಿಚಾರಕ್ಕೆ ಒಂದು ಗೌರವಯುತ ಅಂತ್ಯ ನನಗೆ ಬೇಕಿದೆ. ಅಪರಾಧಿಗಳನ್ನು ಪ್ರಭುತ್ವ ಶಿಕ್ಷಿಸುವ ಮೂಲಕ ನನಗೆ ನ್ಯಾಯ ನೀಡಬೇಕಿದೆ. ಈಗಲ್ಲದಿದ್ದರೆ ಇನ್ನು ಯಾವಾಗ?"


ಬಿ.ಎಂ.ಬಶೀರ್ ಕನ್ನಡನಾಡು ಕಂಡ ಅತ್ಯಂತ ತೀಕ್ಷ್ಣ ಮತ್ತು ಬಹುಮುಖ ಪ್ರತಿಭೆಗಳಲ್ಲಿ ಒಬ್ಬರು. 'ವಾರ್ತಾ ಭಾರತಿ'ಯಲ್ಲಿ ಸುದ್ದಿ ಸಂಪಾದಕರಾಗಿರುವ ಬಶೀರ್‌ರವರು ಬರೆಯುವ ಸಂಪಾದಕೀಯಗಳಿಗೆ ಅನಂತಮೂರ್ತಿಯವರನ್ನೊಳಗೊಂಡಂತೆ ದೊಡ್ಡ ಅಭಿಮಾನಿ ಬಳಗವಿದೆ. ಅತ್ಯಂತ ಪ್ರಗತಿಪರ ಮತ್ತು ಪ್ರಜಾತಾಂತ್ರಿಕ ಕಾಳಜಿಗಳಿಂದ ಬರೆಯುವ ಬಶೀರ್ ಗದ್ಯದಲ್ಲೂ ನಿಷ್ಠುರತೆಯೊಂದಿಗೆ ಕವಿ ಮನಸಿನ ಆರ್ದ್ರತೆಯಿರುತ್ತದೆ. ಅತ್ಯುತ್ತಮ ಕವಿಯೂ ಆಗಿರುವ ಬಶೀರ್‌ರವರು ಇನ್ನು ಮುಂದೆ ಪ್ರತಿ ಎರಡು ವಾರಗಳಿಗೊಮ್ಮೆ ನಮ್ಮ 'ಗೋಡೆ ಕಪಾಟ'ನಲ್ಲಿ ಕಾಣಿಸಿಕೊಳ್ಳುತ್ತಾರೆ.

ಅರಬೀ ಸಮುದ್ರದ ತೀರದಲ್ಲಿ ನಿಂತು...

ಗೊಂದಲದಲ್ಲಿದ್ದೇನೆ. ಅರಬೀ ಸಮುದ್ರಕ್ಕೆ ಹಾರುವುದೋ-ವಂದೇ ಮಾತರಂ ಹಾಡುವುದೋ? ಎನ್ನುವ ಗೊಂದಲ. ಕಡಲಿಗೂ ಈ ವಂದೇ ಮಾತರಂನ ಒಡಲಿಗೂ ಇರುವ ಸಾಮ್ಯತೆಯನ್ನು ಕಂಡು ಬೆಚ್ಚಿದ್ದೇನೆ. ಅದೇ ಕಡಲಿನ ತೆರೆ, ಆಳ, ಸೆಳವು ಬಾಯಿ ತೆರೆದು ಕಾದಿರುವ ಕ್ರೂರ ಜಲಚರಗಳು! ಈ ಹಿನ್ನೆಲೆಯಲ್ಲೇ ಹಿರಿಯ ಸಂಶೋಧಕರು, ಚಿಂತಕರು ಆಗಿರುವ ಹಂಪ ನಾಗರಾಜಯ್ಯನವರು ನುಡಿಸಿರಿ ಸಮ್ಮೇಳನದಲ್ಲಿ 'ಹಾಡಿ ಅಥವಾ ಹಾರಿ' ಎಂದಿರಬೇಕು. ಇದನ್ನು ಇನ್ನಷ್ಟು ಕಾವ್ಯಾತ್ಮಕವಾಗಿ ಅಭಿವ್ಯಕ್ತಿಸುವುದಾದರೆ 'ಹಾಡು ಇಲ್ಲವೇ ಮಡಿ' ಎನ್ನಬಹುದು. ಹಾಡಿದವರನ್ನು 'ಹಾಡಿ ಮಡಿದವರು' ಎಂದು ಧಾರಾಳವಾಗಿ ಬಣ್ಣಿಸಬಹುದು. ಕಟ್ಟೀಮನಿಯಂತಹ ಪ್ರಗತಿಶೀಲ ಸಾಹಿತಿಗಳು ಇನ್ನೂ ಇದ್ದರೆ 'ಹಾಡಿ ಮಡಿದವರು' ತಲೆಬರಹವನ್ನಿಟ್ಟು ಇನ್ನೊಂದು ಕಾದಂಬರಿ ಬರೆಯುತ್ತಿದ್ದರೇನೋ?

ವಂದೇ ಮಾತರಂ ಹಾಡಿನ ಆಳ, ಒಳಸುಳಿ, ಅಲ್ಲಿ ನಮ್ಮನ್ನು ನುಂಗಲು ಬಾಯಿ ತೆರೆದು ಕಾಯುತ್ತಿರುವ ಶಾರ್ಕ್‌ಗಳಿಗೆ ಹೋಲಿಸಿದರೆ ಹಂಪನಾ 'ರೂಪಕದ ರೂಪ'ದಲ್ಲಿ ಈ ಘೋಷಣೆಯನ್ನು ಮಾಡಿರಬೇಕು ಅನ್ನಿಸುತ್ತದೆ. 'ಸುಜಲಾಂ...ಸುಫಲಾಂ...ಮಾತರಂ' ಎಂಬ ನಾಲ್ಕು ರೋಮ್ಯಾಂಟಿಕ್ ಸಾಲುಗಳ ಆಳದಲ್ಲಿ ಈ ಹಾಡು ಬಚ್ಚಿಟ್ಟಿರುವ ಕಡಲಾಳದ ಭಯಾನಕತೆಯನ್ನು ವ್ಯಕ್ತಪಡಿಸಲು ಆ ಸಭೆಯಲ್ಲಿ ಸಾಧ್ಯವಾಗದ ಕಾರಣ, ಹಾಡನ್ನು-ಕಡಲನ್ನು ಜೊತೆಗಿಟ್ಟಿರಬೇಕು. ಹಾಡುವುದು ಮತ್ತು ಕಡಲಿಗೆ ಹಾರುವುದರ ನಡುವಿನ ಸಾಮ್ಯತೆಯನ್ನು ಗುರುತಿಸಿಯೇ ಇಂತಹದೊಂದು 'ಫತ್ವಾ'ವನ್ನು ಅವರು ಕೊಟ್ಟಿರಬಹುದೇ ಎಂಬ ದೀಪದ ಕುಡಿಯಂತಹ ಮಿಣಿ ಮಿಣಿ ಆಸೆ. ಅಥವಾ 'ಯಾವ ಮೋಹನ ಮುರಳಿ ಕರೆಯಿತೋ...' ಎಂಬಂತೆ ನುಡಿಸಿರಿಯ 'ಮೋಹನ'ರಿಗೆ ಸಂಪೂರ್ಣ ತಮ್ಮನ್ನು ಒಪ್ಪಿಸಿದ ಭಾವೋನ್ಮಾದದಲ್ಲಿ ಹಂಪನಾ ಇಂತಹದೊಂದು ಕರೆಯನ್ನು ನೀಡಿರಬಹುದು.

ಅದೇನಿದ್ದರೂ ನಮ್ಮ ಬಾಲ್ಯದಲ್ಲಿ ವಂದೇ ಮಾತರಂ ಗೀತೆಯ 'ಸುಜಲಾಂ ಸುಫಲಾಂ' ಸಾಲುಗಳನ್ನು ದಡದಲ್ಲಿ ನಿಂತು ಸಮುದ್ರವನ್ನು ಹೀರುವಂತೆ ಅನುಭವಿಸುತ್ತಿದ್ದೆವು. ದಡದಲ್ಲಿ ಕಂಡದ್ದಷ್ಟೇ ನಮ್ಮ ಸಮುದ್ರ. ಕಡಲಿನಾಳದ ರೌದ್ರತೆಯ ಅರಿವಿರದೆ ನಾಲ್ಕು ರೋಮ್ಯಾಂಟಿಕ್ ಸಾಲುಗಳಲ್ಲಿ ನಾವು ಕಳೆದು ಹೋಗಿದ್ದೆವು. ಹಾಡೆಂದಲ್ಲ, ವರ್ಷಕ್ಕೊಮ್ಮೆ ನಡೆಯುವ ಶಾರದ ಪೂಜೆ, ರಾಜ್ಯೋತ್ಸವ ಇವೆಲ್ಲದರ ಹಿಂದೆಯೂ ಹೀಗೆಯೇ ಅಲೆಯುತ್ತಿದ್ದೆವು. ರಾಜ್ಯೋತ್ಸವವೆಂದರೆ ಮೇಷ್ಟ್ರುಗಳಿಗೆ ಕೇವಲ ಕನ್ನಡ ಧ್ವಜ ಹಾರಿಸುವುದಷ್ಟೇ ಅಲ್ಲ. ಭುವನೇಶ್ವರಿ ದೇವಿಯ ಫೋಟೋಗೆ ಹೂಹಾರ ಹಾಕಬೇಕು. ತೆಂಗಿನ ಕಾಯಿ ಒಡೆಯಬೇಕು. ಮೇಷ್ಟ್ರು ನಮ್ಮ ಬಾಯಲ್ಲಿ ಭಜನೆಗಳನ್ನು ಹೇಳಿಸುತ್ತಿದ್ದರೆ, ದೊಡ್ಡವರ ಯಾವ ವಿಷವನ್ನು ಒಳಗಿಟ್ಟುಕೊಳ್ಳದೆ ಮುಗ್ಧವಾಗಿ ಹಾಡುತ್ತಿದ್ದೆವು. ಅಲ್ಲಿ ಹಂಚುವ ಸಿಹಿ ಅವಲಕ್ಕಿಯೊಂದಿಗೆ ಸಂಭ್ರಮದಿಂದ ಪಾಲುದಾರರಾಗುತ್ತಿದ್ದೆವು. ಶಾಲೆಯೊಳಗೆ ಇದೆಲ್ಲ ಹೇಗೆ, ಯಾಕೆ ಎನ್ನುವ ಪ್ರಶ್ನೆಗಳನ್ನೆಲ್ಲ ಮೀರಿ ಅದರೊಳಗೆ ತೊಡಗಿಕೊಳ್ಳುತ್ತಿದ್ದೆವು.



ಅಂದು ನಮಗೆ ಸಾಧ್ಯವಾದದ್ದು ಇಂದು ಯಾಕೆ ಸಾಧ್ಯವಾಗುವುದಿಲ್ಲ ಎನ್ನುವ ಪ್ರಶ್ನೆಯೇ ತಪ್ಪು. ಅಂದು ಸಾಧ್ಯವಾದುದು ಇಂದಿನ ಸಂದರ್ಭದಲ್ಲಿ ಸಾಧ್ಯವಾಗಬಾರದು.


ಅಂದಿಗೂ ಇಂದಿಗೂ ವ್ಯತ್ಯಾಸವಿದೆ. ಶಾರದಾ ಪೂಜೆಯಲ್ಲಿ ಬಳಸುವ ಅಂದಿನ ಗಂಟೆಯ ಸದ್ದೇ ಬೇರೆ, ಇಂದಿನ ಗಂಟೆಯ ಸದ್ದೇ ಬೇರೆ. ಇಂದು ಶಾಲೆಯಲ್ಲಿ ಶಾರದಾ ಪೂಜೆ ನಡೆಯುತ್ತಿದ್ದರೆ ಅಲ್ಲಿ ಆರೆಸ್ಸೆಸ್ ಮನಸ್ಸುಗಳು ಸದ್ದು ಮಾಡುತ್ತವೆ. ಸ್ಥಳೀಯ ಕೇಸರಿ ಶಕ್ತಿಗಳ ಪ್ರವೇಶದಿಂದ ಇಂದಿನ ಸಂಭ್ರಮ ಕಲುಷಿತಗೊಂಡಿರುತ್ತದೆ. ಕರಾವಳಿಯಲ್ಲಿ ರಾಜ್ಯೋತ್ಸವವೆಂದರೆ ಅಪ್ಪಟ ವೈದಿಕ ಕಾರ್ಯಕ್ರಮಗಳು. ಅಲ್ಲಿ ಕನ್ನಡತನಕ್ಕಿಂತ ಸಂಘಪರಿವಾರ ಮನಸ್ಸುಗಳು ವಿಜೃಂಭಿಸುತ್ತವೆ. ಅಲ್ಲಿ ಕನ್ನಡನಾಡು ನನ್ನದೂ ಎಂದು ತಿಳಿದು ತೆರಳಿದವನು ಅಪರಿಚಿತನಂತೆ 'ಅನ್ಯ'ನಾಗಿ ನಿಲ್ಲಬೇಕಾಗುತ್ತದೆ. "ಇಲ್ಲಿ ನಮ್ಮದೇನು ಕೆಲಸ" ಎಂದು ತನಗೆ ತಾನೆ ಪ್ರಶ್ನಿಸಬೇಕಾಗುತ್ತದೆ. 'ಸ್ಕಾರ್ಫ್' ಧರಿಸುವುದರಿಂದ ಪ್ರತ್ಯೇಕತೆಯ ಭಾವನೆ ಹುಟ್ಟುತ್ತದೆ ಎಂದು ಪುಕ್ಕಾ 'ಸೆಕ್ಯುಲರ್'ಗಳ ದೊಡ್ಡಪ್ಪಂದಿರಂತೆ ಮಾತನಾಡುವವರ ಶಾಲೆಗಳಲ್ಲೇ ಪ್ರತಿ ವರ್ಷ ಶಾರದ ಪೂಜೆ ನಡೆಯುತ್ತದೆ. ರಾಷ್ಟ್ರೀಯ ಸಂಕೇತಗಳಿರಬೇಕಾದಲ್ಲಿ ಧಾರ್ಮಿಕ ಸಂಕೇತಗಳನ್ನು ತುರುಕಿಸಲಾಗುತ್ತದೆ. ಶಾಲೆಯ ಅಂಗಳದಲ್ಲೇ ಕೇಸರಿ ಧ್ವಜಗಳು ಹಾರಾಡುತ್ತಿರುತ್ತವೆ.


ನಮ್ಮ ಜಾತ್ಯತೀತ ಸ್ವರೂಪವನ್ನು ಉಳಿಸಿಬೆಳೆಸಲು ನಮಗಿರುವುದು ಅಂಗೈಯಷ್ಟು ಕಿರಿದಾದ ಶಾಲೆಯ ಅಂಗಳ ಮಾತ್ರ. ಎಲ್ಲ ಜಾತಿ, ಧರ್ಮಗಳ ಹೂವುಗಳು ಒಂದೆಡೆ ಸೇರುವ, ಆಡುವ, ಕುಣಿಯುವ ಪುಟ್ಟ ತೋಟ ಅದು. ಅಲ್ಲಿಗೆ ವಿಷದ ಕೊಂಡಿಯಿರುವ ಈ ಹುಳಗಳನ್ನು ಪ್ರವೇಶಿಸದಂತೆ ತಡೆಯುವ ಸಂದರ್ಭದಲ್ಲಿ ನಾವಿದ್ದೇವೆ. ಆದರೂ ಅವರು ಪ್ರವೇಶಿಸಿಯಾಗಿದೆ. 'ಭಾರತ-ಭಾರತಿ'ಯ ಪುಸ್ತಕದ ಮೂಲಕ. ಭಯೋತ್ಪಾದನೆಯ ವಿರುದ್ಧದ ಆಂದೋಲನದ ಹೆಸರನಲ್ಲಿ, ನಮ್ಮ ಶಾಲೆಯ ಅಂಗಳಗಳೂ ಕಳಂಕಗೊಂಡಿವೆ. ಪುಟಾಣಿ ಮಕ್ಕಳೂ ಪರಸ್ಪರರನ್ನು ಅನುಮಾನದ ಕಣ್ಣಿನಲ್ಲಿ ನೋಡುತ್ತಿದ್ದರೆ, ಕ್ರಿಕೆಟ್ ಆಡುವ ಸಹಪಾಠಿ ತನ್ನನ್ನು ಧರ್ಮದ ಮೂಲಕ ಗುರುತಿಸುತ್ತಿದ್ದರೆ ಇನ್ನು ಉಳಿದದ್ದೇನು? ಸಾಹಿತ್ಯ ಸಮ್ಮೇಳನದ ವೇದಿಕೆಯನ್ನು ಸಿದ್ಧಪಡಿಸಿ ಅಲ್ಲೂ ಪರಸ್ಪರ ಅನುಮಾನಗಳನ್ನು ಬಿತ್ತುವುದಾದರೆ ಇನ್ನೇನು ಉಳಿದಿದೆ? ಹಂಪನಾ ಹೇಳಿದಂತೆ ಒಂದೋ ವಂದೇ ಮಾತರಂ ಹಾಡಬೇಕು-ಇಲ್ಲವೇ ಕಡಲಿಗೆ ಹಾರಬೇಕು!


ನಿಜ. ಮತ್ತೆ ವಂದೇ ಮಾತರಂ ಹಾಡಬೇಕು. ಹಂಪನಾರಂತಹ ಮೌಲಾನಗಳ ಫತ್ವಾಗಳಿಲ್ಲದೆ ಅದೇ ಶಾಲೆಯ ಪುಟ್ಟ ಮೈದಾನದಲ್ಲಿ, ಮತ್ತೆ ವಂದೇ ಮಾತರಂ ಕೂಗಬೇಕು... ನನ್ನ ಸ್ವದೇಶಿ ಕನಸುಗಳಿಗಾಗಿ... ಯಾವ ಸಂಘಪರಿವಾರದ ಅಪ್ಪಣೆಯೂ ಇಲ್ಲದೆ. ಶಾರದ ಪೂಜೆಯ ಸಮಾರಂಭದಲ್ಲಿ ಒಂದು ಹಿಡಿ ಸಿಹಿ ಅವಲಕ್ಕಿಗಾಗಿ [illegible] ರಾತ್ರಿ, ನಿದ್ದೆಯಿಲ್ಲದೆ ಕಳೆಯಬೇಕು. ಜಯಕರ್ನಾಟಕ ಮಾತೆ ಎಂಬ ಹಾಡಿನ ಲಯದ ಹಿಂದೆ [illegible] ಸಾಗಬೇಕು... ಸಾಧ್ಯವಿದೆಯೆ? ಊಹುಂ... ವಂದೇ ಮಾತರಂ ನೆನೆದಾಗ [illegible] ತಳದಲ್ಲಿ ಒಂದು [illegible], ಅದರ ಆಳದಲ್ಲಿ ಹಲ್ಲು [illegible] ಶಾರ್ಕ್‌ಗಳಷ್ಟೇ ಕಾಣುತ್ತಿವೆ...

ನೆರೆ ಬಂದ ನಾಡಿಗೆ ಸಣ್ಣದೊಂದು ನೆರವು ಹೊತ್ತು ಹೋದಾಗ


ಕರ್ನಾಟಕ ಜನಪರ ವೇದಿಕೆ ತಂಡ




ಪ್ರವಾಹದಿಂದ ಕುಸಿದುಹೋದ ಮನೆ...




ಮನೆ ಕಳೆದುಕೊಂಡವರಿಗೆ 4,000 ರೂ. ಪರಿಹಾರ!

ಉತ್ತರ ಕರ್ನಾಟಕದಲ್ಲಿ ಈ ಸಾರಿ ಬಂದ ನೆರೆಯು ಅಲ್ಲಿನ ಜನರಿಗೆ ಹೇಳತೀರದ ಸಂಕಷ್ಟ ತಂದಿದೆ. ಪತ್ರಿಕೆ, ಟಿವಿಗಳಲ್ಲಿ ಮಾತ್ರವಲ್ಲದೇ ನಮ್ಮ ಸಂಘಟನೆಯ ಗೆಳೆಯರಿರುವ ಊರುಗಳಲ್ಲಿನ ವರ್ತಮಾನ ನಮ್ಮನ್ನು ತೀವ್ರವಾಗಿ ಕಾಡಿತ್ತು. ಪರಿಹಾರದ ಕುರಿತು ಸರ್ಕಾರ ಎಷ್ಟೇ ಮಾತನಾಡಿದರೂ, ಅಲ್ಲಿನ ಜನರಿಗೆ ಅದು ತಲುಪುವುದಿಲ್ಲ ಎಂಬುದು ಸರ್ವವಿದಿತ. ಅದೇನೇ ಇದ್ದರೂ, ಅಲ್ಲಿನ ಜನರ ನೆರವಿಗೆ ಹೋಗುವುದು ನಮ್ಮ ಕರ್ತವ್ಯವೆಂದು ನಾವು ಭಾವಿಸಿದೆವು. ಸದಸ್ಯರ ಹಾಗೂ ಹಿತೈಷಿಗಳ ಜೊತೆಗೆಯಿಂದ 'ಕರ್ನಾಟಕ ಜನಪರ ವೇದಿಕೆ'ಯ ಚಟುವಟಿಕೆಗಳು ನಡೆಯುತ್ತವೆ. ಇಂತಹ ಜನಪರ ಸಂಘಟನೆಯು ಸಾವಿರಾರು ಕೋಟಿ ರೂ.ಗಳ ನಷ್ಟ ಅನುಭವಿಸಿರುವ ಆ ಭಾಗಕ್ಕೆ ಎಷ್ಟು ಮಾತ್ರದ ನೆರವು ನೀಡಬಹುದು ಎಂಬ ಪ್ರಶ್ನೆ ಇತ್ತು, ಆದರೆ ನಮ್ಮ ನಾಡಿನಲ್ಲೇ ಬಹುವರ್ಷಗಳ ಶ್ರಮದಿಂದ ಕಟ್ಟಿಕೊಂಡ ಬದುಕನ್ನು ಇದ್ದಕ್ಕಿದ್ದಂತೆ ಕಳೆದುಕೊಂಡ ಬಾಂಧವರ ಜೊತೆಗೆ ನಿಲ್ಲಬೇಕಿರುವುದು ಮಾನವೀಯ ಕರ್ತವ್ಯವಾದ್ದರಿಂದ, ಈ ನಿಟ್ಟಿನಲ್ಲಿ ಎಷ್ಟು ಸಾಧ್ಯವೋ ಅಷ್ಟನ್ನು ಮಾಡಬೇಕು ಎಂದು ತೀರ್ಮಾನಿಸಿದೆವು. ನಮ್ಮ ಪ್ರಯತ್ನಕ್ಕೆ ನೂರಾರು ಹಿತೈಷಿಗಳು, ಪ್ರಗತಿಪರ ಚಿಂತಕರು, ಮಾನವೀಯ ಮನಸ್ಸುಳ್ಳವರು ಕೈ ಜೋಡಿಸಿದರು.

ನೆರೆ ಸಂತ್ರಸ್ತ ಜನತೆಗೆ ಏನು ಬೇಕು-ಬೇಡ ಎಂಬುದನ್ನು ತಿಳಿಯಲು ಮೊದಲು ಒಂದು ಬಾರಿ ಹೋಗಿಬಂದೆವು. ಅಲ್ಲಿನ ಜನರಿಗೆ ಅಗತ್ಯವಾಗಿ ಬೇಕಿರುವ ವಸ್ತುಗಳ ಬಗ್ಗೆ ಸೀಮಿತವಾದ ವಲಯದಲ್ಲಿ ಮನವಿ ಮಾಡಿಕೊಂಡೆವು. ಆ ಸಂದರ್ಭದಲ್ಲಿ ನಮ್ಮ ಸುತ್ತಲಿನ ಹಿತೈಷಿಗಳಿಗೆ ಮತ್ತು ಸಂಘಟನೆಯ ಕಾರ್ಯಕರ್ತರಿಗೆ ಹೇಳಿದ್ದಿಷ್ಟು: 'ನಿಮಗೆ ಸಾಧ್ಯವಾದಷ್ಟನ್ನು ಕೊಡಿ. ನಿಮಗೆ ಬೇಡವಾದ್ದನ್ನು ಕೊಡುವುದಲ್ಲಾ; ನಿಮಗೆ ಬೇಕಿರುವುದರಲ್ಲಿ ಒಂದಷ್ಟನ್ನು ಸಂಕಷ್ಟದಲ್ಲಿರುವ ನಮ್ಮದೇ ಜನರೊಂದಿಗೆ ಹಂಚಿಕೊಳ್ಳಿ.' ಅಷ್ಟು ಹೇಳಿದ ಮೇಲೂ ಕೆಲವರು ಮನೆಯಲ್ಲಿ ಬೇಡವಾದ್ದನ್ನು ತಂದು ಸುರಿಯಲು ಹೊರಟಿದ್ದರು! ಇನ್ನೂ ಕೆಲವರು ಸ್ಲೀವ್‌ಲೆಸ್ ಚೂಡಿದಾರ್ ಥರದ, ರಾಯಚೂರು ಹಳ್ಳಿಗಳನ್ನು ಇನ್ನೂ ಪ್ರವೇಶಿಸಿರದ ಮಾಡರ್ನ್ ಡ್ರೆಸ್‌ಗಳನ್ನೂ ಕೊಟ್ಟಿದ್ದರು!! ಆದರೆ ಬಹುಪಾಲು ಜನರು ಉತ್ತಮ ಗುಣಮಟ್ಟದ ಸೀರೆ, ಬಟ್ಟೆಗಳನ್ನೇ ಕೊಟ್ಟರು. ಹಲವಾರು ಮಂದಿ ಸಾವಿರಾರು ರೂಪಾಯಿಗಳ ಹಣ ನೀಡಿದರು. ಮಂಡ್ಯದ ಸ್ಲಂ ಒಕ್ಕೂಟದ ನೇತೃತ್ವದಲ್ಲಿ ಮನೆಮನೆಯಲ್ಲಿ ಸಂಗ್ರಹಿಸಿ 5 ಸಾವಿರಕ್ಕೂ ಹೆಚ್ಚು ಹಣ ನೀಡಿದರು. ಅಲ್ಲಿ ಮೂಟೆ ಹೊರುವ ಕಾರ್ಮಿಕರೂ ತಮ್ಮ ಸಂಬಳದ ಪಾಲನ್ನು ಕೊಟ್ಟರು. ಗೌರಿಯವರು 'ಲಂಕೇಶ್'ನಲ್ಲಿ ನಮ್ಮ ಮನವಿಯನ್ನು ಪ್ರಕಟಿಸಿ ಒಂದಷ್ಟು ನೆರವು ಬರಲು ಕಾರಣವಾದರು. ಸಮಾನತಾ ಮಹಿಳಾ ವೇದಿಕೆ ಹಾಗೂ ಆದಿತ್ಯ ಮತ್ತು ಅವರ ಬಳಗದ ಗೆಳೆಯರು ಸಂಗ್ರಹ, ಪ್ಯಾಕಿಂಗ್, ವಿತರಣೆಗೆಲ್ಲಾ ಜೊತೆಗಿದ್ದರು. **joinustohelp** ಎಂಬ ಗೆಳೆಯರ ಗುಂಪೊಂದೂ ನಮ್ಮ ಜೊತೆಗೆ ಬಂದಿತು.

ಕರ್ನಾಟಕ ಜನಪರ ವೇದಿಕೆ ಕಾರ್ಯಕರ್ತರ, ಹಿತೈಷಿಗಳ 10 – 12 ದಿನಗಳ ಪರಿಶ್ರಮದಿಂದ 4 ಹಳ್ಳಿಗಳ ಕುಟುಂಬಗಳಿಗೆ ಹಂಚಲು ಬೇಕಾಗುವ 720 ಪ್ಯಾಕ್‌ಗಳನ್ನು ಮಾಡಲಾಯಿತು. ಪ್ರತೀ ಪ್ಯಾಕ್‌ನಲ್ಲೂ ಸೀರೆ, ಪಂಚೆ, ಟವಲ್, ಪ್ಯಾಂಟ್, ಶರ್ಟ್ ಹಾಗೂ ಬೆಡ್‌ಶೀಟ್‌ಗಳು ಇರಬೇಕೆಂದರೆ, ಅರ್ಧಕ್ಕೂ ಹೆಚ್ಚನ್ನವನ್ನು ಕೊಳ್ಳಲಾಯಿತು. ಇವುಗಳನ್ನು ತೆಗೆದುಕೊಂಡು ನವೆಂಬರ್ 6ರ ರಾತ್ರಿ ಬೆಂಗಳೂರಿನಿಂದ ಹೊರಟು ರಾಯಚೂರು ತಲುಪಿದೆವು.

ಶಕ್ತಿನಗರದ ಪಕ್ಕದ ಹೆಗ್ಗಸನಹಳ್ಳಿ ನಾವು ಪರಿಹಾರ ಸಾಮಗ್ರಿ ತಲುಪಿಸಿದ ಮೊದಲ ಊರು. ಈ ಹಳ್ಳಿ ಕೃಷ್ಣಾ ನದಿಗೆ ಹತ್ತಿರವಿದೆ. ಆದರೆ ಊರಿಗೆ ನುಗ್ಗಿರುವುದು ಹಳ್ಳದ ನೀರು. ಇದೇ ಊರಿನ ಹತ್ತಿರವೇ ಬೆಂಗಳೂರು, ದೆಹಲಿ ರೈಲು ಮಾರ್ಗ ಕಿತ್ತುಹೋಗಿರುವುದು. ಎರಡನೆಯದು ರಾಯಚೂರು ತಾಲೂಕಿನದ್ದೇ ಮತ್ತೊಂದು ಹಳ್ಳಿ ಗುರ್ಜಾಪುರ. ಈ ಹಳ್ಳಿಗೆ ಕೃಷ್ಣಾ ನದಿ ನೀರಿನ ಜೊತೆ ಮತ್ತೊಂದು ಹಳ್ಳದ ನೀರು ಎರಡೂ ಸೇರಿ ಸಾಕಷ್ಟು ಹಾನಿ ಮಾಡಿವೆ. ನಾವು ಹೋದ ಮೂರನೆಯ ಊರು ಕೋಳೂರು. ಇದು ದೇವದುರ್ಗ ತಾಲೂಕಿನ ಅಂಚಿನಲ್ಲಿರುವ ಹಳ್ಳಿ. ಈ ಹಳ್ಳಿಯ ಸುತ್ತಲೂ ಎರಡು ಹಳ್ಳಗಳು ಸರ್ಪದಂತೆ ಸುತ್ತಿಕೊಂಡಿದ್ದು ಸಾಕಷ್ಟು ತೊಂದರೆಯಲ್ಲಿದ್ದಾರೆ. ಇವರು ಸಮೀಪದ ಗಬ್ಬೂರು ಮತ್ತು ರಾಯಚೂರಿಗೆ ಬರಲು ಇವತ್ತಿಗೂ ಸೇತುವೆಯಿಲ್ಲ, ಕೋಳೂರು ಹೆಚ್ಚು ಕಡಿಮೆ ಸಂಪೂರ್ಣ ನಾಶವಾಗಿದೆ. ಕೆಲವೆಡೆ ಮನೆಯಿತ್ತು ಎಂಬ ಗುರುತೂ ಸಹ ಉಳಿದಿಲ್ಲ.


ಕರ್ನಾಟಕ ಜನಪರ ವೇದಿಕೆಯ ಪತ್ರಿಕಾ ಗೋಷ್ಠಿ...



ಕೊನೆಯದಾಗಿ ತುಂಗಭದ್ರ ನದಿಯ ತಟದಲ್ಲಿರುವ ಹಳೇ ತುಂಗಭದ್ರ ಗ್ರಾಮ. ಈ ಊರಿನಲ್ಲಿ ಒಂದು ಮನೆಯೂ ಉಳಿದಿಲ್ಲ, ಎಲ್ಲವೂ ಸಂಪೂರ್ಣ ನಾಶವಾಗಿದೆ. ಪಾತ್ರೆ ಇತ್ಯಾದಿ ಏನೂ ಉಳಿದುಕೊಂಡಿಲ್ಲ, ಈ ಊರಿನ ಪಕ್ಕದಲ್ಲೇ ತುಂಗಭದ್ರಾ ನದಿಗೆ ಕಟ್ಟಿರುವ ದೊಡ್ಡ ಸೇತುವೆಯೇ ಕೊಚ್ಚಿಕೊಂಡು ಹೋಗಿದೆ. ನದಿಯ ಆ ಕಡೆಯ ಆಂಧ್ರ ಭಾಗದಲ್ಲಿ ನಾಲ್ಕು ಕಿ.ಮೀ. ದೂರದಲ್ಲಿ ಮಂತ್ರಾಲಯ ಬರುತ್ತದೆ. ಅಲ್ಲಿನ ಸ್ವಾಮೀಜಿಯನ್ನು ಹೆಲಿಕಾಪ್ಟರ್‌ನಲ್ಲಿ ಹೊತ್ತುಕೊಂಡು ಬಂದು, ಮಂತ್ರಾಲಯದ ಪುನರ್‌ನಿರ್ಮಾಣಕ್ಕೆ 10 ಕೋಟಿಯನ್ನು 3 ದಿನದಲ್ಲೇ ಘೋಷಿಸಿದ ರಾಜ್ಯ ಸರ್ಕಾರ, ನಾವು ಹೋಗುವವರೆಗೂ ಹಳೇ ತುಂಗಭದ್ರಾ ಗ್ರಾಮಕ್ಕೆ ಅಂತಹ ಯಾ… ಭರವಸೆಯನ್ನೂ ನೀಡಿರಲಿಲ್ಲ, ಸಂಪೂ… ಮನೆ ನಾಶವಾದರೆ ನೀಡುವ 37 ಸಾ… ರೂ. ಈ ಊರಿನ ಒಂದು ಮನೆ… ತಲು ಪಿಲ್ಲ, ಈ ಚಿಕ್ಕ ಊರಿನ ಎ… ಕುಟುಂಬ ಗಳಿಗೆ ಬಟ್ಟೆ, ಬೆಡ್‌ಶೀಟ್ ಜ… ಜೊತೆ ಪಾತ್ರೆಗಳನ್ನೂ ಹಂಚಲಾಯಿತು…

ಈ ಪರಿಹಾರ ಸಾಮಗ್ರಿಗಳ… ಸಂಕಷ್ಟದಲ್ಲಿರುವ ಜನತೆಗೆ ನೀಡುವಾಗ ವ… ಗಳನ್ನು ಕೊಡುವುದು, ತೆಗೆದುಕೊಳ್ಳುವು… ದಾನವೆಂದು ಭಾವಿಸಬಾರದು ಎಂಬು… ನಮ್ಮಗಳ ಆಗ್ರಹವಾಗಿತ್ತು, ಇದೊಂದು ಮಾನವೀ… ಸಂಬಂಧದ ಭಾಗ ಅಷ್ಟೇ. ಇಡೀ ದೇಶಕ್ಕೆ ಅನ್ನದಾತ… ಬೆವರು ಸುರಿಸುವ ದೇಹಗಳಿಗೆ ಈ ನಮ್ಮ ನೆ… ಅತ್ಯಲ್ಪವೇ.

ಸರ್ಕಾರದ ಮೇಲೆ ನಂಬಿಕೆಯಿಲ್ಲದೆ, ನೇರವ… ಪ್ರಾಮಾಣಿಕವಾಗಿ ಜನರಿಗೆ ತಲುಪಿಸುವವರಿಗೆ ಮ… ಕೊಡಬೇಕು ಎಂದುಕೊಂಡಿದ್ದ ಹಲವರು ನಮ್ಮೊ… ತಮ್ಮ ನೆರವನ್ನು ತಲುಪಿಸಿದ್ದರು. ಅದರಂತೆಯೇ … ಪರಿಹಾರ ವಿತರಣೆ ಕಾರ್ಯಕ್ರಮ ಯಶಸ್ವಿಯ… ನಡೆಯಿತು. ಈ ಊರುಗಳಲ್ಲಿದ್ದ ಸಂಘಟನೆಯ ಕೆ… ಪ್ರಾಮಾಣಿಕ ಕಾರ್ಯಕರ್ತರು ಯಾವುದೇ ಗೊಂ… ಗಳಿಲ್ಲದೆ ಪರಿಹಾರ ಸಾಮಗ್ರಿ ವಿತರಣೆಯಾಗಲು ವ… ಮಾಡಿದ್ದರು. ಸರ್ಕಾರದಿಂದ ನಮಗೇನೂ ಸಿಕ್ಕಿಲ್ಲ, 2… 7 ಸಾವಿರ ರೂ.ಗಳ ಚೆಕ್ಕನ್ನು ಹೊರತುಪಡಿಸಿ ಎ… ಬಹುತೇಕ ಎಲ್ಲೆಡೆ ಜನರು ಹೇಳುತ್ತಿದ್ದರು. ಆ… ಸಂದರ್ಭದಲ್ಲಿ ಅವರ ನೆರವಿಗೆ ನಿಂತು ಸಹಾಯಹಸ್ತ… ನೀಡಿದ ರಾಜ್ಯದ ಇತರ ಭಾಗಗಳ ಜನತೆ ಮ… ಸಂಘ ಸಂಸ್ಥೆಗಳನ್ನು ಕೃತಜ್ಞತೆಯಿಂದ ನೆನೆಯುತ್ತಿದ್ದ…


ತಮ್ಮ ಸಂಕಷ್ಟದಲ್ಲಿ ನೆರವಿಗೆ ಬಾರದ ಸರ್ಕಾ… ನಿರ್ಲಕ್ಷದ ಬಗ್ಗೆ ನೊಂದ ಜನರು ಹಿಡಿಶಾಪ ಹಾಕುತ್ತಿ… ಅಲ್ಲಿನ ನೈಜ ಪರಿಸ್ಥಿತಿಯನ್ನು ಕಣ್ಣಾರೆ ಕಂಡ ಎಂಥವರ… ಮನ ಕಲಕುತ್ತದೆ. ಅಷ್ಟು ನಿಕೃಷ್ಟ ಪರಿಸ್ಥಿತಿಯಲ್ಲಿ ಜ… ಬದುಕುತ್ತಿದ್ದಾರೆ. ಜನ ಪ್ರತಿನಿಧಿಗಳಿಗೆ ಮನು… ಎನ್ನುವುದು ಇದ್ದರೆ ನಿಜಕ್ಕೂ ಆ ಜನರ ಮುಂದೆ … ತಗ್ಗಿಸಿ ನಿಲ್ಲಬೇಕು.

ಪ್ರಕೃತಿಯ ವಿಕೋಪ ಮತ್ತು ಸರ್ಕಾ… ನಿರ್ಲಕ್ಷ್ಯಗಳೆರಡೂ ಸೇರಿ ಈ ಭಾಗದ ಜನಜೀವನ… ಕೆಲ ದಶಕಗಳಷ್ಟು ಹಿಂದಕ್ಕೆ ತಳ್ಳಿದೆ. ಹಾಗಾಗಿ ಕರ್ನಾ… ಅತ್ಯಂತ ಹಿಂದುಳಿದ ಭಾಗವಾದ ಈ ಜಿಲ್ಲೆಗಳ ಸ… ಅಭಿವೃದ್ಧಿಗೆ ಪ್ರಯತ್ನಗಳು ನಡೆಯಬೇಕಿದೆ. … ಮನೆಯಲ್ಲಿ ಗಳ ಹಿಡಿಯುತ್ತಿರುವ ಇಲ್ಲಿನ ರಾಜಕ… ಗಳು ಅಂತಹ ಪ್ರಯತ್ನ ತಮ್ಮಂತೆ ತಾವೇ ಮ… ತ್ತಾರೆಂಬ ಯಾವ ಭರವಸೆಯೂ ಇಲ್ಲ. ಈ ನಿಟ… ನಾಡಿನ ಪ್ರಜ್ಞಾವಂತ ಜನತೆ ಮತ್ತು ಪ್ರಗತಿಪರ ಸಂಘಟ… ಒಟ್ಟಾಗಿ ಒತ್ತಡ ತರುವ ಕೆಲಸವನ್ನು ಮಾಡಬೇಕ…

ಕರ್ನಾಟಕ ಜನಪರ ವೇದಿಕೆಯೊಂದಿಗೆ ಕೈಜೋ… ಎಲ್ಲರಿಗೂ ಕರ್ನಾಟಕ ಜನಪರ ವೇದಿಕೆಯು ಹೃ… ಪೂರ್ವಕ ಅಭಿನಂದನೆಗಳನ್ನು ಅರ್ಪಿಸುತ್ತದೆ.

● ಡಾ. ವಾಸು ಎಚ್…

ಮದರ್ ತೆರೇಸಾ




ನಿನ್ನ ಚಿತ್ರವಿರುವ ಕೋಣೆಯೊಳು
ಬೆಳಕಿನ ತಾಂಡವೇ ಇದೆ ತಾಯಿ
ತೆರೇಸಾ ಕೊಲ್ಕತ್ತಾದ ಸೂರ್ಯ
ಇಗರ್ಜಿಯಂತೆ ಕಂಡ ಕಣಿವೆ
ನಿರ್ಮಲ ಹೃದಯ
ಕಲ್ಲು ಚಪ್ಪಡಿಯಲ್ಲಿ ಹಾದಿಯಲಿ ಉಳಿದು
ಕನ್ನತ್ವ ಉಕ್ಕಿ ಹರಿವ ಮತಕಾಶಿನಿ
ದೃಢವಾಗಿ ಬಾಲ ಏಸುವಿನ ಎದೆಗೆ
ತಾಗಿದ ನವನೀತ ಚೆಲ್ವು ಕಟ್ಟದ
ಪುನೀತ ಓ...
ಸಾವಿನ ಕಣ್ಣಿಗೆ ನೇರ ನಿಂತು
ಅನುದಿನ ಒಳಗೆ ನೆಮ್ಮದಿ ಮಣಿಹ
ಸಾವು ಕಾಣಲೆ ಬರುವ ದರಿದ್ರರ
ಮಹಾಮನೆ ಮರಣವ ಮೀರಿದ
ಮಹತಿಯ ಮಾನಸಿ ಬೆಳಗಿದ
ನಲ್ ಮೊಂಬತ್ತಿ ಮುದ್ರೆಯಲಿ
ಜಗಕೆ ನಿಂತವಳೆ ತುಂಬಿ
ಕರುಣೆಯ ಇಂಚರವೆ ಅದು ನೀನೆ
ಅದು ನೀನೆ ಬಿಳಿನೂಲಿನ ಸಾದಾ ಸೀರೆ
ಸುರ್ಕು ಅರ್ತಿಯ ಮೊಗದ ಇನಶಕ್ತಿ
ಮಾಯದೆ ಮಿಗೆ ಕುಷ್ಠತೆ ದೀನನ ಹತಾಶೆ
ತೊದಲು ತೊಳಲು ಶಾಂತಿ... ಶಾಂತಿ...
ಶಾಂತಿ ಮಂತ್ರವೆ ಪಣತಿ.
ವಿಧಿ ದೂರಿಟ್ಟ ಉಮ್ಮಳ ಮಂದಿ
ಅರಸಿ ಮಡಿಲಿಗೆ ಬದ್ದರು
ದಂತದ ಕ್ರೂಚೆಯನೆ ಹಿಡಿವಂತೆ
ಅವರ ಹಿಡಿದಿದ್ದ ನೀನು ಬದುಕನೆ
ಹರಕೆಯಿಟ್ಟು ಪ್ರಾರ್ಥಿಸಿದೆ ರೋಗವನು
ಮರಣವನು ಗೆಲುವ ಶಕ್ತಿ ಕೊಡು ತಂದೆ...
ಕರಗಿಸಿದ ಕಡುಬಡತನವೆ ಸುಲಿದ
ತೊಗಲುಗಳ ತೊಳೆವ ತಪದಲ್ಲಿ
ಊರ್ದ್ವ ಮಧ್ಯ ಅಧೋ ದೀರ್ಘ
ಉಸಿರನೆ ಕಳೆದೆ
ಒಳಗೊಂದೆ ಸಾಯುಜ್ಯದ ನಿರೀಕ್ಷೆ.
ಬೋದಿಲೇರನ 'ಕೊಳೆತ ಮಾಂಸ'ದ
ಕವಿತೆ ಕೇಳಬೇಕಿತ್ತು
'ಕನ್ಯಾಸ್ತ್ರೀ ವೃತ್ತಿ ಬನ್ನಪಡಲು
ತಕ್ಕುದಾದ ಬಾಲಿಕೆಯ ಛದ್ಮವೇಷ' ಎಂದ
ರಿಲ್ಕೆ ನಿನ್ನ ನೋಡಬೇಕಿತ್ತು ಎಲ್ಲೆಡೆ
ಓ... ತಾಯಿ
ದೇವ ದುಂದುಬಿ ಮೊಳಗಿದಂತೆ
ಉಳಿದೇ ಉಳಿಯಿತು ಕಾಂತಿಯ ಇಚ್ಛೆ.



● ಕವಿತಾ ...

...ೀಕರ್ ಜಾಗದಲ್ಲಿ ಪಾಯ್ದೆಯಿಲ್ಲ ಅಂತ ಸೆಟ್ಟರು ಮಂತ್ರಿಯಾದನಂತೆ

...ಬೆಚ್ಚ ರಾಗಿಯಾಗುವ ಕಾಲ. ಹಾಗೆಯೇ ಹುರು ...ಾಗುವ ಸಮಯ. ರಾಗಿ ಕತೆ ಮುಗಿಯಿತು ಎಂಬ ...ಲ್ಲಿ ಬಂದು ಹೊಡೆದ ಮಳೆಯಿಂದಾಗಿ ಎಲ್ಲವೂ ...ಾಂತ ಕಂಡಿತು. ಕಾಳಮಾವನ ಮುಖದಲ್ಲಿ ...ಮಹಾಸ ಮಿನುಗಿತು. ಅವನ ಮಾತಿನಲ್ಲಿ ಉತ್ಸಾಹ ...ತು. ಇದನ್ನ ಸೂಕ್ಷ್ಮವಾಗಿ ಗಮನಿಸಿದ ಉಗ್ರಿ ಕೆಣಕುವ ...ಯಲ್ಲಿ,



...ನ್ನ ಮಕದಲ್ಲಿ ಶೆಟ್ರು ಕಳೇವು ಎದ್ದು ಕಾಣ್ತಾ ... ಮಾವ" ಎಂದ.

...ಮಾವ ಶೆಟ್ಟಿ ಕಳೆನಪ್ಪ? ಗಾಣಿಗ ಶೆಟ್ಟಿದೊ, ...ಬಟಿಗ ಶೆಟ್ಟಿದೊ, ಇಲ್ಲ ಬಳೆ ಶೆಟ್ಟಿದೊ?"

...ಯಾವ ಶೆಟ್ಟಿದೂ ಅಲ್ಲ, ಜಗದೀಶ್ ಶೆಟ್ರು ಮಕದಲ್ಲಿ ...ಳೆ ಬಂದದೆ."

...ಮಂತ್ರಿಯಾದನಲ್ಲ ಅದ್ಕೆ" ಎಂದ ಸೀರ.

...ಮುದ್ದೇನಾಗಿದ್ದ ಅವುನೂ?" ಎಂದ ಕಾಳಮಾವ.

...ಮುದ್ದು ವಿಧಾನಸಭೆ ಸ್ಪೀಕರ್ರಾಗಿದ್ದ ಕಣಮಾವ. ಈ ... ಪೇಟೆ ಕೃಷ್ಣ ಕುಂತಿದ್ದ ನೋಡು ಅದೇ ಜಾಗ ... ಎಂದ ಉಗ್ರಿ.

...ನ್ಯಾರ್‌ಪೇಟೆ ಕಿಸ್ನ ಏನಾದುನ್ನ?" ಎಂದ ಸೀರ.

...ಮನೆತ ಅವುನೆ. ದ್ಯಾವೇಗೌಡನ ದೃಷ್ಟಿ ಅವುನ ... ಸರಿಯಾಗೆ ಬದ್ದಿದ್ರಿಂದ ಅವುನ ರಾಜಕೀಯನು ...ನಂಗೆ ಕಾಣ್ತಾ ಅದೆ."

...ದ್ಯಾಕೇ?"

...ದ್ಯಾಕೆ ಅಂದ್ರೆ ಇನ್ನು ಮುಂದೆ ಜೆಡಿಎಸ್ಸಿಗೋ ...ಲ್ಲ ಕುಮಾರಣ್ಣ ರೇವಣ್ಣ ಅನಿತಕ್ಕ ಇವುರ್ಯಲ್ಲ ಮುಂದೆ ...ಡ ಮ್ಯಾಲೆ ಹಿಂದಕೋಗಿ ನಿಂತಗಬೇಕು. ಕೆ.ಆರ್. ...ಕಿಷ್ಣನಿಗೆ ಇದಾಗದಿಲ್ಲ. ಅದ್ಕೆ ಇನ್ನು ಮುಂದೆ ...ರಬವುದು. ಸಿಂದ್ಯನಂಗೆ ಸ್ವಾಭಿಮಾನ ಬುಟ್ಟು ...ದ್ರೆ ದ್ಯಾವೇಗೌಡನ ಜ್ವತಿಗೋಗಿ ಸೇರಿಕಬೇಕು."

...ವುನು ಸೇರ್ಲಿ ಬುಡ್ವ. ಸೆಟ್ರಿಗ್ಯಾವ ಕಾತೆ ಕೊಟ್ರುಲಾ?" ...ಕಾಳಮಾವ.

...ಮೀಣಾಭಿವೃದ್ಧಿ ಮಂತ್ರಿ ಕಣ ಮಾವ. ಶೋಭ ...ಜೆ ಮ್ಯರದಲಲ್ಲ ಆ ಖಾತೆ ಅದು."

...ವುನ್ಯಂಗೇ?"

...ವುನ್ಯಂಗೇ ಅಂದ್ರೇನೇಳನ. ಅಂಥ ವಳ್ಳೆ ಕ್ಯಲಸಗಾರಲ್ಲ ...ಈ ಹಿಂದೆ ನಿಭಾಯಿಸಿದ ಖಾತೆ ನೋಡಿದ್ರೆ ಗೊತ್ತಾಯ್ತದೆ. ರೆಡ್ಡಿಗಳೇಳಿದಂಗೆ ಕೇಳಿಕೊಂಡು ಕಾಲ ಹಾಕ್ತನೆ. ಯಾಕಂದ್ರೆ ರೆಡ್ಡಿಗಳೇ ಅವುನ್ನ ಮಂತ್ರಿ ಮಾಡಿದ್ದು."

"ಅವುನು ಮದ್ಲಿದ್ದ ಕ್ಯಲಸದಲ್ಲಿ ಏನೂ ಪಾಯ್ದೆ ಇರಲಿಲ್ವ?"

"ಇದ್ಯಾಕಲ್ಲಿರನು? ಇಲ್ದೆಯಿರೊವೊತ್ತಿಗೆ ಮಂತ್ರಿಯಾದ. ಮಂತ್ರಿಯಾದರೆ ಬೇಕಾದೋಟು ದುಡ್ಡು ಮಾಡಬವುದು, ಆಸ್ತಿ ಮಾಡಬವುದು, ರಾಜಕೀಯ ಮಾಡಬವುದು. ಅದೇ ಸ್ಪೀಕರ್ರಾಗಿ ಅದನ್ನಲ್ಲ ಮಾಡಕ್ಯಾಗದಿಲ್ಲ ಕಣಮಾವ. ಅದ್ಕೆ ಜಗದೀಶ್ ಶೆಟ್ಟಿ ಅತ್ತೂ ಕರದು ಮಂತ್ರಿಯಾದ."

"ಇವತ್ತಿನ ದಿವಸದಲ್ಲಿ ಮಂತ್ರಿಗಳಿಗೆ ಬ್ಯಲೆ ಕಡಮೆ ಕಂಡ್ಯ."

"ಕಡಮೆ ಅಂತಿ ನೀನು. ಇಲವೇ ಯಿಲ್ಲ ಕಣ ಮಾವ. ಆದ್ರೆ ಆ ಮುಂಡೆ ಮಕ್ಕಳು ಮಂತ್ರಿಯಾಗಿದ್ದಿನಿ, ಭಾರಿ ಭಲೆ ಸಿಗತಾ ಅದೆ ಅಂತ ತಿಳಕಂಡವೆ. ಇದೇ ಇಲ್ಲಿ ಚಲುವರಾಯಸ್ವಾಮಿ ಇದ್ದ. ಯಮ್ಮೆಲ್ಲೆ ಆಗಿದ್ದಾಗ ಯಲ್ಲಾರ ಮನೆತಕ್ಕೂ ಬರನು. ಯಲ್ಲಾರ್ನು ಮಾತಾಡಸೋನು. ಮಂತ್ರಿ ಆದ ನೋಡು, ಬರಬಾರದಾಂಕಾರ ಬತ್ತವುನಿಗೆ. ಅವುನ ಕಾರು ಬರುವಾಗ ಅದ್ಯಂತದೋ ಸೈರನ್ ಕೂಗದು. ಜನ ನೋಡಿ 'ಓಹೊಹೊ ಇವುನ ತಿರುಕ ದವುಲತ್ತ ನೋಡಪ್ಪ ಯಂಗದೆ' ಅಂತ ಸಿಟ್ಟಾಗಿ ಸೋಲಿಸಿದ್ರುತ್ತಗೆ. ಮಂತ್ರಿಗಳಿಗೆ ಬ್ಯಲೆ ಕೊಡದೇ ಆಗಿದ್ರೆ ಅವುನ್ನ ಗೆಲ್ಲುಸೋರಪ್ಪ."

"ಆಗಿನ ಕಾಲದ ಮಂತ್ರಿಗಳಿಗೆ ಬ್ಯಲಿತ್ತು ಕಂಡ್ಯ. ಶಂಕರೇಗೌಡ, ಮಂಜಪ್ಪ, ಹುಚಮಾಸ್ತಿಗೌಡ ಇಂಥೋರ್ಯಲ್ಲ ಬತ್ತರೆ ಅಂದರೆ ನಾವೆ ಹೋಗಿ ನೋಡಿಕಂಡು ಬರವು" ಎಂದ ಸೀರ.

"ಒಂದು ಸತಿ ಟಿ. ಮರಿಯಪ್ಪ ನಮ್ಮೂರಿಗೆ ಬಂದಿದ್ದ. ಬಂದು ನಿಮ್ಮೂರಿಗೆ ಒಂದು ಕ್ಯರೆ ಕಟ್ಟುಸ್ತಿನಿ ಅಂದು ಹೋದ. ಒಂದೇ ವರ್ಸದಲ್ಲಿ ಕ್ಯರೆ ರೆಡಿಯಾಯ್ತು. ಅಂಥಾ ಮಂತ್ರಿಗಳು ಈಗೆಲ್ಲಿದ್ದರು?" ಎಂದು ಕಾಳಮಾವ.

"ಈಗ್ಲೂ ಅವುರೆ ದ್ವಡಪ್ಪ, ನಾವು ಗುರುತುಸ್ತಾಯಿಲ್ಲ" ಎಂದು ವಾಟಿಸ್ಸೆ ಬಂದ.

"ಯಾರವುರೆ ತೋರ್ಸ?"

"ಕಿಷ್ಣಯ್ಯ ಶೆಟ್ಟಿ, ರಾಮುಲು, ಎ.ಎಸ್. ಆಚಾರಿ, ಗೂಳಿಹಟ್ಟಿ ಶೇಖರ ಇವುರ್ಯಲ್ಲ ಕರ್ನಾಟಕ ಈವರಿಗೂ ಕಂಡರಿಯದ ಮಂತ್ರಿಗಳು."

"ಉಳದೋರಸ್ಯಾಕೆ ಬುಟ್ಯೊ? ಇಡೀ ಎಡೂರಪ್ಪನ ಸಂಪುಟದ ಮಂತ್ರಿಗಳ ನಾವ್ಯಾರು ಇಲ್ಲಿವರಿಗೂ ಕಂಡಿರಲಿಲ್ಲ. ಇದ್ದಿದ್ರಲ್ಲಿ ಶೋಭಾ ಕರಂದ್ಲಾಜೆ ಆ ಕಾಲದಲ್ಲಿ ಮನೋರಮಾ ಮಧ್ವರಾಜ್ ಇದ್ದಲ್ಲ ಅಂಗಿದ್ದು ಪಾಪ" ಎಂದ ಉಗ್ರಿ.

"ಮನೋರಮನಿಗಿಂತ್ಲೂ ಇವುಳು ಒಂದು ಕೈ ಮೇಲು ಕಣೊ ಉಗ್ರಿ. ಅವುಳಿಗಾದ್ರು ಮದಿವಾಗಿ ಮಕ್ಕಳಿದ್ವೊ. ಇವುಳಿಗೆ ಅದೂ ಇಲ್ಲ. ಸರಕಾರಕೆ ಅರ್ಪಿಸಿಕೊಂಡು ಕ್ಯಲಸ ಮಾಡೋಳು. ಅದಕೆ ಅಲವೆ ಎಡೂರಪ್ಪ ಯಮ್ಮತ್ತಂಗೆ ಅತ್ತಿದ್ದು."

"ಎಡೂರಪ್ಪನ ಅಳ ಯಾಕೊ ನಿಲ್ಲಂಗೆ ಕಾಣ್ತಾಯಿಲ್ಲ ಕಣೊ."

"ಅದ್ಯಾಕಿನ್ನೂ ಅಳತಾಯಿದ್ದನ್ನ?" ಎಂದಳು ಜುಮ್ಮಿ.


"ನಿನ್ನ ಸಿಟ್ಟು ಅರ್ಥವಾಯ್ತು ಕಣಕ್ಕ. ಎಡೂರಪ್ಪ ಶೋಭನ ವಿಷಯದಲ್ಲಿ ಅಳತಾ ಅವುನೆ ಅಂತ ಅಲವೆ ನೀನು ತಿಳಕಂಡಿರದು. ಮ್ಯಾಟ್ರು ಅದಲ್ಲ, ಎಡೂರಪ್ಪ ಇನ್ನುಮ್ಯಾಲೆ ಮನಸಿಗೆ ಬಂದಂಗೆ ಆಡಳಿತ ಮಾಡದಂಗೆ ಹಗ್ಗ, ಮೂಗುದಾರ, ಕೊಳ್ಳುರಿ, ಕೊಂಬಣಸು ಯಲ್ಲಾನು ಹಾಕಿ ಗೂಟ ಹೂದವುರೆ ಕಣಕ್ಕ."

"ಅಂಗಂದ್ರೇನು ಸರಿಯಾಗೇಳ್ಕ."

"ಎಡೂರಪ್ಪನಿಗಿಂತ ಮ್ಯಾಲೆ ಒಂದು ಕಮಿಟಿ ಮಾಡ್ಯವುರೆ ಕಣಕ್ಕ. ಆ ಕಮಿಟಿ ಹೇಳಿದಂಗೆ ಎಡೂರಪ್ಪ ಕ್ಯಲಸ ಮಾಡಬೇಕು."

"ಇವುನು ಸರಿಯಾಗಿ ಮಾಡ್ತಿರಲಿಲವೇನೊ, ಅದ್ಕೆ ಅಂಗೆ ಮಾಡ್ಯವುರೆ."

"ನಿನಿಗೂ ರಾಜಕಾರಣ ಚನ್ನಾಗೆ ಅರ್ಥಾಗ್ಯದೆ ಬುಡಕ್ಕ. ಒಂದರ್ಥದಲ್ಲಿ ನೀನೇಳಿದ್ದು ನಿಜ. ಎಡೂರಪ್ಪ ಮನಸಿಗೆ ಬಂದಂಗೆ ಆಡಳತ ಮಾಡ್ತಯಿದ್ದ. ಪರೆಗ್‌ಜಾಂಪಲ್ ಮುಖ್ಯಮಂತ್ರಿ ಆದೇಟಗೆ ಗೋಕರ್ಣ ತಗಂಡೋಗಿ ರಾಮಚಂದ್ರಾಪುರದ ಮಠಕ್ಕೆ ಕೊಟ್ಟ. ಅದು ಹೋಗ್ಲಿ ಅಂತ ಸುಮ್ಮನಿದ್ರೆ ನಮ್ಮ ದಡಗದ ಕಾವಲಲ್ಲಿರೊ



ಅಮೃತ್‌ಮಹಲ್ ರಾಸು ಹುಲ್ಲುಗಾವುಲ ಸಮೇತ ದಾನ ಮಾಡಿದ್ದ. ಜನ ಪ್ರತಿಭಟಸೋವತ್ತಿಗೆ ಅದು ಉಳಕತ್ತು. ಇನ್ನ ಬಜೆಟ್ ಮಾಡುವಾಗ ಮಠಗಳಿಗ್ಯಲ್ಲ ದುಡ್ಡು ಕೊಟ್ಟುಬುಟ್ಟ. ಮಠದಲ್ಲಿ ದುಡ್ಡು ಎಷ್ಟದೆ ಅಂದ್ರೇ ಪಾಪ ಸ್ವಾಮಿಗಳು ಎಷ್ಟು ಮಜಾ ಮಾಡಿದ್ರು ಖರ್ಚಾಯ್ತಾಯಿಲ್ಲ. ನಮ್ಮ ಚುಂಚನಗಿರಿಸ್ವಾಮಿ ಹೆಲಿಕಾಪ್ಟರ ತಂದು ನಿಲ್ಲಿಸಿಗಂಡವುರೆ. ಆ ಸುತ್ತೂರು ಸ್ವಾಮಿಯಂತು ಖಾಲಿ ಜಾಗ ಎಲ್ಯದೆ ಅಂತ ಹುಡಿಕಂಡು ತಿರುಗ್ತನೆ. ಇನ್ನ ಸಾಯಕಡೆಸತಿ ರಾಂಭಟ್ಟರು ಬಾಂಗಡೆ ಮೀನು ತಿಂದು, ಅನ್ನಂಗೆ ಸಿದ್ದಗಂಗೆ ಸ್ವಾಮಿಗಳು ರಾಜಕಾರಣದ್ವಳಿಕೆ ಸಿಕ್ಕಿಬುಟ್ರು. ಒಂದು ವಿಶೇಷ ಅಂದ್ರೆ ಎಡೂರಪ್ಪನಿಂದ ಸಹಾಯ ಪಡದೋರ್‍ಯಾರು ಅವ್ರುನ ಕಷ್ಟಕಾಲದಲ್ಲಿ ಕೈಹಿಡಿಲಿಲ್ಲ. ಈಗ ಎಡೂರಪ್ಪನ ಕೈ ಕಟ್ಟಾಕಿರುವಾಗ್ಲು ಅವುರ್‍ಯಾರು ಒಂದು ಮಾತಾಡಿಲ್ಲ. ಇದಂತೂ ಬಾಳ ವಳ್ಳೆ ಬೆಳವಣಿಗೆ. ನೀನೇನೇಳ್ತಿ ದ್ವಡಪ್ಪ?"

"ನಾನೇನೇಳನ್ನ, ತ್ಯಾಳ ಹಳ್ಳಕಬಿದ್ರೆ ಆಳಿಗೊಂದು ಕಲ್ಲು ಅಂತ ಗಾದಿ ಮಾತೇ ಅದೆ. ಅದವತ್ತಿಂದ ಇವತ್ತಿಗೂ ಅಂಗೇ ಅದಪ್ಪ" ಎಂದ ಕಾಳಮಾವ.

"ಅಂತೂ ಎಡೂರಪ್ಪ ತ್ಯಾಳನೆ ವರತು ವಳ್ಳೆ ಮನಸಲ್ಲ ಅಂತ ನೀನು ಒಪ್ಪಗತ್ತಿ, ಇರಲಿ. ಆ ರೇಣುಕಾಚಾರಿ ವಿಶ್ವಾಮಿತ್ರನತ್ರ ನಕ್ಷತ್ರಿಕ ಯಂಗಿದ್ನೊ ಅದೇ ತರ ಎಡೂರಪ್ಪನತ್ರ ಇದ್ದೊನು. ಅಂಥೊನು ಶೋಬನ್ನ ಎಡೂರಪ್ನ ಬಾಯಿಗೆ ಬಂದಂಗೆ ಬೋದ್ರು ಕೂಡ ಎಡೂರಪ್ಪ ತಿರಗಿ ಒಂದು ಮಾತಾಡ್ತಿಯಿಲವಲ್ಲ. ಏನಿದರ ಗುಟ್ಟೂ ಅಂತ" ಎಂದ ವಾಟಿಸ್ಸೆ.

"ನಿಜ ಕಣೊ ವಾಟಿಸ್ಸೆ. ಎಡೂರಪ್ಪನಿಗೆ ಯಾರಾರ ಏನಾರ ಅಂದ್ರೆ ಸಿಡದೆ ಬೀಳ್ತನೆ. ಅದೇ ರೇಣುಕಾಚಾರಿ ವಿಷಯದಲ್ಲಿ ಒಂದೇ ಒಂದು ಮಾತ್ನೂ ಆಡಿಲ್ಲ ಅನ್ನದು ನನಿಗೂ ಗೊತ್ತು. ಅವುರಿಬ್ಬರ ನಡುವೆ ಏನೋ ಅದೆ ಕಣೊ."

"ಅದ್ನೆ ಕಣೊ ನಾನು ಕಂಡಿಡಿಯಕ್ಕೆ ಟ್ರೈ ಮಾಡ್ತಯಿದ್ದಿನಿ ಆಯ್ತಾಯಿಲ್ಲ. ಅಂತೂ ರಾಜಕಾರಣಕ್ಕೆ ಮೀರಿದ ಗುಟ್ಟು ಅವುರಿಬ್ಬರ ನಡುವೆ ಏನೊ ಅದೆ ಅಲವೆ ದ್ವಡಪ್ಪ?"

"ಅದೇನು ಕೇಮೆ ನೋಡಿರ್ಲ. ಬರಿ ಅವುರಿವುರ ಸುದ್ದಿ ಮಾತಾಡದ್ರಲ್ಲೇ ಹಾಳಾಗೋದ್ರಿ ನೀವು."

"ನಮಿಗಿನ್ನೆನು ದ್ವಡಪ್ಪ ಕ್ಯಲಸ? ಸುವರ್ಣ ಚಾನಲ್‌ಗೆ ರಂಗನಾಥ್ ಬಂದು ಕುಂತು ಏನು ಮಾಡ್ತನೇಳು? ನಾವು ಮಾಡೋ ಕ್ಯಲಸನೆ ಮಾಡದು. ಆದ್ರೆ ಅವುನಿಗೆ ಸಂಬಳ ಕೊಡ್ತರೆ. ನಮಿಗೆ ಅರ್ಧ ಲೋಟ ಕಾಫಿ ಕೊಡಸೋರೂ ಇಲ್ಲ. ಹೇಳಕ್ಕೆ ಒಂದು ಲೋಟ ಕಾಫಿಯ."

"ಕಾಫಿ ಯಾಕೆ ವಡೆನೆ ತಿನ್ನ. ಚಿಕ್ಕಣ್ಣ ವಡೆಕೊಡೊ ವಾಟಿಸೆಗೆ" ಎಂದಳು ಜುಮ್ಮಿ.

"ವಡೆ ಬಗ್ಗೆ ನನಿಗ್ಯಾಕೊ ಡವುಟಾಯ್ತಾ ಅದಲ್ಲಕ್ಕ."

"ಅದ್ಯಾಕ್ಲ?"

"ಮಂಜಯ್ಯಾರ ಅವ್ವನ ತಿಥಿಲಿ ವಡೆ ಪಾಯಸ ಮಾಡಿದ್ರಂತೆ. ವಡೆ ಮಾತ್ರ, ತುಂಬ ಮಿಕ್ಕವೆ ಅಂತ ಆ ಕೇರಿಯೋರ್ಯಲ್ಲ ಕುಕ್ಕೆ ಸುಬ್ರಮಣ್ಯ ದೇವಸ್ಥಾನದ ಭಟ್ರು ತರ ಬಾಯಾಡುಸ್ತಾಯಿದ್ದರಂತೆ. ಅದೇ ಡವುಟು ನೋಡು."

"ಸುಬ್ರಮಣಿ ಗುಡಿ ಪೂಜಾರಿಗಳ್ಯಾಕ್ಲ ಬಾಯಾಡುಸ್ತರೆ?"

"ಎಡೂರಪ್ಪ ತೊಂಬತ್ತು ಕೇಜಿ ವಣದ್ರಾಕ್ಷಿ ಕೊಟ್ಟಿದ್ನಲ್ಲಕ್ಕ ಅದ ಬಾಯಾಡುಸ್ತಾಯಿದ್ದವಂತೆ. ಯಾವ ಭಟ್ಟನ ಬಾಯಿ ನೋಡಿದ್ರು ಕುರಿಬಾಯಿ ನೋಡಿದಂಗಾದತಂತೆ!"

"?!"

...ತಾಯಿಯ ಕರುಳು



...ಗೆ ಆತ ಹೇಳಿದ್ದು:

...ಾವತ್ತು ವರ್ಷದ ಹಿಂದೆ ಕೇರಳದಲ್ಲಿ ಒಬ್ಬಾಕೆ ಇದ್ದಳು. ಈಕೆ ಅನೇಕಾನೇಕ ...ಪ ತಾಪತ್ರಯಗಳಲ್ಲಿ ಮುಳುಗಿದ್ದವಳು. ಅವಳ ಕುಟುಂಬದವರಿಗೆ ಆಶ್ಚರ್ಯವಾದದ್ದು ...ತ್ಯಾಗಿ ಕತೆ ಬರೆಯುವುದು ಗೊತ್ತಾದಾಗ. ಸದಾ ಮೌನವಾಗಿರುತ್ತಿದ್ದ ಬದುಕನ್ನು ... ದೂರದಿಂದ ಎಂಬಂತೆ ನಿರ್ಲಿಪ್ತವಾಗಿ ನೋಡುತ್ತಿದ್ದ ಈಕೆಯ ಕತೆಗಳನ್ನು ಆಕೆಯ ... ಪ್ರಕಟಿಸಿದ. ಇದೆಲ್ಲದರ ಬಗ್ಗೆ ಆಕೆಗೆ ಆಸಕ್ತಿಯೇ ಇರಲಿಲ್ಲ. ಆದರೆ ಆಕೆಗೆ ...ಗಿ ಅಕಾಡೆಮಿ ಪ್ರಶಸ್ತಿ ದೊರೆತಾಗ ಬೆಚ್ಚಿ ಕಂಗಾಲಾದಳು. ಅವಳನ್ನು ಪ್ರಶಸ್ತಿ ...ಭೆಕ್ಕೆ ಒತ್ತಾಯದಿಂದ ಕರೆದೊಯ್ದರು. ಅನೇಕ ಪತ್ರಕರ್ತರು ಆಕೆಯ ಸಂದರ್ಶನಕ್ಕಾಗಿ ...ದರು. ಅವಳಿಗೆ ಇದೆಲ್ಲ ವಿಚಿತ್ರ ಭಯಾನಕ ಲೋಕ. ಮನೆಗೆ ಹೋದ ಆಕೆ ಆ ...ತ್ಮಹತ್ಯೆ ಮಾಡಿಕೊಂಡಳು.

...ಳದ ಈ ಸಾಹಿತಿ ಹೇಳಿದ್ದರಲ್ಲಿ ನನ್ನ ಮನಸ್ಸಿಗೆ ತಾಗಿದ್ದು ಅಷ್ಟೇ. ಈ ಬಗ್ಗೆ ಅದೇಕೋ ಅಗತ್ಯಕ್ಕಿಂತ ...ಂತೆಯಲ್ಲಿ ತೊಡಗಿದೆ. ಅವಳ ಕುಟುಂಬವನ್ನು ಕಲ್ಪಿಸಿಕೊಂಡೆ. ಪ್ರೈಮರಿ ಶಾಲೆ ಓದಿರಬಹುದಾದ ಈ ... ಮದುವೆಯಾಗಲಿಲ್ಲ; ಮದುವೆಯ ಮಾತು ಬಂದಾಗಲೆಲ್ಲ ಜಾರಿಕೊಳ್ಳುತ್ತಿದ್ದಳು. ಅವಳ ಮನೆಗೆ ...ವಳ ಕುಟುಂಬದವರ ಕಣ್ಣುತಪ್ಪಿಸಿ ಅವಳ ಮನವೊಲಿಸಿ ಪ್ರೇಮಿಸಿ ಮದುವೆಯಾಗುವ ಗಂಡಸರಿರಲಿಲ್ಲ; ...ದ್ದನ್ನೂ ಇರಲಿಲ್ಲ, ಈಕೆಯ ಒಂದೇ ಸಂತೋಷ ಓದುವುದು. ತನ್ನ ಕೈಗೆ ಸಿಕ್ಕ ಎಲ್ಲ ಪುಸ್ತಕಗಳನ್ನು ...ಆಕೆ ಇದ್ದಕ್ಕಿದ್ದಂತೆ ಓದುವುದನ್ನು ನಿಲ್ಲಿಸಿದಳು; ಜನರೊಂದಿಗೆ ಮಾತು ಕಡಿಮೆ ಮಾಡಿದಳು. ಆಕೆ ...ಕತೆ ಬರೆಯತೊಡಗಿದಳು. ಆದರೆ ಅವಳ ಗುಟ್ಟು ಅವಳ ತಮ್ಮನೆದುರು ಬಯಲಾಯಿತು; ಅವಳ ...ವನ್ನು ಓದಿ ಚಕಿತಗೊಂಡ ಆತ ವಾರಪತ್ರಿಕೆಯೊಂದಕ್ಕೆ ಕೊಟ್ಟ. ಅಚ್ಚಾಗತೊಡಗಿದೊಡನೆ ಅವಳ ... ಜನಪ್ರಿಯವಾಗತೊಡಗಿತು; ಆ ಕೃತಿಯ ಹೊಸತನ, ದಟ್ಟ ಅನುಭವ ಮತ್ತು ಶೈಲಿಯ ವೈಚಿತ್ರ್ಯ ...ಮನ ಸೆಳೆಯಿತು. ಅವರು ಎಂದೂ ಈ ಬಗೆಯ ಕತೆ, ಈ ಶೈಲಿ ನೋಡಿರಲಿಲ್ಲ.

...ತನ್ನ ದುಃಖ ಮತ್ತು ತಾಪತ್ರಯಗಳಲ್ಲಿ ಮುಳುಗಿದ್ದಾಗಲೇ ಅವಳ ಕಾದಂಬರಿ ಪುಸ್ತಕವಾಗಿ ...ಇನ್ನೊಂದು ಕಾದಂಬರಿ ಪತ್ರಿಕೆಗಳಲ್ಲಿ ಬರತೊಡಗಿತ್ತು, ಆಕೆ ಖ್ಯಾತೆ ಎಂದು ಈಗ ಅವಳ ...ಗೊತ್ತು, ಸಾಹಿತ್ಯದ ಖ್ಯಾತಿ, ಹಣದ ಬಗ್ಗೆ ಗಮನ ಕೊಡದ ಕತೆಗಾರ್ತಿ ಮೌನವಾಗಿಯೇ ...ಷ್ಟು. ಅವಳ ಈಗಿನ ಆನಂದ ಬರೆಯುವುದು; ಬರೆದದ್ದನ್ನು ತಮ್ಮನಿಗೆ ತೋರಿಸುವುದು. ಅವಳಿಗೆ ಗೊತ್ತಿಲ್ಲದಂತೆಯೇ ಹಬ್ಬಿದ ಅವಳ ಖ್ಯಾತಿಯಿಂದಾಗಿ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿ ಬಂತು. ಅದರ ಅರ್ಥ ಕೂಡ ಆಕೆಗೆ ಆಗಲಿಲ್ಲ. ಆಕೆ ಎಂದೂ ಸಾರ್ವಜನಿಕ ಸಭೆಗಳಿಗೆ ಹೋದವಳಲ್ಲ, ಎಂದೂ ಭಾಷಣ ಮಾಡಿದವಳಲ್ಲ, ಕೇಳಿದವಳಲ್ಲ. ಈ ಬಗ್ಗೆ ಅವಳ ಹೆದರಿಕೆ ನಿಜವಾಯಿತು. ತನ್ನ ಕಾದಂಬರಿಯನ್ನು ಓದದೇ ಇದ್ದವರು, ಸಾರ್ವಜನಿಕ ಸಭೆ ಮತ್ತು ಪ್ರಶಸ್ತಿಗಳ ಮೇಲೆ ಜೀವನ ನಡೆಸುತ್ತಿದ್ದವರು ಅಲ್ಲಿದ್ದರು. ಆಕೆಗೆ ಅವರು ಯಾಕೆ ಗೌರವ ತೋರಿಸುತ್ತಿದ್ದರೆಂಬುದೇ ಗೊತ್ತಿರಲಿಲ್ಲ.

ತನ್ನ ಮರಿಗಳೊಂದಿಗೆ ತನ್ನ ಗೂಡನ್ನು ಮಲ್ಲೇಶ್ವರಂ ಸರ್ಕಲ್‌ನಲ್ಲಿ ಇಟ್ಟರೆ ಗುಬ್ಬಚ್ಚಿಗೆ ಹೇಗಾಗಬಹುದೋ ಹಾಗೆ ಆ ಹೆಂಗಸಿಗೆ ಆಗಿತ್ತು. ತನ್ನ ಕ್ರಿಯಾಕೋಶಕ್ಕೆ ಎಲ್ಲರೂ ಕೈಹಾಕುತ್ತಿದ್ದಂತೆ ಆಕೆಗೆ ಅನ್ನಿಸಿತ್ತು.

ಆದ್ದರಿಂದ ಆತ್ಮಹತ್ಯೆ ಮಾಡಿಕೊಂಡಳು.

ಬರವಣಿಗೆ ಅತ್ಯಂತ ಜೀವಂತವಾಗಿರುವುದು. ಮದುಮಗಳ ಲಜ್ಜೆಯ ಹತ್ತಿರ, ಆ ಕೇರಳದ ಹೆಣ್ಣುಮಗಳ ಗುಟ್ಟಾದ ಅನುಭವದ ಹತ್ತಿರ ಇದ್ದಾಗ ಮಾತ್ರ. ಅನುಭವಿಸುವುದು ಖಾಸಗಿ; ಬರೆಯುವುದು ಸ್ವಲ್ಪಮಟ್ಟಿಗೆ ಸಾರ್ವಜನಿಕ. ನಾವು ನಮ್ಮ ಭಾಷೆ ಮಾತ್ರ ಬಳಸಿ, ನಮಗಾಗಿ ಬರೆದುಕೊಳ್ಳುವುದಿಲ್ಲ; ಎಲ್ಲರ ಭಾಷೆಯಲ್ಲಿ ಬೇರೊಬ್ಬರಿಗೆ ಹೇಳುವುದಕ್ಕಾಗಿ ಬರೆಯುತ್ತೇವೆ. ಬರೆಯದೆ ಇದ್ದಾಗ ಖಾಸಗಿ ಅನುಭವ ನಮ್ಮನ್ನು ನಾಶ ಮಾಡಬಲ್ಲದು; ಬರೆದು ಆದರಿಂದ ನಾವು ಪೂರ್ತಿ ಬಹಿರಂಗಗೊಂಡಾಗ ಅದು ಕೂಡ ವ್ಯಕ್ತಿಯನ್ನು ಹತ್ತಿಕ್ಕಬಲ್ಲದು.



ಈ ಹೆಂಗಸಿನ ತರಹವೇ ಆತ್ಮಹತ್ಯೆ ಮಾಡಿಕೊಂಡವಳೊಬ್ಬಳಿದ್ದಾಳೆ: ಆಕೆ 1932 ರಲ್ಲಿ ಹುಟ್ಟಿ ಕಾವ್ಯ ರಚಿಸಿ ಆ ಕಾವ್ಯ ಜನರ ಗಮನಕ್ಕೆ ಬರುವ ಮುನ್ನವೇ 1963 ರಲ್ಲಿ ಆತ್ಮಹತ್ಯೆ ಮಾಡಿಕೊಂಡ ಅಮೆರಿಕನ್ ಕವಯಿತ್ರಿ ಸಿಲ್ವಿಯಾ ಪ್ಲಾತ್. ಏಟು ಕೊಟ್ಟಂತೆ ಗಟ್ಟಿಯಾಗಿ ಹೊಟ್ಟೆಯಾಳದಿಂದ ಬಂದಂತೆ ಎಲ್ಲ ತೊಳಲಾಟವನ್ನು ಹೊರಗೆಡಹಿ ಈಕೆ ಬರೆಯುತ್ತಿದ್ದಳು. 'ಜಾನಿ ಪ್ಯಾನಿಕ್ ಅಂಡ್ ಬೈಬಲ್ ಡ್ರೀಮ್ಸ್' ಎಂಬುದು ಈಕೆಯ ಪುಸ್ತಕ.


ಮೇಲಿನದು ನನ್ನ ಚಿಂತೆಯಿಂದಾದದ್ದು. ಇಷ್ಟೆಲ್ಲಾ ಆ ಹೆಣ್ಣುಮಗಳಿಗೆ ಆಯಿತೆ ಎಂದು ಮತ್ತೆ ಕೇಳಿದಾಗ ಆ ಮಲೆಯಾಳಿ ಹುಡುಗ ವಿವರಿಸಿದ-ಆ ಮಲೆಯಾಳಿ ಲೇಖಕಿಯ ಹೆಸರು ವಿಜಯಲಕ್ಷ್ಮಿ. ಆಕೆ ಅವಿವಾಹಿತೆಯಾಗಿ ಉಳಿದಳು. ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕಿಯಾಗಿದ್ದಳು. ಆಕೆಯ ಎರಡು ಕಾದಂಬರಿ ಪ್ರಕಟವಾದಾಗಲೂ ಅನೇಕರು ಆ ಕಾದಂಬರಿಗಳು ತಮ್ಮನ್ನು ಕುರಿತಂಥವು ಎಂದು ತಕರಾರೆತ್ತಿದ್ದರು. ಆಕೆ ಬರೆಯುವುದನ್ನು ನಿಲ್ಲಿಸಿದಳು. "ನಾನು ಬರೆಯದೆ ಬದುಕಲಾರೆ, ಆದರೆ ಏನು ಬರೆದರೆ ಈ ಜನ ರೊಚ್ಚಿಗೇಳುತ್ತಾರೆ" ಎಂದು ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಳು. ಆಕೆ ಎಂಥ ಒಳ್ಳೆಯ ಬರಹಗಾರ್ತಿಯೆಂದರೆ ಆಕೆ ಯಾರ ಮೇಲೂ ಬರೆಯದಿದ್ದರೂ ಆಕೆಯ ಕತೆಯಲ್ಲಿ ಎಲ್ಲರೂ ತಮ್ಮ ಪ್ರತಿಬಿಂಬ ಕಂಡರು.

ಆತ ಹೇಳಿದ್ದು, ನಾನು ಊಹಿಸಿದ್ದು ಎರಡೂ ಇರಲೆಂದು ಕೊಟ್ಟಿದ್ದೇನೆ.

ಜನವರಿ 26, 1992

ರಾಜಕಾರಣಿ ಮಾತಲ್ವ... ನಂಬಿಕೆ ಬರ್ಲಿಲ್ಲ

ಅನಕ



ಎಚ್.ಎಲ್. ಕೇಶವಮೂರ್ತಿ

ಇದು ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷಗಳ ಹಿಂದಿನ ಮಾತು ಇರಬಹುದು. ಜಗಳೂರು ಇಮಾಂ ಸಾಹೇಬರು ನಿಷ್ಠಾವಂತ ರಾಜಕಾರಣಿ ಆಗಿ ಜನರ ಬಾಯಲ್ಲಿ 'ಇಮ್ಮಣ್ಣ' ಆಗಿದ್ದರು. ಅವರು ಅನಾರೋಗ್ಯದಿಂದ ನರಳುತ್ತಿದ್ದಾಗ ಅವರನ್ನು ಕಂಡು ಬರಲು ಸಿರಿಗೆರೆ ಶಿವಮೂರ್ತಿ ಶಿವಾಚಾರ್ಯರು ಹೋಗಿದ್ದರಂತೆ. ಮಾತಿನ ನಡುವೆ ಅವರು 'ಇವತ್ತಿನ ರಾಜಕಾರಣಿಗಳನ್ನು ಕಂಡು ನಿಮಗೇನನ್ನಿಸುತ್ತದೆ' ಎಂದು ಕೇಳಿದರಂತೆ. ಇಮಾಂ ಸಾಹೇಬರು ತಕ್ಷಣ ಉತ್ತರಿಸಿದರಂತೆ- 'ಉಗಿಯಬೇಕು ಅನ್ನಿಸುತ್ತಿದೆ.'

ಅವತ್ತಿನ ರಾಜಕಾರಣಿಗಳೇ 'ಉಗುಳು ಪೂಜೆ'ಗೆ ಅರ್ಹರೆನಿಸಿದರೆಂದ ಮೇಲೆ ಇವತ್ತಿನವರು ಯಾವ ಸೇವೆಗೆ ಅರ್ಹರು ಎಂಬುದನ್ನು ತಿಳಿಯಲು ಇಮಾಂ ಸಾಹೇಬರು ಇಲ್ಲ, ಇದನ್ನು ಕೇಳಿದಾಗ ಯಾರೋ ಹೇಳಿದ ಕತೆ ನೆನಪಾಯಿತು.

ಇದು ರೆಸಾರ್ಟ್ ರಾಜಕೀಯದ ಕಾಲ. ಎಲ್ಲಿ ಆ ಕಡೆಯಿಂದ ಈ ಕಡೆಗೆ ಈ ಕಡೆಯಿಂದ ಆ ಕಡೆಗೆ ಕ್ಷಣಮಾತ್ರದಲ್ಲಿ ಹನುಮಂತ ಅವತಾರ ತಾಳಿಬಿಡುತ್ತಾರೋ ಎಂಬ ಆತಂಕದಿಂದ ಶಾಸಕರನ್ನು ಒಂದು ಕಡೆ ಕೂಡಿಹಾಕಿ ತಮ್ಮ ಪರವಾಗಿ ನಿರ್ಧಾರ ಬರುವಂತೆ ಜೋಪಾನ ಮಾಡುವುದು ನಾಯಕ ಆಗಬೇಕೆಂದು ತವಕಪಡುತ್ತಿರುವವರಿಗೆ ಅನಿವಾರ್ಯವಾಗುತ್ತದೆ. ಬೆಂಗಳೂರಿನ ರೆಸಾರ್ಟುಗಳಲ್ಲೇ ಇಟ್ಟರೆ ಎದುರು ಪಕ್ಷದವರು ಯಾವುದೋ ಮಾಯದಲ್ಲಿ ಎಗರಿಸುವ ಸಾಧ್ಯತೆ ಇರುವುದರಿಂದ ಅವರನ್ನೆಲ್ಲ ಬೇರೆ ರಾಜ್ಯಗಳಿಗೆ ಅಟ್ಟಿಕೊಂಡು ಹೋಗಿ ಹೆಂಡಕ್ಕೆ ಬಾಯಿ ಬಾಯಿ ಬಿಡುವವರಿಗೆ ಹೆಂಡ, ಖಂಡ ಕೇಳಿದವರಿಗೆ ಖಂಡ, ಹೆಣ್ಣಿನ ತೆವಲಿರುವವರಿಗೆ ಹೆಣ್ಣು ಇಂತಹವನ್ನೆಲ್ಲ ಕಾಲಕಾಲಕ್ಕೆ ಸರಬರಾಜು ಮಾಡಿ ತೃಪ್ತಿಪಡಿಸಲಾಗುತ್ತದೆ. ಒಂದು ರೀತೀಲಿ ರೆಸಾರ್ಟ್ ರಾಜಕೀಯ ಅಂದರೆ ಸಾಕ್ಷಾತ್ ಸ್ವರ್ಗ ಇದ್ದಂಗೆ. ಎಷ್ಟೊ 'ಶಾಸಕ' ಅನ್ನಿಸಿಕೊಂಡವ್ರು ಕನಸಿನಲ್ಲೂ ಇಂತಹ ವೈಭೋಗ ಕಂಡಿಲ್ಲದೋವು. ಇಂತಹವಕ್ಕೆಲ್ಲ ಅನುವು ಮಾಡಿದ ಮಹಾಶಯರನ್ನು ಹಾಡಿ ಹೊಗಳಿ, ಅವನು ಹೇಳಿ, ಹೇಳಿದಾಗ ಅಲ್ಲಿಂದಲೇ ಮಾಧ್ಯಮಗಳಿಗೆ ಸಂದರ್ಶನಾನೋ, ಪತ್ರಿಕಾ ಹೇಳಿಕೇನೋ ನೀಡಿ ಕೃತಾರ್ಥವಾಗುತ್ತವೆ...

ಈ ಪರಂಪರೆಗೆ ಅನುಗುಣವಾಗಿ ಒಂದು ಬಸ್ಸಿನಲ್ಲಿ ಶಾಸಕರನ್ನೆಲ್ಲ ಕಟ್ಟಿಕೊಂಡು ಯಾರಿಗೂ ಪತ್ತೆಯಾಗದಂತಹ ಸ್ಥಳಕ್ಕೆ ಹೋಗಲಾಗುತ್ತಿತ್ತು, ಕಾಲವ್ಯಯ ಮಾಡಬಾರದು ಎಂಬ ಮನೋಭಾವದ ಶಾಸಕರು ಪರಮಾತ್ಮನ ಸೇವೆಯಲ್ಲಿ ಮಗ್ನರಾಗಿದ್ದರು. ಇಂತಹ ಅಮೃತಘಳಿಗೆಯಲ್ಲಿ ಯಾವುದೋ ಒಂದು ತಿರುವು ನಿಭಾಯಿಸಲಾಗದ ಚಾಲಕ ರಸ್ತೆ ಪಕ್ಕದ ಮರಕ್ಕೆ ಮುತ್ತಿಕ್ಕಿಸಿದ. ಅದೂ ಎಂತಹ ಮುತ್ತು ಅಂತೀರಿ. ಪ್ರಥಮ ಚುಂಬನವೇ ದಂತ ಭಗ್ನಂ ಅಂತಾರಲ್ಲ ಅಂತಹದ್ದು. ಪ್ರಥಮ ಅಪಘಾತದಲ್ಲೇ ಕೆಲವರು ಸತ್ತರು. ಕೆಲವರು ಜೀವಂತವಾಗಿದ್ದರೂ ಏಳುವ ಸ್ಥಿತಿಯಲ್ಲಿರಲಿಲ್ಲ.

ಒಬ್ಬ ಹಳ್ಳಿಯ ಗಮಾರ ಇದನ್ನು ನೋಡಿದ. ವೇಷ ನೋಡಿ ನಮ್ಮನ್ನು ಆಳುವ ದೊರೆಗಳು ಎಂದು ಗುರುತಿಸಿದ. ಅಯ್ಯೋ ದೊರೆಗಳನ್ನು ಹಿಂಗೇ ಬಿಟ್ಟರೆ ರಾಜ್ಯವಾಳುವ ದೇಹಗಳು ನಾಯಿನರಿಗೆ ಆಹಾರವಾಗುತ್ತವಲ್ಲಾ ಎಂದು ಚಿಂತಿಸಿದ. ಇದಾಗಬಾರದು ಎಂದು ದೊಡ್ಡ ಗುಂಡಿ ತೋಡಿ ಆ ಶರೀರಗಳನ್ನೆಲ್ಲ ಎಳೆದು ಮಣ್ಣು ಮಾಡಿದ.

ಇತ್ತ ರಾಜಧಾನಿಯಲ್ಲಿ ಹಾಹಾಕಾರವೇನೂ ಆಗಲಿಲ್ಲ. ಚುನಾವಣೆ ನಡೆದ ನಂತರ ಜನರ ಜೊತೆ ಮುಖಮುನಿಸು ಮಾಡುವುದು ಲಾಗಾಯ್ತಿನಿಂದ ಬಂದಿರೋ ಪದ್ಧತಿಯಾಗಿದ್ದರಿಂದ ಜನರಿಗೆ ಅವರು ಇದ್ದದ್ದೂ ಗೊತ್ತಾಗುತ್ತಿರಲಿಲ್ಲ; ಸತ್ತದ್ದೂ ತಿಳೀಲಿಲ್ಲ. ಅವರನ್ನೆಲ್ಲ ಕೂಡಿಹಾಕಲು ಸಕಲ ಸಿದ್ಧತೆಗಳನ್ನು ಮಾಡಿದ್ದ ರಾಜಕಾರಣಿ ಇದ್ನಲ್ಲ ಅವನಿಗೆ ಇಂತಹದ್ದೇನಾದರೂ ಸಂಭವಿಸಿರಬಹುದು ಅನ್ನುವ ಅನುಮಾನ ಬಂದರೂ, ಇದು ಸತ್ಯವೇ ಆಗಿದ್ದರೆ ತನಗೆ ದಕ್ಕಬಹುದಾದ ಅಧಿಕಾರದಿಂದ ವಂಚಿತನಾಗುತ್ತೇನಲ್ಲಾ ಅಂತಾವ 'ಅವರು ಅಲ್ಲಿರಬಹುದು', 'ಅವರು ಇಲ್ಲಿರಬಹುದು', 'ನನಗೆ ಅವರ ವಿಚಾರವೇ ಗೊತ್ತಿಲ್ಲ' ಎಂದೆಲ್ಲ ಕ್ಷಣಕ್ಕೊಂದು ಹೇಳಿಕೆ ನೀಡಿ ಕಾಲ ನೂಕ್ತಾ ಬಂದ. ಹೇಗಾದರೂ ಅಧಿಕಾರ ಉಳಿಸಿಕೋಬೇಕು ಅಂತಿದ್ದೋನು 'ಅವು ಹೋದ್ರೆ ಪೀಡೆ ಕಳೆದ ಹಾಗಾಯಿತು' ಎಂದು ಮನಸ್ಸಿಗೆ ನೆಮ್ಮದಿ ತಂದುಕೊಂಡರೂ ಮೇಲ್ನೋಟಕ್ಕೆ 'ಕೂಡಲೇ ಎಲ್ಲಿದ್ದರೂ ಬನ್ನಿ, ಜನರು ನಿಮ್ಮನ್ನು ಕಾಣದೆ ಕಂಗಾಲಾಗಿದ್ದಾರೆ' ಎಂಬ ಹೇಳಿಕೆ ನೀಡಿದ. ರಾಜಕೀಯ ಹುಡುಗಾಟದ ಕೆಲವರು 'ಶಾಸಕರು ತಪ್ಪಿಸಿಕೊಂಡಿದ್ದಾರೆ. ಹುಡುಕಿಕೊಡಿ' ಎಂದೆಲ್ಲ ಘೋಷಿಸುತ್ತಾ ಜನರಿಗೆ ಪುಕ್ಕಟೆ ಮನರಂಜನೆ ನೀಡಿದರು. ಶಾಸಕರ ಹೆಂಡತಿ ಮಕ್ಕಳು ಚಿನ್ನವೀಡುವಿನ ಜನ ಎಲ್ಲರೂ ನಿಜಕ್ಕೂ ಆತಂಕಕ್ಕೆ ಒಳಗಾಗಿ ಪೊಲೀಸರಿಗೆ ದೂರು ನೀಡಿದರು.

ಪೊಲೀಸರಿಗೂ ಹಾಳಾದ ಶಾಸಕರ ಕಾಟ ಸಾಕುಬೇಕಾಗಿತ್ತು. ಜೊತೇಲಿ ಚೆನ್ನಾಗಿಯೇ ಇರುತ್ತಿದ್ದರು. ಒಳಗೊಳಗೆ ಯಾವ್ಯೋನ್ನೋ ತಂದು ಕುಳ್ಳಿರಿಸಿಬಿಡುತ್ತಿದ್ದರು. ಪೊಗದಸ್ತಾದ ಸ್ಥಳ ಆದರೆ ಇಷ್ಟು ಅಂತ ಹಣ ವಸೂಲು ಮಾಡುತ್ತಿದ್ದರು. ಅಲ್ಲಿಗೆ ಹೋಗಿ ಅಂಡೂರುವ ಅನ್ನೋ ಅಷ್ಟರಲ್ಲಿ ಬೇರೆ ಯಾವನೋ ಕಾಲಳ್ಳಾಡಿಸಿಕೊಂಡು ಕುಂತಿರುತ್ತಿದ್ದ. 'ಕೊಟ್ಟರೋ ದುಡ್ಡ ಹಿಂತಿರುಗಿಸೋ' ಅಂತ ಕುತ್ಗೆ ಪಟ್ಟಿ ಹಿಡಿದು ಕೇಳುವ ಹಾಗಿಲ್ಲ, ನಯವಾಗಿ ಕೇಳಿದರೆ 'ಇನ್ನೊಂದು ಜಾಗ ನೋಡು. ಅಲ್ಲಿಗಾಕುಸ್ತೀನಿ' ಅಂತಾನೆ. ಅವರೆಲ್ಲ ತೊಲಗಿದ್ದೇ ನಿರಾಳ ಆಯ್ತು, ಕೊಡಬೇಕಾದ ತಿಂಗಳ ಮಾಮೂಲಿ ಉಳೀತು ಎಂದೆಲ್ಲ ಯೋಚಿಸಿ ಆರಾಮವಾಗಿದ್ದರು.

ಅಂತೂ ಇಂತೂ ಶಾಸಕರ ಗೈರುಹಾಜರಿ ಯಾರನ್ನೂ ಆಳವಾಗಿ ಕಲಕಲೇ ಇಲ್ಲ, ಸರ್ಕಾರಿ ಕೆಲಸ ಎಂದಿನಂತೆ ನಡೆಯುತ್ತಲೇ ಇದ್ದವು. ಶಂಕುಸ್ಥಾಪನೆ, ಉದ್ಘಾಟನೆಗಳು ವಿಜೃಂಭಣೆಯಿಂದ ಸಾಗುತ್ತಲೇ ಇದ್ದುವು. ಒಟ್ಟಾರೆಯಾಗಿ ಶಾಸಕರಿಲ್ಲದೆಯೂ ರಾಜ್ಯ ನಡೆಯುತ್ತಿತ್ತು!

ಶಾಸಕರ ನಾಪತ್ತೆಯಿಂದ ನಿಜವಾಗಿಯೂ ತೊಂದರೆ ಗೀಡಾದದ್ದು ಎಂದರೆ ಪ್ರಜಾಪ್ರಭುತ್ವದ ನಾಲ್ಕನೇ ಕಾಲು. ರಾಜಕಾರಣಿಯ ಬಾಯಿಯಿಂದ ಉದುರಿದ್ದು ಮಾತ್ರ 'ಸುದ್ದಿ' ಎಂಬ ನಂಬುಗೆಯವರೆಲ್ಲ ಕಂಗಾಲಾದರು. ಉಚ್ಚೆಯಲ್ಲೂ ಮೀನು ಹಿಡಿಯುವ ಸಾಧಕರು ಚುರುಕಾದರು. ಕಂಡಕಂಡ ಕಡೆಯಲ್ಲೆ ಪೊಲೀಸ್ ಅಧಿಕಾರಿಗಳನ್ನು ನಿಲ್ಲಿಸಿ, 'ಎಲ್ಲಿದ್ದಾರೆ ಶಾಸಕರು' ಎಂದು ಕೇಳುತ್ತಾ ಟಿವಿ ವಾಹಿನಿಯವರು ಟಿಆರ್‌ಪಿ ಹೆಚ್ಚಿಸಿಕೊಂಡರೆ, ಪತ್ರಿಕೆಗಳು ಪತ್ತೇದಾರಿ ಕಾದಂಬರಿಯಂತೆ ರೋಚಕವಾಗಿ ವರದಿ ನೀಡುತ್ತಾ ಪ್ರಸಾರ ಹೆಚ್ಚಿಸಿಕೊಂಡವು. ಕ್ರೈಂಪ್ರಿಯ ಮಹಾಜನತೆಯಿಂದಾಗಿ ಬರಬರುತ್ತಾ ಶಾಸಕರ ನಾಪತ್ತೆಯೂ ಮಾಧ್ಯದವರಿಗೆ ಲಾಭದಾಯಕವಾಗಲಾರಂಭಿಸಿತು.



ಈ ಎಲ್ಲ ಘಟನೆಗಳೂ ಪೊಲೀಸಿನವರಿಗೆ ತಲೆನೋವಾಯಿತು. ಮಾಧ್ಯಮದವರ ಪ್ರಶ್ನೆಗೆ 'ಹುಡುಕುತ್ತಾ ಇದ್ದೀವಿ', 'ಬೇರೆ ರಾಜ್ಯದ ಪೊಲೀಸರಿಗೆ ವಿಷಯ ತಿಳಿಸಿದ್ದೀವಿ', 'ಖಚಿತ ಮಾಹಿತಿ ಸಿಕ್ಕಿದೆ', 'ಸುಳಿವು ಸಿಕ್ಕಿದೆ' ಎಂದೆಲ್ಲ ಹೇಳಿ ಹೇಳಿ ಸುಸ್ತಾದರು. ಜನರಿಗೆ ನಂಬಿಕೆ ಬರಲಿ ಎಂದು 'ತನಿಖೆಗೆ ತಂಡ ರಚಿಸಿದ್ದೀವಿ' ಎಂದು ಹೇಳಿ ನೀತಿ ನಿಯತ್ತು ಅಂತೆಲ್ಲ ತಲೆತಿನ್ನುತ್ತಿದ್ದ ಕೆಲವರ ಹೆಸರನ್ನು ಅದಕ್ಕೆ ಸೂಚಿಸಿದ್ದರು. ನಿಷ್ಠಾವಂತ ಪೊಲೀಸರ ಕೈಯಲ್ಲಿ ಶಾಸಕರು ಸುಭದ್ರವಾಗಿರುವುದರಲ್ಲಿ ಸಂಶಯ ಇಲ್ಲ ಎಂದು ಮಾಧ್ಯಮಗಳು ಸಾರಿದವು!

ನಿಷ್ಠಾವಂತ ತಂಡ ಅಲ್ಲಿಇಲ್ಲಿ ಶೋಧಿಸಿತು. ಕೊನೆಗೆ ಅಪಘಾತ ನಡೆದ ಸ್ಥಳಕ್ಕೇ ಬಂದಿತು. ಹಳ್ಳಿಯ ಗಮಾರ ಕುರಿ ಮೇಯಿಸುತ್ತಾ ಅವತ್ತೂ ಅಲ್ಲೇ ಇದ್ದ. ಇವನ್ನ ಬಿಟ್ಟರೆ ಬೇರೆ ದಾರಿ ಇಲ್ಲ ಎಂದು ತಿಳಿದಿದ್ದ ತಂಡ ಮಾಮೂಲಿ ಪೊಲೀಸ್ ವರಸೆ ಬಿಟ್ಟು ನಯವಾಗಿ 'ಅಯ್ಯ ದೊರೆ ಇಲ್ಲಿ ಬಸ್ ಅದಲ್ಲ...' ಎನ್ನುವಷ್ಟರಲ್ಲಿ ಅವ 'ಅದೆ' ಅಂದ. 'ಎಷ್ಟು ದಿನದಿಂದ ಅದೆ' ಅಂದದ್ದಕ್ಕೆ 'ಸುಮಾರು ದಿನ ಆಯ್ತು' ಅಂದ. 'ಅಪಘಾತ ನಡೆದಾಗ ನೀನು ಇದ್ದ' ಅಂದದ್ದೇ 'ಇದ್ದೆ' ಅಂದ. 'ನೋಡ್ದ' ಅಂದ್ರು. 'ನೋಡ್ದೆ' ಅಂದ. 'ಅದರಲ್ಲಿದ್ದೋರು ಏನಾದ್ರು?' ಎಂದು ಕೇಳಿದ್ದಕ್ಕೆ 'ಸತ್ತೋದ್ರು' ಅಂದ.

ತಂಡಕ್ಕೆ ನಂಬಿಕೆ ಬರ್ಲಿಲ್ಲ, ಅಪಘಾತ ತೀವ್ರವೇ ಆಗಿದ್ದರೂ ಕೆಲವರಾದರೂ ಬದುಕಿರುವ ಸಾಧ್ಯತೆ ಇರಬಹುದು. ಗಮಾರನ ಮಾತಿನಲ್ಲಿ ಸಂಶಯ ಮೂಡಿತು.

ಅದನ್ನು ಗಮನಿಸಿದ ಅವ ಹೇಳಿದ –'ನಾನೇ ಅವರ್ನೆಲ್ಲ ಎಳ್ದಾಕಿ ಇಲ್ಲಿ ಮಣ್ಣು ಮಾಡಿದೆ' ಎಂದು ಒಂದು ಸ್ಥಳ ತೋರಿಸಿದ.

ತಂಡಕ್ಕೆ ಯಾವುದೋ ಅನುಮಾನ.

'ಅವರೆಲ್ಲ ಸತ್ತೋಗಿದ್ರ?'

'ಹೇಳಾಕಾಗಾಕಿಲ್ಲ, ವಸಿ ಜನ ನನಗೆ ಜೀವ ಅದೆ, ಜೀವ ಅದೆ ಅಂತಿದ್ರೊ. ರಾಜಕಾರಣಿಗಳ ಮಾತನಂಬೋಕಾಯ್ತದ? ಹಂಗೆ ಬಿಟ್ರ ನಾಯಿನರಿ ತಿಂದು ಬುಡ್ತವೆ ಅಂತ ಎಲ್ಲರ್ನೂ ಮಣ್ಣು ಮಾಡ್ದೆ' ಅಂದ ಗಮಾರ!

ಎಷ್ಟು ಸಾರಿ?

'ಹದಿನೇಳು ಕಲ'

'ಇಲ್ಲ ಹದಿನೈದು'

'ಏನ್ ಬೆಟ್ಟು? ಹದಿನೇಳೇಯ'

'ಸಾವಿರ ಸಾವಿರ ಏನಂತೀಯ?'

'ಆಗ್ಲಿ ಕಲ'

ಬೆಳಿಗ್ಗೆಯೇ ಮನೆಮುಂದೆ ಕಚ್ಚಾಡುತ್ತಿದ್ದರು.

'ಇದೇನಿರ್ಲ ಇದು' ಎಂದು ಕೇಳಿದೆ.

'ಏನಿಲ್ಲ ಕಣ್‌ಮಾವ' ಅಂದ ಒಬ್ಬ ತುಸು ಮರ್ಯಾದೆ ಕೊಡುತ್ತಾ.

'ಅದೇನೋ ಹದಿನೇಳು ಹದಿನೈದು ಅಂತಿದ್ರಿ?'

'ಅದೇ ಕಣ್‌ಮಾವ. ಯಡ್ಯೂರಪ್ಪ ಅಧಿಕಾರಿಗಳ ವರ್ಗಾವಣೆ ಇನ್ನು ಮಾಡುವುದಿಲ್ಲ ಅಂತ ಹದಿನೇಳು ಸಲ ಹೇಳವ್ನೆ ಅಂತ ಅವ್ನು... ಇಲ್ಲ ಹದಿನೈದೇ ಸಲ ಅಂತ ನಾನು. ಯಾರು ಸರಿ ಮಾವ?'


!!!

ಕುರ್ಚಿ ಕೇಲಿಯೇ ಕುಛ್ ಭಿ ಕರೇಗಾ....!

ಕೆಲದಿನಗಳ ಹಿಂದೆ ಎಲ್ಲಿ ನೋಡಿದರೂ ರೆಡ್ಡಿಗಳಿಗೆ, ರೆಡ್ಡಿ ಪಟಾಲಂಗೆ ಉಗಿಯುವವರದ್ದೇ ಕಾರುಬಾರು. ಅಲ್ಪರ ಸಂಗದಿಂದ ಅಭಿಮಾನ ಭಂಗ ಎನ್ನುವವರಿಂದ ಹಿಡಿದು ಯಡ್ಡಿ ಈಗ ತಪ್ಪು ತಿದ್ದಿಕೊಂಡಿದ್ದಾರೆ, ಅವರಿಗೆ ನನ್ನ ನೈತಿಕ ಬೆಂಬಲವಿದೆ ಎಂದ ಅನಂತಮೂರ್ತಿಯವರ ತನಕ ಎಲ್ಲರ ಕಣ್ಣಿಗೂ ವಿಲನ್ ಆಗಿ ಕಾಣುತ್ತಿರುವುದು ರೆಡ್ಡಿ-ರಾಮುಲುಗಳು ಮಾತ್ರವೇ. ಆದರೆ ಅವತ್ತು ಕೇವಲ ತನ್ನ ಕುರ್ಚಿ ಆಸೆಗಾಗಿ ಸರಕಾರವನ್ನು ಈ ಗಣಿಕಳ್ಳರ ಪಾದದಡಿಗೆ ನೂಕಿದ ಯಡ್ಡಿಯ ಬಗ್ಗೆ ಮಾತಾಡುವವರಿಲ್ಲ, ರಾಜ್ಯದ ಅಮೂಲ್ಯ ಖನಿಜ ಸಂಪತ್ತು ಲೂಟಿ ಹೊಡೆದು ವಿದೇಶಗಳಿಗೆ ಸಾಗಿಸಿ ಮೆರೆಯುತ್ತಿರುವವರ ಹಂಗಿನಲ್ಲಿರುವುದು ಮುಂದೆ ಅಪಾಯಕ್ಕೆ ದಾರಿ ಎಂಬುದು ರಾಜಕೀಯದಲ್ಲಿ ಪಳಗಿದ ಯಡ್ಡಿಗೆ ಗೊತ್ತಿಲ್ಲವೆಂದಲ್ಲ, ಆದರೆ ಇದೆಲ್ಲ ಲೆಕ್ಕಾಚಾರ ಮಾಡಿದರೆ ನಾಳೆ ಕುರ್ಚಿ ಸಿಕ್ಕದಂತ ಯಾವ ಗ್ಯಾರಂಟಿ? ಬಂಡಾಯದ ಬಳಿಕ ನಾನ್ಯಾರಿಗೂ ಸೊಪ್ಪು ಹಾಕುವುದಿಲ್ಲವೆಂದು ಕೂಗಾಡಿದ್ದ ಯಡ್ಡಿ ಈಗ ಪುನಃ ಅದೇ ರೆಡ್ಡಿಗಳಿಗೆ ಶರಣಾಗಿ ಮಂಡಿಯೂರಿದ್ದನ್ನು ನೋಡಿದರೆ ಅಸಹ್ಯ ಅನಿಸುತ್ತದೆ.

ಮಹಾನ್ ತಂತ್ರಗಾರಿಕೆಯ ಯಡಿಯೂರಪ್ಪ ತನ್ನ ಪ್ರತಿಸ್ಪರ್ಧಿಯಾಗ ಹೊರಟ ಲಿಂಗವಂತ ಶೆಟ್ಟರ್‌ರನ್ನು ಬೊಮ್ಮಾಯಿಯಂತಹವರನ್ನ ಬೆಳೆಸಿ ಹತೋಟಿಯಲ್ಲಿಡಲು ನೋಡಿದರು. ತನ್ನ ಮಗ ಟಿಕೆಟ್ ಆಕಾಂಕ್ಷಿಯಲ್ಲ ಎಂದು ಹೇಳುತ್ತಲೇ ಆತನನ್ನು ನಿಲ್ಲಿಸಿ ಹಣವನ್ನ ನೀರಿನಂತೆ ಸುರಿದು ಗೆಲ್ಲಿಸಿಯೂ ಬಿಟ್ಟರು. ಕೇವಲ 'ಆಪ್ತೆ' ಎನ್ನುವ ಕಾರಣಕ್ಕೆ ಹಿರಿಯರನ್ನೆಲ್ಲ ಕಡೆಗಣಿಸಿ ಶೋಭಾಗೆ ಇಲ್ಲದ ಪ್ರಾಧಾನ್ಯತೆ ಕೊಟ್ಟರು. (ಸ್ವತಃ ಆರೆಸ್ಸೆಸ್ ನಾಯಕರು ಈ ಬಗ್ಗೆ ನೇರವಾಗಿ ಎಚ್ಚರ ನೀಡುವಷ್ಟರ ಮಟ್ಟಿಗೆ). ಮೊದಲೇ ಎಬಿವಿಪಿ ಕಾರ್ಯಕರ್ತೆಯಾಗಿ ಮಿಂಚಲು ಹಾತೊರೆಯುತ್ತಿದ್ದ ಶೋಭಾಗೆ ಇಷ್ಟೇ ಸಾಕಿತ್ತು,

ಮಾತುಮಾತಿಗೆ ಬಡಕುಟುಂಬದ ಹಿನ್ನೆಲೆ, ಸಮಾಜಸೇವೆ ಬಗ್ಗೆ ಮಾತಾಡುವ ಶೋಭಾ ತನ್ನೂರು ಚಾರ್ವಾಕವೂ ಸೇರಿದಂತೆ ಇಡೀ ಪುತ್ತೂರು ತಾಲ್ಲೂಕು (ಮುಖ್ಯವಾಗಿ ದುಡಿಯುವ ವರ್ಗ) ಚಿಕೂನ್‌ಗುನ್ಯಾ ರೋಗದಿಂದ ನರಳುವಾಗ ತನ್ನದೇ ಸರಕಾರವಿದ್ದರೂ ಕಿಂಚಿತ್ತೂ ಗಮನ ಹರಿಸಲಿಲ್ಲ. ಘೋಷಿಸಲ್ಪಟ್ಟ ಪ್ಯಾಕೇಜ್ ಮುಂಗಡ ಪತ್ರದಲ್ಲಿ ಪ್ರಸ್ತಾಪವಾಗಲೇ ಇಲ್ಲ, ಇದೇ ಕತೆ ಅಡಿಕೆಯ ಬೆಂಬಲ ಬೆಲೆಗೆ ಸಂಬಂಧಿಸಿ ಕೂಡ ಅನ್ವಯಿಸುತ್ತದೆ. ಇದು ಶೋಭಾರ ರೈತ-ಬಡಜನತೆಯ ಬಗೆಗಿನ ನೈಜ ಕಾಳಜಿ.



ನೆರೆಯಲ್ಲಿ ಮನೆ-ಮಠ-ಬೆಳೆಗಳನ್ನೆಲ್ಲಾ ಕಳೆದುಕೊಂಡು ಪರದಾಡುತ್ತಿರುವ ಬಡಜನರ ನೋವಿನ ಗಾಯದ ಮೇಲೆ ಬರೆ ಎಳೆಯುವಂತೆ ಸುಮಾರು 15 ದಿನಗಳ ಕಾಲ ರಾಜ್ಯದಲ್ಲಿ ಅಕ್ಷರಶಃ ಸರಕಾರವೇ ಇರಲಿಲ್ಲ. ಜನರೆಲ್ಲ ಇಲ್ಲಿ ಕುಡಿಯುವ ನೀರಿಗೆ ಪರದಾಡುತ್ತಿದ್ದರೆ, ಸ್ಥಳೀಯ ಶಾಸಕರು ಮಂತ್ರಿಗಳಾದಿಯಾಗಿ ಎಲ್ಲಾ ಹೈದರಾಬಾದಿನ ಐಷಾರಾಮಿ ಹೋಟೆಲ್‌ಗಳಲ್ಲಿದ್ದರೆ, ಮುಖ್ಯಮಂತ್ರಿ, ಪಕ್ಷಾಧ್ಯಕ್ಷರಾದಿಯಾಗಿ ಇತರರು ಡೆಲ್ಲಿಯಲ್ಲಿ ಸೆಟ್ಲ್ ಆಗಿದ್ದರು. ಇಂತಹ ಅರಾಜಕ ಸ್ಥಿತಿಗೆ ಅನೇಕ ಬಿಜೆಪಿ ನಾಯಕರೇ ಹೇಳುವಂತೆ ಶೋಭಾರ ಮೂಗು ತೂರಿಸುವ ಬುದ್ಧಿಯೇ ಕಾರಣ.

ಅವತ್ತು ಶ್ರೀಮಂತ ಮಂತ್ರಾಲಯ ಮುಳುಗಿದಾಗ ಸರಕಾರ ಘೋಷಿಸಿದ್ದು ದಿಢೀರ್ ಹತ್ತು ಕೋಟಿಯ ಪ್ಯಾಕೇಜ್ (ನಂತರದ್ದು ಬೇರೆ). ಆದರೆ ಮನೆ-ಮಠ-ಬೆಳೆ ಕಳಕೊಂಡ ರೈತರಿಗೆ ಈಗ ದೊರಕುತ್ತಿರುವುದು 1-2 ಸಾವಿರ ರೂಪಾಯಿಗಳು (ಅದೂ ಎಲ್ಲರಿಗೂ ಅಲ್ಲ). ನೆರೆಯಲ್ಲಿ ಕನಲಿದ ಬಡ ಜನರ ನೋವಿಗೆ ದುಃಖಿಸದ ಮುಖ್ಯಮಂತ್ರಿ ತನ್ನ ಆಪ್ತೆಯ ರಾಜೀನಾಮೆಯ ಕುರಿತು ಗದ್ಗದಿತರಾಗುತ್ತಾರೆ. ಇಂತಹವರಿಂದ ಆಳಿಸಿಕೊಳ್ಳುತ್ತಿರುವ ನಾವೇ ಪುಣ್ಯವಂತರು.

-ಶಶಿ ಪುತ್ತೂರು, ದ.ಕ

(ನಿಮ್ಮ ಅನಿಸಿಕೆ ಅಭಿಪ್ರಾಯಗಳನ್ನು ನುಡಿ/ಬರಹದಲ್ಲಿ lankesh70@rediffmail.comಗೆ ಕಳಿಸಬಹುದು)



ಹಳೇ 'ಸೋಮ'ನ ಪಾದವೇ ಗತಿ!



ಶಿವರಾಜ್‌ಕುಮಾರ್ ಅಭಿನಯದಲ್ಲಿ ರವಿಶ್ರೀವತ್ಸ ನಿರ್ದೇಶಿಸಬೇಕಿದ್ದ 'ಸಮ್ಮಿಶ್ರ ಮುತ್ತು' ಚಿತ್ರ ಆರಂಭಕ್ಕೆ ಮುನ್ನವೇ ಗೊಟಕ್ ಎಂದ ಮೇಲೆ ರವಿಶ್ರೀವತ್ಸ ಮತ್ತೆ 'ಸೋಮ'ನ ಪಾದಕ್ಕೆ ಶರಣು ಎಂದಿದ್ದಾನೆ. ತನ್ನ ಮೊದಲ ಚಿತ್ರ 'ಡೆಡ್ಲಿ ಸೋಮ'ನ ನಂತರ ಶ್ರೀವತ್ಸ ನಿರ್ದೇಶಿಸಿದ ಎಲ್ಲ ಚಿತ್ರಗಳೂ ಹರಹರ 'ಮಾದೇಶ' ಎಂದಿವೆ. ಹೀಗಾಗಿ ಶ್ರೀವತ್ಸ ಹೊಸರಾಗ ಹಾಡ್ತೀನಿ ಎಂದರೂ ಅದನ್ನು ಕೇಳುವ ತಾಳ್ಮೆಯನ್ನು ಯಾರೂ ಉಳಿಸಿಕೊಂಡಿಲ್ಲ. ಆದ್ದರಿಂದ 'ಡೆಡ್ಲಿ ಸೋಮ' ಚಿತ್ರದ ಎರಡನೇ ಭಾಗವನ್ನು ಶ್ರೀವತ್ಸ ಆರಂಭಿಸುತ್ತಾನಂತೆ. ಶ್ರೀವತ್ಸನ ಘನಘೋರ ನಿರ್ದೇಶನವನ್ನು ಕಂಡೂ ಕಂಡೂ ಜಾಕ್ ಮಂಜ ಎಂಬ ಅರೆಕಾಲಿಕ ನಿರ್ಮಾಪಕ, ಫುಲ್ ಟೈಂ ಫೈನಾನ್ಷಿಯರ್ ದುಡ್ಡು ಸುರಿಯಲು ಮುಂದಾಗಿದ್ದಾನೆ.

ಆದಿತ್ಯ ಎಂಬ ಫ್ಲಾಪ್ ಹೀರೋ, ಶ್ರೀವತ್ಸನೆಂಬ ತೋಪು ಡೈರೆಕ್ಟರು ಸೇರಿ ಹರಿಸುವ ರಕ್ತದ ಕೋಡಿಯಲ್ಲಿ ಜಾಕ್ ಮಂಜನ ಕಾಸು ಕೊಚ್ಚಿ ಹೋಗದಿರಲಿ...!

ಸಹೋದರರ ಸಿನಿ ಸವಾಲು!

ರೆಡ್ಡಿ ಸಹೋದರರು ರಾಜ್ಯ ರಾಜಕೀಯದಲ್ಲಿ ...ಮ್ಮ ಬೇಳೆಯನ್ನು ತುಂಬ ...ಣತನದಿಂದ ...ಯಿಸಿಕೊಳ್ಳುತ್ತಿದ್ದಾರೆ. ಅಷ್ಟೇ ಅಲ್ಲ ...ದರ ಎದುರಾಳಿ ...ಡಿಯೂರಪ್ಪನಿಗೆ ಈ ...ಹೋದರರ ಸವಾಲು ಒಂದು ...ಡ್ಡ ತಲೆನೋವಾಗಿದೆ.


ಸಹೋದರರ ಸವಾಲು ಬರೀ ...ಜಕೀಯರಂಗಕ್ಕೆ ಮಾತ್ರ ...ಮಿತವಾದದ್ದಲ್ಲ. ಕನ್ನಡ ...ರಂಗದಲ್ಲೂ ಅನೇಕ ...ಹೋದರರ ಜೋಡಿಗಳು ಇದೇ ...ಹ ತಮ್ಮ ಸಾರ್ವಭೌಮತ್ವವನ್ನು ...ರ್ಶಿಸಲು ಪ್ರಯತ್ನಿಸಿದ್ದುಂಟು. ...ಕ್ಕೆ ಜಗ್ಗೇಶ್-ಕೋಮಲ್ ...ಡಿ, ದರ್ಶನ್-ದಿನಕರ್ ಜೋಡಿ ...ತ್ತು ರಘು ದೀಕ್ಷಿತ್-ವಾಸು ...ತ್ ಜೋಡಿಗಳು ಚಿತ್ರರಂಗದಲ್ಲಿ ...ಮತ್ತು ಮಾಡುತ್ತಿವೆ.


...ಮುಂದಿನವಾರ ...ಶ್-ಕೋಮಲ್ ಜೋಡಿ ...ಯಕರಾಗಿ ನಟಿಸಲಿರುವ 'ಲಿಫ್ಟ್ ...ತ್ರ?' ಎಂಬ ಹೊಸ ಚಿತ್ರ ಮತ್ತು ...ನ್ ಅಭಿನಯದ ಆತನ ...ೋದರ ದಿನಕರ್ ನಿರ್ದೇಶನದ ...ಥಿ' ಚಿತ್ರ ...ಭವಾಗುತ್ತಿರುವುದರಿಂದ ಈ ...ೋದರರ ಸವಾಲುಗಳು ...ಾಯಿತು.


...ಾಗೇ ನೋಡಿದರೆ ...ಶ್-ಕೋಮಲ್ ಜೋಡಿ ...ಗಲೇ ಬಾಕ್ಸಾಫೀಸ್‌ನಲ್ಲಿ ...ಸಿದಷ್ಟು ಮಜಾ ನೀಡಿಲ್ಲ. ...ಮೇ ದಿನಕರ್-ದರ್ಶನ್ ...ಡಿ ಕೂಡ ನಿರೀಕ್ಷಿಸಿದಷ್ಟು ...ಲೇರಿಯನ್ನು ಗಲ್ಲಾಪೆಟ್ಟಿಗೆಯಲ್ಲಿ ...ಲ್ಲ. ಅದರೂ ಇಂತಹ ...ನೇಷನ್‌ಗಳ ಬಗ್ಗೆ ...ನಗರದ ಜನರಿಗೆ ಅದೇನೋ ... ಮತ್ತು ಆಕರ್ಷಣೆ. ಹೀಗಾಗಿ ... ಇಂತಹ ಜೋಡಿಯ ಮೇಲೆ ... ಕಟ್ಟುವುದು ನಿರ್ಮಾಪಕರ ...ಸವಾಗಿದೆ.


... ಹಿಂದೆ ಕನ್ನಡ ಚಿತ್ರರಂಗದಲ್ಲಿ ...ದರರ ಜೋಡಿಯಾಗಿ ಕ್ಲಿಕ್ ...ದರೆ ಅನಂತ್ ನಾಗ್-ಶಂಕರ್ ...ಜೋಡಿ ಮಾತ್ರ. ಈ ಜೋಡಿ ...ಯಲ್ ಮತ್ತು ಕಲಾತ್ಮಕ ...ಲ್ಲಿ ಮಾತ್ರವಲ್ಲ ಟಿವಿ ...ವಾಹಿಗಳಲ್ಲೂ ಮಿಂಚಿತ್ತು. ...ಹಾಕಿ, ರಾಜ್ಯ ...ಯದಲ್ಲೂ ಈ ಜೋಡಿ ... ಓಟದಿಂದ ಪ್ರಚಾರ ...ದಲ್ಲಿ ಭಾಗವಹಿಸಿ ಆ ..., ರಂಗು ಬರಿಸಿತ್ತು.

ಆದಾದನಂತರ ...ಕುಮಾರ್-ರಾಘವೇಂದ್ರ ...ಕುಮಾರ್ ತಮ್ಮ ವೃತ್ತಿ













ಸಹೋದರರ ಸವಾಲು ಬರೀ ರಾಜಕೀಯರಂಗಕ್ಕೆ ಮಾತ್ರ ಸೀಮಿತವಾದದ್ದಲ್ಲ. ಕನ್ನಡ ಚಿತ್ರರಂಗದಲ್ಲೂ ಅನೇಕ ಸಹೋದರರ ಜೋಡಿಗಳು ಇದೇ ತರಹ ತಮ್ಮ ಸಾರ್ವಭೌಮತ್ವವನ್ನು ಪ್ರದರ್ಶಿಸಲು ಪ್ರಯತ್ನಿಸಿದ್ದುಂಟು. ಸದ್ಯಕ್ಕೆ ಜಗ್ಗೇಶ್-ಕೋಮಲ್ ಜೋಡಿ, ದರ್ಶನ್-ದಿನಕರ್ ಜೋಡಿ ಮತ್ತು ರಘು ದೀಕ್ಷಿತ್-ವಾಸು ದೀಕ್ಷಿತ್ ಜೋಡಿಗಳು ಚಿತ್ರರಂಗದಲ್ಲಿ ಕರಾಮತ್ತು ಮಾಡುತ್ತಿವೆ.

ಜೀವನದ ಆರಂಭದ ದಿನಗಳಲ್ಲಿ ಒಂದೆರಡು ಚಿತ್ರಗಳಲ್ಲಿ ಜೊತೆಯಾಗಿ ಕಾಣಿಸಿಕೊಂಡರು. ಆದರೆ ಈ ಜೋಡಿ ಬಾಕ್ಸಾಫೀಸ್‌ನಲ್ಲಿ ಅಂತಹ 'ಹವಾ' ಸೃಷ್ಟಿಸದ ಕಾರಣ ಅನಂತರ ಮುಂದುವರೆಯಲೇ ಇಲ್ಲ. ಈಗ ಅದೇ ಗಾಂಧಿನಗರದ ನಿರ್ಮಾಪಕರು ಶಿವರಾಜ್‌ಕುಮಾರ್ ಮತ್ತು ಅವರ ಕಿರಿಯ ಸಹೋದರ ಪುನೀತ್ ರಾಜ್‌ಕುಮಾರ್‌ರನ್ನು ಕಲೆಹಾಕಿ ಒಂದು ಚಿತ್ರ ಮಾಡಲು ಹೆಣಗಾಡುತ್ತಿದ್ದಾರೆಂಬುದು ಬೇರೆ ವಿಷಯ.

ಖಳನಾಯಕ ಶಕ್ತಿಪ್ರಸಾದ್ ಮಕ್ಕಳಾದ ಅರ್ಜುನ್ ಸರ್ಜಾ ಮತ್ತು ಕಿಶೋರ್ ಸರ್ಜಾ ಜೋಡಿ ಮೇಲೆ ಗಾಂಧಿನಗರದವರಿಗೆ ಭಾರೀ ನಿರೀಕ್ಷೆಯಿತ್ತು. ಆದರೆ ಅರ್ಜುನ್ ಸರ್ಜಾ ವೈಯಕ್ತಿಕವಾಗಿ ಭಾರೀ ಎತ್ತರಕ್ಕೆ ಬೆಳೆದರೂ ಕಿಶೋರ್ ಮಾತ್ರ ಮಿನುಗಲೇ ಇಲ್ಲ.

ಈ ಮಧ್ಯೆ ಕ್ರೇಜಿಸ್ಟಾರ್ ರವಿಚಂದ್ರನ್ ಮತ್ತು ಅವರ ಸಹೋದರ ಬಾಲಾಜಿ ನಟಿಸಿದ 'ಅಹಂ ಪ್ರೇಮಾಸ್ಮಿ' ಚಿತ್ರ ಖಂಡಿತವಾಗಿಯೂ ಸೂಪರ್‌ಹಿಟ್ ಆಗುತ್ತದೆ ಎಂದೇ ಎಲ್ಲರೂ ಭಾವಿಸಿದ್ದರು. ಆದರೆ ಎಲ್ಲಾ ಸಹೋದರರಂತೆ ಈ ಜೋಡಿಯೂ ಬಾಕ್ಸಾಫೀಸ್‌ನಲ್ಲಿ ಸೋಲುಕಂಡಿತು.

ಇದಕ್ಕಿಂತ ಹಿಂದೆ ಮುಸುರಿ ಮಕ್ಕಳಾದ ಗುರುದತ್ ಮತ್ತು ಜಯಸಿಂಹ ಒಂದಿಷ್ಟು ಚಿತ್ರಗಳಿಗೆ ಜೊತೆಯಾಗಿ ಹೆಗಲಿಗೆ ಹೆಗಲು ನೀಡಿದ್ದರಾದರೂ ಅವರೂ ಏನನ್ನೂ ಸಾಧಿಸಲಾಗಲಿಲ್ಲ. ಆರ್.ಎನ್.ಜಯಗೋಪಾಲ್ ಮತ್ತು ಅವರ ಸಹೋದರ ಸುದರ್ಶನ್ ಅನೇಕ ಚಿತ್ರಗಳಲ್ಲಿ ಜೋಡಿಯಾಗಿ ಬಂದುಹೋದರೇ ವಿನಃ ಸುದ್ದಿಯೇನೂ ಮಾಡಲಿಲ್ಲ. ಅಂತಹ ಸುದ್ದಿ ಮಾಡದ ಜೋಡಿಗೆ ಸೇರುವ ಮತ್ತೊಂದು ಜೋಡಿಯೆಂದರೆ ನಿರ್ದೇಶಕ ಕೆ.ವಿ.ಜಯರಾಮ್ ಮತ್ತು ಕೆ.ವಿ.ರಾಜು ಜೋಡಿ.

ಮಾಲಾಶ್ರೀ ತನ್ನ ಜನಪ್ರಿಯತೆಯ ಉತ್ತುಂಗದಲ್ಲಿದ್ದಾಗ ಮಹಿಳೆಯರು ಪುರುಷರಿಗಿಂತ ಕಡಿಮೆ ಇಲ್ಲ ಎಂದು ತನ್ನ ಸಹೋದರಿ ಶುಭಶ್ರೀಯನ್ನು ಚಿತ್ರರಂಗಕ್ಕೆ ಕರೆದುಕೊಂಡು ಬಂದಿದ್ದಳು.





ಶುಭಶ್ರೀಯ ಆಗಮನದಿಂದ ಗಾಂಧಿನಗರದ ನಿರ್ಮಾಪಕರು ಪುಳಕಿತಗೊಂಡರಾದರೂ ಎರಡೇ ಚಿತ್ರಕ್ಕೆ ಆಕೆ ಗಾಂಧಿನಗರದಿಂದ ನಾಪತ್ತೆಯಾದಳು. ಅಲ್ಲಿಗೆ ಕನ್ನಡ ಚಿತ್ರರಂಗದ ಮೊದಲ ಸಹೋದರಿಯರ ಸವಾಲು ಆರಂಭದಲ್ಲೇ ಕಮರಿಹೋಯಿತು.






ಈಗ ಮಾಲಾಶ್ರೀ ತರಹವೇ ಕನ್ನಡ ಚಿತ್ರರಂಗದಲ್ಲಿ ಗಟ್ಟಿಯಾಗಿ ಠಿಕಾಣಿ ಹೂಡಿರುವ ಪೂಜಾ ಗಾಂಧಿ ಕೂಡಾ ತಾನೇಕೆ ತನ್ನ ಜನಪ್ರಿಯತೆಯ ಆಧಾರದ ಮೇಲೆ ಸಹೋದರಿ ರಾಧಿಕಾಳನ್ನು ನಾಯಕಿ ಮಾಡಬಾರದು? ಎಂದು ಮುಂದಾಗಿದ್ದಾಳೆ. ಅದರ ಫಲವೇ ಹದಿನಾರಕ್ಕೆ ಕಾಲಿಡುವ ಮುನ್ನವೇ ರಾಧಿಕಾ ತಾರೆಯಾದದ್ದು. 'ಚಿಕ್ಕಮಗಳೂರ ಚಿಕ್ಕಮಲ್ಲಿಗೆ' ಎಂಬ ಚಿತ್ರದಲ್ಲಿ ಸ್ವತಂತ್ರ ನಾಯಕಿಯಾಗಿ ರಾಧಿಕಾ ಕಾಣಿಸಿಕೊಂಡಳು. ಅನಂತರ 'ಕಲಾಕಾರ್' ಚಿತ್ರದಲ್ಲೂ ನಾಯಕಿಯಾದಳು. ಈ ಎರಡೂ ಚಿತ್ರ ಬಾಕ್ಸಾಫೀಸ್‌ನಲ್ಲಿ ಸೋತವು. ಅಲ್ಲಿಗೆ ರಾಧಿಕಾಳ ವೃತ್ತಿಜೀವನ ಮುಗಿದೇ ಹೋಯಿತು ಎನ್ನುವಷ್ಟರಲ್ಲಿ ಇದೀಗ ರಾಧಿಕಾ ಮತ್ತು ಪೂಜಾ 'ಹರಿಕಥೆ' ಚಿತ್ರದಲ್ಲಿ ನಾಯಕಿಯರಾಗಿ ಕಾಣಿಸಿಕೊಂಡಿದ್ದಾರೆ. 'ಹರಿಕಥೆ'ಯ ಈ ಸಹೋದರಿಯರ ಜೋಡಿ ಪ್ರೇಕ್ಷಕರನ್ನು ಮೋಡಿ ಮಾಡುತ್ತದೋ? ಇಲ್ಲವೋ? ಎಂಬುದನ್ನು ನೋಡಬೇಕು.














ಸಂಗೀತ ನಿರ್ದೇಶಕರಾದ ರಘು ದೀಕ್ಷಿತ್ ಮತ್ತು ಅವರ ಸಹೋದರ ವಾಸು ದೀಕ್ಷಿತ್ ಜೊತೆಯಾಗಿ ಒಂದೇ ಚಿತ್ರಕ್ಕೆ ಕೆಲಸ ಮಾಡಿಲ್ಲ. ಆದರೆ ಮೊದಲೇ ಹೇಳಿದಂತೆ ಇಂತಹ ಕಾಂಬಿನೇಷನ್‌ಗಳಲ್ಲೇ ಶುಭ ಮತ್ತು ಯಶಸ್ಸು ಕಾಣುವ ಗಾಂಧಿನಗರದ ಜನ ಈಗ ಮೈಸೂರಿನ ಈ ಸಹೋದರರನ್ನು ಒಂದೇ ಚಿತ್ರದಲ್ಲಿ ಹಾಕಲು ತೆರೆಮರೆಯ ಕಸರತ್ತು ಮಾಡುತ್ತಿದ್ದಾರೆ.

ಚನ್ನೇಗೌಡರ 'ಚಿನ್ನ'ದಂತಹ ಇಬ್ಬರು ಮಕ್ಕಳಾದ ವಿಜಯರಾಘವೇಂದ್ರ ಮತ್ತು ಮುರುಳಿಯ ಕಾಲ್‌ಶೀಟ್‌ಗಾಗಿ ಅನೇಕ ನಿರ್ಮಾಪಕರು ಭಾರೀ ಪ್ರಯತ್ನ ಮಾಡಿದ್ದರು. ಅವರಿಬ್ಬರ ಕಾಲ್‌ಶೀಟ್ ಅನ್ನು ಬೇರೆಯವರಿಗೆ ಕೊಡುವ ಬದಲು ಅವರನ್ನೇ ಹಾಕಿ ತಾನೇ ಚಿತ್ರ ಮಾಡಿ ಹಣವನ್ನು ಕೊಳ್ಳೆ ಹೊಡೆಯಬಹುದೆಂದು ಚನ್ನೇಗೌಡರು ಕನಸು ಕಂಡರು. ಹಾಗಂತ ಅವರು ಗಾಂಧಿನಗರದಲ್ಲಿ ಡಂಗೂರ ಬಾರಿಸಿದ್ದೂ ಉಂಟು. ಕೊನೆಗೆ ಅದ್ಯಾಗೋ ಸಾ.ರಾ.ಗೋವಿಂದು ಒತ್ತಾಯಕ್ಕೆ ಮಣಿದು ಇಬ್ಬರು ಮಕ್ಕಳ ಕಾಲ್‌ಶೀಟ್ ಅನ್ನು ಮನಸ್ಸಿಲ್ಲದ ಮನಸ್ಸಿನಿಂದ ಕೊಟ್ಟುಬಿಟ್ಟರು. 'ಮಿಂಚಿನ ಓಟ' ಎಂಬ ಚಿತ್ರದಲ್ಲಿ ಇಬ್ಬರೂ ಭಾರೀ ಸುದ್ದಿ ಮಾಡುತ್ತಾ ಕಾಣಿಸಿಕೊಂಡರು. ಆದರೆ ಚಿತ್ರ ಬಿಡುಗಡೆಯಾದಾಗ ಗೋವಿಂದುಗೆ ಚಿಕ್ಕಾಸೂ ಸಿಗಲಿಲ್ಲ. ಅಲ್ಲಿಗೆ ಈ ಯುವ ಸಹೋದರರ ಜೋಡಿಯ ಓಟವೂ ಮುಂದುವರೆಯಲಿಲ್ಲ.

ಇದೀಗ ಮೊನ್ನೆ ಮೊನ್ನೆ ಜಗ್ಗೇಶ್ ಪುತ್ರ ಗುರುರಾಜ್ 'ಗಿಲ್ಲಿ' ಚಿತ್ರದ ಮೂಲಕ ನಾಯಕನಾಗಿ ಕಾಲಿಟ್ಟಾಗ ಅದೇ ಕಥೆ ನಡೆಯಿತು. ಗುರುರಾಜ್ ಜೊತೆ ಆತನ ಸಹೋದರ ಯತಿರಾಜ್ ಕೂಡಾ ಆ ಚಿತ್ರದಲ್ಲಿ ನಟಿಸಿದ್ದ. ಯತಿರಾಜ್ ನಟಿಸುವುದನ್ನು ಚಿತ್ರತಂಡದವರು ಗೌಪ್ಯವಾಗಿಟ್ಟು ಅದನ್ನು ಪ್ರೇಕ್ಷಕರಿಗೆ ಸರ್‌ಪ್ರೈಸ್ ಪ್ಯಾಕೇಜ್ ತರಹ ನೀಡಲು ನಿರ್ಧರಿಸಿದರು. ಆದರೆ ಯತಿರಾಜ್ 'ಗಿಲ್ಲಿ' ಚಿತ್ರದಲ್ಲಿ ನಟಿಸಿದ್ದಾನೆ ಎಂದು ಗೊತ್ತಾಗುವಷ್ಟರಲ್ಲಿ ಆ ಚಿತ್ರ ಥಿಯೇಟರ್‌ನಿಂದ ಎತ್ತಂಗಡಿಯಾಗಿತ್ತು. ಇದು ಆತನ ದುರಾದೃಷ್ಟವೋ, ಪ್ರೇಕ್ಷಕರ ಅದೃಷ್ಟವೋ ಎಂಬುದು ಗೊತ್ತಿಲ್ಲ.

ರೆಡ್ಡಿ ಬ್ರದರ್ಸ್ ಇತ್ತೀಚಿಗೆ ರಾಜಕೀಯದಲ್ಲಿ ದಿನದಿಂದ ದಿನಕ್ಕೆ ಹೆಚ್ಚು ಸುದ್ದಿಯಲ್ಲಿರುವುದರಿಂದ ಈ ಬಣ್ಣದಾಟದ ಕ್ಷೇತ್ರದಲ್ಲಿ ಸಹೋದರರ ಆಟಗಳು ಒಂದೊಂದೇ ನೆನಪಾದವು ಅಷ್ಟೇ.

ಶೆಣೈ

Regd.No.KA/RNP/BGS/2036/2008-10 Posted at : Basavanagudi, B'lore-4. R B P LANKESH, Kannada Weekly Price Rs. 12/- 02-12-2009 RNI No. KARKAN2005/14



ನೀತೂ ಐಟಂ

ಆದ್ಯಾವ ಗಳಿಗೆಯಲ್ಲಿ ನಟಿ ನೀತೂ 'ಮನಸಾರೆ' ಚಿತ್ರದ ಐಟಂ ಸಾಂಗ್‌ನಲ್ಲಿ ಕುಣಿದಳೋ? ಆ ನಂತರ ಆಕೆಯನ್ನು ಹುಡುಕಿಕೊಂಡು ಬರುವ ಎಲ್ಲರೂ ಐಟಂ ಸಾಂಗ್ ಆಫರನ್ನೇ ನೀಡುತ್ತಿದ್ದಾರಂತೆ.

ಈ ವಾರ ಬಿಡುಗಡೆಯಾಗುತ್ತಿರುವ 'ದೇವ್ರು' ಚಿತ್ರದಲ್ಲೂ ಐಟಂ ಸಾಂಗ್ ಒಂದರಲ್ಲಿ ಕುಣಿಯಲು ನಿರ್ದೇಶಕ ಸಾಧು ಕೋಕಿಲಾ ಸಹಾ ನೀತೂಳನ್ನು ಕರೆದಿದ್ದರಂತೆ. ಆದರೆ ನೀತೂ ಮಾತ್ರ "ಕೊಟ್ಟರೆ ಹೀರೋಯಿನ್ ಪಾರ್ಟು ಕೊಡಿ, ಆದರೆ ಐಟಂ ಸಾಂಗ್ ಬೇಡ" ಎಂದಳಂತೆ.

ಎಲ್ಲರೂ ಹೀಗೆ ಐಟಂ ಹಾಡುಗಳಿಗೇ ಕರೆಯುತ್ತಿರುವುದರಿಂದ ನೀತೂ ಕೂಡ ಶ್ಯಾನೆ ಬೇಜಾರ್ ಮಾಡ್ಕಂಡಿದ್ದಾಳೆ. ಆದರೆ ಸಿನಿಮಾ ಮಂದಿ ತನಗೆ ನಾಯಕಿಪಾತ್ರ ಕೊಡ್ತಾ ಇಲ್ಲ ಎಂದು ಮುನಿಸಿಕೊಳ್ಳದೆ, ಇವರೆಲ್ಲಾ ಯಾಕೆ ಹೀಗೆ ತನ್ನನ್ನು ಐಟಂ ಸಾಂಗ್‌ಗೇ ಕರೆಯುತ್ತಾರೆ ಎಂಬುದರ ಬಗ್ಗೆ ಚಿಂತಿಸಿ ಈಗ ಶ್ಯಾನೆ ಉಬ್ಬಿಕೊಂಡಿರುವ ತನ್ನ ದೇಹವನ್ನು ಕರಗಿಸುವುದು ನೀತೂಳ ಮುಂದಿರುವ ಸದ್ಯದ ತುರ್ತು.

ಇಲ್ಲದಿದ್ದರೆ 'ಬಂಗಾರಿ ಬಾರೇ ನೀ ಬುಲ್ ಬುಲ್...' ಅಂಥಾ ಮತ್ತೆ ಐಟಮ್ಮೇ ಗಟ್ಟಿ...!

ರೈ ಕನಸಿನ ಪತ್ರಗಳು...



ಮುಂದಿನ ವಾರ ಪ್ರಕಾಶ್ ರೈ ಚೊಚ್ಚಲ ನಿರ್ದೇಶನದ 'ನಾನೂ... ನನ್ನ ಕನಸೂ' ಚಿತ್ರ ಸೆಟ್ಟೇರಲಿದೆ. ಯಾವಾಗಲೂ ಹೊಸತನಕ್ಕಾಗಿ ತುಡಿಯುವ ರೈ ಈ ಚಿತ್ರವನ್ನು ಹೇಗೆ ನಿರ್ದೇಶಿಸುತ್ತಾರೆ, ನಿರ್ಮಿಸುತ್ತಾರೆ ಎಂಬಿತ್ಯಾದಿ ವಿಷಯಗಳ ಬಗ್ಗೆ ಎಲ್ಲರಿಗೂ ಕುತೂಹಲವಿದೆ.

ಮುಹೂರ್ತ, ಪೂಜೆ ಸಮಾರಂಭಗಳಲ್ಲಿ ಅಷ್ಟೇನೂ ನಂಬಿಕೆಯಿಲ್ಲದ ರೈ ನವೆಂಬರ್ 21, ಶನಿವಾರದಂದು ಚಿತ್ರದ ಆರಂಭದ ಶಾಟ್ಸ್‌ಗಳನ್ನು ತೆಗೆಯಲಿದ್ದಾರೆ. ಸಾಧಾರಣವಾಗಿ ಶನಿವಾರದಂದು ನಮ್ಮ ಗಾಂಧಿನಗರದ ಜನ ಚಿತ್ರವನ್ನು ಆರಂಭಿಸುವುದಿಲ್ಲ ಎಂಬುದು ಇಲ್ಲಿ ಗಮನಿಸುವಂತಹದ್ದು. ಹಾಗೆಯೇ ಬೆಳಗ್ಗಿನ ಸಮಯದ ಬದಲು ರೈ ರಾತ್ರಿ ಹೊತ್ತು ಚಿತ್ರ ಆರಂಭ ಮಾಡಲಿದ್ದಾರೆ.

ಮತ್ತೊಂದು ವಿಶೇಷವೆಂದರೆ ಅಂದು ನಾಲ್ಕು ಜನ ಮಿತ್ರರು ತಮ್ಮ ಹೆಣ್ಣುಮಕ್ಕಳಿಗೆ ಬರೆದ ಪತ್ರವನ್ನು ಓದುವ ಮುಖಾಂತರ ಆ ಚಿತ್ರದ ಆರಂಭೋತ್ಸವವನ್ನು ಮಾಡಲಿದ್ದಾರೆ! ಅಂದಹಾಗೆ ಅಂದು ಪತ್ರ ಓದುವ ನಾಲ್ಕು ಹೆಣ್ಣು ಮಕ್ಕಳ ತಂದೆಯಂದಿರು ಯಾರೆಂದರೆ ರಮೇಶ್ ಅರವಿಂದ್, ರವಿ ಬೆಳಗೆರೆ, ರವಿಚಂದ್ರನ್ ಮತ್ತು ಪ್ರಕಾಶ್ ರೈ.

ಅದೇನೇ ಇರಲಿ ಎಲ್ಲರ ನಿರೀಕ್ಷೆಯನ್ನು ಮೀರಿ ವಿಭಿನ್ನ ರೀತಿಯಲ್ಲಿ ಚಿತ್ರ ಆರಂಭಿಸುತ್ತಿರುವ ರೈ ತನ್ನ ಪ್ರತಿಭೆ ಮತ್ತು ಚಾಕಚಕ್ಯತೆಯನ್ನು ಚಿತ್ರದ ನಿರೂಪಣೆಯಲ್ಲೂ ತೋರಿಸಿ ಎಲ್ಲರ ಮನ ಗೆಲ್ಲುವಂತಾಗಲಿ...

ದೇಶಪಾಂಡೆ 'ಷಟ್‌ಪಥ!'



'ಆರು ಕೋಟಿ ಕನ್ನಡಿಗರಿಗಾಗಿ ಆರು ಕಥೆಗಳ, ಆರು ಜನರ ನಿರ್ದೇಶನದಲ್ಲಿ ಒಂದು ಸಮಗ್ರಚಿತ್ರ' ಎಂದು 'ಆರು'ಗಳ ಲೆಕ್ಕಾಚಾರದಲ್ಲಿ ನಿರ್ಮಾಣವಾಗುತ್ತಿರುವ ಚಿತ್ರದ ಹೆಸರು 'ಷಟ್‌ಪಥ'!

ಸ್ಟಾರ್ ಕ್ರಿಯೇಟರ್ಸ್‌ನ ಗುರು ದೇಶಪಾಂಡೆ ನಿರ್ಮಾಣದ 'ಷಟ್‌ಪಥ' ಚಿತ್ರ ಹಲವಾರು ವಿಶೇಷತೆಗಳಿಂದ ಗಾಂಧಿನಗರದ ಗಮನ ಸೆಳೆದಿದೆ. ಈ ಚಿತ್ರದಲ್ಲಿ 20 ನಿಮಿಷಗಳ ಒಟ್ಟು ಆರು ಬೇರೆ ಬೇರೆ ಕಥೆಯುಳ್ಳ – ಅಂದರೆ ಕಾಮಿಡಿ, ಆಕ್ಷನ್, ಸೆಂಟಿಮೆಂಟ್ ಹೀಗೆ ಎಲ್ಲ ಬಗೆಯ – ಸಿನಿಮಾಗಳು ಇರುತ್ತವಂತೆ.

ಕನ್ನಡ ಚಿತ್ರರಂಗದಲ್ಲಿ ಇಂಥ ಪ್ರಯತ್ನ ಎಪ್ಪತ್ತರ ದಶಕದಲ್ಲೇ ನಡೆದುಹೋಗಿತ್ತು. ಪುಟ್ಟಣ್ಣ ಕಣಗಾಲ್ ನಿರ್ದೇಶನದ 'ಕಥಾ ಸಂಗಮ' ಚಿತ್ರದಲ್ಲಿ 'ಹಂಗು, ಅಪ್ಸರೆ, ಮುನಿತಾಯಿ' ಎಂಬ ಮೂರು ಕಥೆಗಳು ಒಂದೇ ಚಿತ್ರದಲ್ಲಿ ಅಡಕಗೊಂಡಿದ್ದವು.

ಇತ್ತೀಚಿಗೆ ಎರಡೂವರೆ ಗಂಟೆಯ ಒಂದೇ ಕಥೆಯ ಸಿನಿಮಾವನ್ನು ನೋಡುವ ತಾಳ್ಮೆ ಪ್ರೇಕ್ಷಕರಲ್ಲಿ ಕಡಿಮೆಯಾಗುತ್ತಿರುವುದರಿಂದ ಈ ರೀತಿಯ ಪ್ರಯತ್ನದಿಂದ ಒಂದಷ್ಟು ಪ್ರಯೋಜನವಾಗಬಹುದು ಎಂಬುದು ಗುರು ದೇಶಪಾಂಡೆಯ ಲೆಕ್ಕಾಚಾರ.



ಮೊನ್ನೆಮೊನ್ನೆಯಷ್ಟೆ 18 ಗಂಟೆಗಳಲ್ಲಿ ಚಿತ್ರೀಕರಣಗೊಂಡು ದಾಖಲೆ ನಿರ್ಮಿಸಿದ 'ಸುಗ್ರೀವ' ಎಂಬ ಒಂದೇ ಸಿನಿಮಾವನ್ನು ಹತ್ತು ಜನ ನಿರ್ದೇಶಕರು ಡೈರೆಕ್ಟ್ ಮಾಡಿದ್ದರು. ಆದರೆ 'ಷಟ್‌ಪಥ' ಚಿತ್ರಗುಚ್ಛದಲ್ಲಿರುವ ಆರು ವಿಭಿನ್ನ ಕತೆಗಳನ್ನು ಆಯಾ ನಿರ್ದೇಶಕರೇ ಬರೆದು ನಿರ್ದೇಶಿಸುತ್ತಿದ್ದಾರೆ.

ಈಗಾಗಲೇ ಕನ್ನಡ ಚಿತ್ರರಂಗದಲ್ಲಿ ಹೆಸರು ಮಾಡಿರುವ ನಾಲ್ಕು ಜನ ಹಾಗೂ ಕಿರುತೆರೆಯ ಇಬ್ಬರು ನಿರ್ದೇಶಕರು 'ಷಟ್‌ಪಥ'ದ ರೂವಾರಿಗಳಾಗಿದ್ದಾರೆ. ಆದರೆ ಅವರು ಯಾರ್‍ಯಾರು ಎಂಬುದನ್ನು ಮಾತ್ರ ಗುರು ದೇಶಪಾಂಡೆ ಇನ್ನೂ ಗೌಪ್ಯವಾಗಿಟ್ಟಿದ್ದಾರೆ.

ಈ ಚಿತ್ರದಲ್ಲಿ ಬರುವ ನಾಯಕ ಮತ್ತು ನಾಯಕಿಯರು ಮಾತ್ರ ಹೊಸಬರಾಗಿದ್ದು ಅವರೆಲ್ಲ ದೇಶಪಾಂಡೆ ನಡೆಸುವ ಚಲನಚಿತ್ರ 'ಸ್ಟಾರ್ ಕ್ರಿಯೇಟರ್ಸ್' ಕಲಿಕಾ ಸಂಸ್ಥೆಯಲ್ಲಿ ತರಬೇತಿ ಪಡೆದವರೇ ಆಗಿದ್ದಾರೆ. "ಕನ್ನಡದಲ್ಲಿ ಹಲವಾರು ಜನ ಯುವ ನಿರ್ದೇಶಕರು, ಕಥೆಗಾರರು, ಕಲಾವಿದರು ಅವಕಾಶಗಳಿಲ್ಲದೇ ಕೊರಗುತ್ತಿದ್ದಾರೆ. ಹೀಗೆ ಶಾರ್ಟ್ ಸಿನಿಮಾಗಳನ್ನು ಮಾಡಿದರೆ ಏಕಕಾಲಕ್ಕೆ ಹಲವಾರು ಜನಕ್ಕೆ ಅವಕಾಶ ನೀಡಬಹುದು" ಎಂಬುದು ಗುರು ದೇಶಪಾಂಡೆಯ ಪ್ಲಾನು.



ಸ್ವಯಂವರ
ಶರ್ಮಿಳಾ ಮಾಂಡ್ರೆ

ಸೂರಿಗೆ ಪುನೀತ್ ಯೋಗ!




ಪುನೀತ್ ರಾಜ್‌ಕುಮಾರ್ ನಟಿಸಲಿರುವ ಹೊಸ ಚಿತ್ರದ ಬಿಸಿಬಿಸಿ ಸುದ್ದಿ ಇದೀಗ ಕೇಳಿಬಂದಿದೆ. ಚಿತ್ರದ ಹೆಸರು 'ಜಾಕಿ'. ಸೂರಿ ಈ ಚಿತ್ರದ ನಿರ್ದೇಶಕ. ಹರಿಕೃಷ್ಣ ಸಂಗೀತದ ಸಾರಥ್ಯವನ್ನು ವಹಿಸಿದ್ದಾರೆ. ಇದು ಗಾಂಧಿನಗರದ ಹೆಡ್ಡಾಫೀಸ್ ಆದ ವಜ್ರೇಶ್ವರಿ ಸಂಸ್ಥೆಯ ಕಾಣಿಕೆ. ವಿಶೇಷವೆಂದರೆ ಎಷ್ಟೋ ವರ್ಷದ ನಂತರ ಪೂರ್ಣಿಮಾ ಎಂಟರ್‌ಪ್ರೈಸಸ್ ಹೆಸರಲ್ಲಿ ಈ ಚಿತ್ರ ತೆರೆ ಕಾಣುತ್ತಿದೆ.

ಸದ್ಯಕ್ಕೆ ಯೋಗರಾಜ್ ಭಟ್ಟರ ನಂತರ ಸ್ಟಾರ್ ವ್ಯಾಲ್ಯೂ ಹೊಂದಿರುವ ನಿರ್ದೇಶಕ ಅನಿಸಿರುವ ಸೂರಿಗೆ ಈ ಚಿತ್ರ ದೊರಕಿರುವ ಬಗ್ಗೆ ಗಾಂಧಿನಗರದವರು ಅಚ್ಚರಿ ವ್ಯಕ್ತಪಡಿಸುತ್ತಿದ್ದಾರೆ. ವಾಸ್ತವವಾಗಿ ಸೂರಿಗಿಂತ ಮೊದಲು ಯೋಗರಾಜ್ ಭಟ್ ನಿರ್ದೇಶನದ ಚಿತ್ರ ಸೆಟ್ಟೇರಬಹುದೆಂದೇ ಎಲ್ಲರೂ ನಿರೀಕ್ಷಿಸಿದ್ದರು. ಈ ಮಧ್ಯೆ 'ನಾಡೋದಿಗಳ್' ಎಂಬ ಚಿತ್ರದ ಕನ್ನಡ ಅವತರಣಿಕೆಯಲ್ಲಿ ಪುನೀತ್ ನಟಿಸಬೇಕಾಗಿತ್ತು. ಅದು ಕೂಡಾ ಅನಿರ್ದಿಷ್ಟಾವಧಿ ಕಾಲ ಮುಂದೂಡಲ್ಪಟ್ಟಿದೆ.

ಐತಲಕ್ಕಡಿ ರವಿಚಂದ್ರನ್!

ಕ್ರೇಜಿಸ್ಟಾರ್ ರವಿಚಂದ್ರನ್ ಅವರನ್ನು ಗಿಟ್ಟಿಸಿಕೊಳ್ಳುವುದರಲ್ಲಿ ಕೊನೆಗೂ 'ಐತಲಕ್ಕಡಿ' ತಂಡ ಯಶಸ್ವಿಯಾಗಿದೆ. ಛಾಯಾಗ್ರಾಹಕ ಜೆ.ಜೆ. ಕೃಷ್ಣ ನಿರ್ದೇಶಿಸುತ್ತಿರುವ 'ಐತಲಕ್ಕಡಿ' ಚಿತ್ರ ಮುಹೂರ್ತಕ್ಕೆ ಮೊದಲೇ ಭಾರೀ ಸುದ್ದಿ ಮಾಡಿತ್ತು.



ಈ ಚಿತ್ರದಲ್ಲಿ ರವಿಚಂದ್ರನ್ ಸೇರಿದಂತೆ ನೂರೈವತ್ತಕ್ಕೂ ಹೆಚ್ಚು ಕಲಾವಿದರು ನಟಿಸಲಿದ್ದಾರೆ ಎಂದು ಪ್ರಚಾರ ಮಾಡಲಾಗಿತ್ತು. ಆದರೆ ಚಿತ್ರತಂಡದ ಯಾವುದೇ ವ್ಯಕ್ತಿ ತನ್ನನ್ನು ಭೇಟಿಯಾಗಿಲ್ಲ ಎಂದು ಹೇಳಿದ ರವಿಚಂದ್ರನ್ ತಾವು ಆ ಚಿತ್ರದಲ್ಲಿ ನಟಿಸುವ ಸುದ್ದಿಯನ್ನು ನಿರಾಕರಿಸಿದ್ದರು.

ಆದರೆ ಪಟ್ಟು ಹಿಡಿದ 'ಐತಲಕ್ಕಡಿ' ತಂಡ ಕಾಡಿಬೇಡಿ ಕೊನೆಗೂ ರವಿಚಂದ್ರನ್ ಅವರ ಕಾಲ್‌ಶೀಟ್ ಪಡೆದಿದೆ. ಕನಸಿನ ಒಂದು ಹಾಡಿನಲ್ಲಿ ರವಿಚಂದ್ರನ್ ನಾಯಕಿ ನೀತು ಜೊತೆ ಕಾಣಿಸಿಕೊಂಡಿದ್ದಾರೆ. ಕ್ರೇಜಿಸ್ಟಾರ್ ಗೆಸ್ಟ್ ಅಪಿಯರೆನ್ಸ್‌ನಲ್ಲಿ ಕಾಣಿಸಿಕೊಳ್ಳುವುದು ಬಹಳ ಅಪರೂಪ. ಆ ಕಾರಣದಿಂದ ಇದೊಂದು ಅಪರೂಪದ ಬೆಳವಣಿಗೆ ಮತ್ತು ಸುದ್ದಿ. ಆದರೆ ಈ ಹಿಂದೆ ಅನೇಕ ದೊಡ್ಡ ಬ್ಯಾನರ್‌ಗಳ ಆಹ್ವಾನವನ್ನು ತಿರಸ್ಕರಿಸಿದ ರವಿಚಂದ್ರನ್ ಈ ಚಿತ್ರವನ್ನು ಹೇಗೆ ಒಪ್ಪಿಕೊಂಡರು ಎಂಬುದೇ ಈಗ ಗಾಂಧಿನಗರದವರನ್ನು ಕಾಡುತ್ತಿದೆ!



ಅಬಕಾರಿ ರಕ್ಷಕರ ನೇಮಕಾತಿ
Excise Inspector Competitive Examination
ಸ್ಪರ್ಧಾತ್ಮಕ ಪರೀಕ್ಷಾ ಪುಸ್ತಕ
ಕನ್ನಡ ಮತ್ತು ಇಂಗ್ಲಿಷ್ ಭಾಷೆಯಲ್ಲಿದೆ
ಬೆಲೆ 200/-
ಗೌರಿ
ಪ್ರಕಾಶನದ ಕೊಡುಗೆ
ಮಾರುಕಟ್ಟೆಯಲ್ಲಿ ಲಭ್ಯ

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, ...